ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 12 ಮಂಗಳವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 323 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಅಶೋಕಪುರಂನಲ್ಲಿ ಕೆ.ಶಿವರಾಮ್ ಸ್ಮರಣೆ



ಮೈಸೂರು,ಮಾ.11–ಮೈಸೂರಿನ ಅಶೋಕಪುರಂನ ದೊಡ್ಡಗರಡಿ ವತಿಯಿಂದ ನಟ, ಐಎಎಸ್ ಅಧಿಕಾರಿ ಕೆ.ಶಿವರಾಮ್ ಅವರ ಪುಣ್ಯಸ್ಮರಣೆ ಮಾಡಲಾಯಿತು.

ಮಾಜಿ ಮೇಯರ್ ಪುರುಷೋತ್ತಮ್, ಶಿವರಾಮ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಎರಡು ನಿಮಿಷಗಳ ಕಾಲ ಮೌನಾಚರಣೆ ಮಾಡಿದರು. ಈ ವೇಳೆ ಅಶೋಕಪುರಂ ದೊಡ್ಡಗರಡಿ ಸಂಘದ ಅಧ್ಯಕ್ಷ ಗೋವಿಂದರಾಜ್, ಆದಿಕರ್ನಾಟಕ ಮಹಾಸಂಸ್ಥೆಯ ಮಾಜಿ ಅಧ್ಯಕ್ಷ ಸಿ.ವಿಜಯ್‌ಕುಮಾರ್, ದೊಡ್ಡಗರಡಿಯ ಕಾರ್ಯದರ್ಶಿ ದೊರೆಸ್ವಾಮಿ, ಉಪಾಧ್ಯಕ್ಷ ಶಿವಸ್ವಾಮಿ, ಮುಖಂಡರಾದ ಮಹೇಶ್ (ಜೋಗಿ), ವೆಂಕಟಸ್ವಾಮಿ, ಕಾರ್ಯದರ್ಶಿ ರಾಜ್‌ಮೊಗ, ಖಜಾಂಚಿ ಕೃಷ್ಣಮೂರ್ತಿ, ಪೈಲ್ವಾನರುಗಳಾದ ರಾಜು, ಥಾಮಸ್, ಪುಟ್ಟರಾಜು ಉಪಸ್ಥಿತರಿದ್ದರು.

ನಂತರ ಪುಣ್ಯತಿಥಿ ಅಂಗವಾಗಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಧಗೆಯಿಂದ ಪಕ್ಷಿ ಪ್ರಾಣಿಗಳ ಸಂರಕ್ಷಿಸುವ ಜಾಗೃತಿ



ಮೈಸೂರು,ಮಾ.11–ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿ ಬಳಗದ ವತಿಯಿಂದ ಬೇಸಿಗೆ ಧಗೆಯಲ್ಲಿ ಮೂಕ ಪಕ್ಷಿ–ಪ್ರಾಣಿಗಳಿಗೆ ಆಹಾರ, ನೀರು ಒದಗಿಸುವ ಮೂಲಕ ಅವುಗಳ ಸಂರಕ್ಷಿಸುವ ಜಾಗೃತಿ ಕಾರ್ಯಕ್ರಮವನ್ನು ನ್ಯಾಯಾ ಲಯದ ಮುಂಭಾಗ ಮಾ.12ರಂದು ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ ಎಂದು ಬಳಗದ ಸಂಚಾಲಕ ಬೈರತಿ ಲಿಂಗರಾಜು ತಿಳಿಸಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಜೆಪಿ ಮುಖಂಡರಾದ ಎಸ್ ಸಚ್ಚಿದಾನಂದ ವಹಿಸುವರು. ಮುಖ್ಯ ಅತಿಥಿಗಳಾಗಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಮೇಯರ್ ಶಿವಕುಮಾರ್, ನೋಡಲ್ ಅಧಿಕಾರಿ, ಸದಸ್ಯರಾದ ಎಸ್.ಕೆ.ಮಿತ್ತಲ್, ಬನ್ನೂರು ಮಹೇಂದ್ರಸಿಂಗ್ ಕಾಳಪ್ಪ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಹರೀಶ್ ನಾಯ್ಡು ಆಗಮಿಸಲಿದ್ದಾರೆ.



ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ನೈರುತ್ಯ ರೈಲ್ವೆ ಸದಸ್ಯ ಶಿವರಾಜ್, ಮಾಜಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ರೈತ ಮೋರ್ಚಾ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಎಂಡಿಎ ಮಾಜಿ ಸದಸ್ಯೆ ಲಕ್ಷ್ಮಿದೇವಿ, ಜಿಲ್ಲಾ ಉಪಾಧ್ಯಕ್ಷ ದಾಸಯ್ಯ, ಲಕ್ಷ್ಮಣ್, ಚಿಕ್ಕನಾಯಕ, ಕಾರ್ಯದರ್ಶಿ ವಾಸುದೇವ ಇನ್ನಿತರರು ಬೀಳ್ಕೊಟ್ಟರು.

ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ



ಮೈಸೂರು, ಮಾ. 11–ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ ಹಮ್ಮಿಕೊಳ್ಳುವ ಮೂಲಕ ನಗರದ ಬಲ್ಲಾಳ್ ವೃತ್ತದ ಬಳಿಯ ಆರ್ಯ ಆಸ್ಪತ್ರೆಯಲ್ಲಿ ವಿಶ್ವ ಮಹಿಳಾ ದಿನ ಆಚರಿಸಲಾಯಿತು.

ಈ ವೇಳೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಎಚ್. ಸಪ್ನ ಮಾತನಾಡಿ, ಮಹಿಳೆಯರು ಇಡೀ ಕುಟುಂಬದ ಹೊಣೆ ಹೊರುವವರಾಗಿದ್ದಾರೆ. ನಿತ್ಯದ ಕೆಲಸಗಳ ಒತ್ತಡದಲ್ಲಿ ಕೆಲವೊಂದು ಆರೋಗ್ಯ ತಪಾಸಣೆಗೆ ಒಳಗಾಗುವುದು ಇವರಿಗೆ ಸಾಧ್ಯವಾಗದು. ಹೀಗಾಗಿ ಈಗ ಸಮಗ್ರ ಆರೋಗ್ಯ ತಪಾಸಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ವೈದ್ಯಕೀಯ ನಿರ್ದೇಶಕ ಡಾ.ಕೆ.ಎನ್. ಮಹೇಶ್ ಮಾತನಾಡಿ, ಆಸ್ಪತ್ರೆಯಲ್ಲಿ ತಜ್ಞ ವೈದ್ಯರು ಹಾಗೂ ಅತ್ಯಾಧುನಿಕ ಸಾಧನಗಳಿರುವ ಕಾರಣ ಮಹಿಳೆಯರ ಆರೋಗ್ಯ ತಪಾಸಣೆಗೆ ಉತ್ತಮ ಚಿಕಿತ್ಸೆ ಲಭಿಸುತ್ತಿದೆ. ಇದಲ್ಲದೆ, ಮಾ.15ರವರೆಗೆ ಮಹಿಳೆಯರಿಗೆ ಪಿಸಿಓಡಿ, ಮುಟ್ಟಿನ ಸಮಸ್ಯೆ, ಬಿಳಿ ಮುಟ್ಟಿನ ಸಮಸ್ಯೆ, ಹೊಟ್ಟೆನೋವು, ಗುಪ್ತಾಂಗದಲ್ಲಿ ಗಡ್ಡೆ, ಬಂಜೆತನ, ಸ್ತನದಲ್ಲಿ ನೋವು ಅಥವಾ ಗಡ್ಡೆಗಳಿಗೆ ಸಂಬಂಧಿಸಿದಂತೆ ಸಮಗ್ರ ಆರೋಗ್ಯ ತಪಾಸಣಾ ಸೌಲಭ್ಯವನ್ನು ರಿಯಾಯಿತಿ ದರದಲ್ಲಿ ಪಡೆಯಬಹುದಾಗಿದೆ ಎಂದರು.

ಈ ಸಂದರ್ಭದಲ್ಲಿ ಡಾ. ಶ್ವೇತ ಮಡಪ್ಪಾಡಿ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯೆ ಸೌಮ್ಯ ಉಮೇಶ್, ಡಾ. ನಾಗಲಕ್ಷ್ಮಿ ಭಟ್ಟಾಚಾರ್ಯ, ಸಮಾಲೋಚಕ, ಸ್ತ್ರೀರೋಗತಜ್ಞ–ಪ್ರಸೂತಿ ತಜ್ಞ ಹಾಗೂ ಇನ್ನಿತರರು ಹಾಜರಿದ್ದರು.

ಡಾ.ಕೆ.ಪೂರ್ಣಿಮಾ, ಡಾ.ಲತಾ, ಡಾ.ಎಚ್.ಎಸ್.ಮೇಘನಾ ವಿವಿಧ ಆರೋಗ್ಯ ತಪಾಸಣೆ ಪ್ರಕ್ರಿಯೆ ನಡೆಸಿಕೊಟ್ಟರು.



ಮೈಸೂರಿನ ವಾಸನ್ ಐ ಕೇರ್ ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಲೇಖಕಿ ಶುಭ ಸಂಜಯ್ ಅರಸ್ ಹಾಗೂ ಹಿರಿಯ ನೇತ್ರ ತಜ್ಞೆ ಡಾ.ಹೇಮಾ ಅವರನ್ನು ಅಭಿನಂದಿಸಲಾಯಿತು. ಆಸ್ಪತ್ರೆಯ ಮಾರ್ಕೆಟಿಂಗ್ ಮ್ಯಾನೇಜರ್ ನಾಗೇಂದ್ರ ಹಾಗೂ ಇತರರು ಚಿತ್ರದಲ್ಲಿದ್ದಾರೆ.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್‌ನ 16ನೇ ವಾರ್ಷಿಕೋತ್ಸವ ಹಾಗೂ ದೇವಸ್ಥಾನದ ನೂತನ ಗೋಪುರದ ಕಳಸ ಪ್ರತಿಷ್ಠಾಪನೆ ಅಂಗವಾಗಿ ಪೂಜಾ ಕುಣಿತ, ವೀರಗಾಸೆ, ತಮಟೆ, ಮಂಗಳವಾದ್ಯದೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ, ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ, ಮಲ್ಲುಗೌಡ, ಕಾಳೇಗೌಡ, ಶೇಖರ್, ಜಯರಾಮು, ಶಿವಮಲ್ಲು, ದೊಡ್ಡೇಗೌಡ, ಬಿ.ಎಸ್.ರಾಜು, ಮಂಜುನಾಥ್ ಪ್ರಸಾದ್, ಶೆಟ್ಟನಾಯಕನ ಹಳ್ಳಿ, ಸಿದ್ದೇಶ್, ಮಲ್ಲ, ಶಿವಕುಮಾರ್, ಪಾಪಣ್ಣ, ಮಹೇಶ್, ಗ್ರಾಮದ ಮಹಿಳೆಯರು ಹಾಗೂ ಮಕ್ಕಳು ಉಪಸ್ಥಿತರಿದ್ದರು.

ಜಾತಿ ಗಣತಿ ವರದಿ ಜಾರಿಗೆ ಅಡ್ಡಿಪಡಿಸಿದರೆ ಪ್ರತಿ ಚಳವಳಿ

ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟ ಎಚ್ಚರಿಕೆ

ಮೈಸೂರು, ಮಾ.11(ಬಿಎಲ್‌ಯು)– ಜಾತಿ ಗಣತಿ ವರದಿ ಜಾರಿಗೆ ಅಡ್ಡಿಯುಂಟು ಮಾಡಿದರೆ ನಾವು ಪ್ರತಿ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟ ಎಚ್ಚರಿಸಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ನಡೆದ ಒಕ್ಕೂಟದ ದುಂಡು ಮೇಜಿನ ಸಭೆಯಲ್ಲಿ ಜಾತಿ ಗಣತಿ ಜಾರಿ ವಿರೋಧಿಸುತ್ತಿರುವ ಮೇಲ್ವರ್ಗದ ನಡೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಲಾಯಿತು.

ಜಾತಿಗಣತಿ ವರದಿಯು ಪರಿಶಿಷ್ಟ ಜಾತಿ, ಪಂಗಡ ಹಾಗೂ ಅಲ್ಪ ಸಂಖ್ಯಾತರಿಗೆ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ ಮೈಲಿಗಲ್ಲಾಗಿದೆ. ಬಡತನ ರೇಖೆಗಿಂತ ಕೆಳಗಿರುವವರಿಗೆ ಸರ್ಕಾರ ನೀಡುತ್ತಿರುವ ಗ್ಯಾರಂಟಿ ಯೋಜನೆಗಳ ಲಾಭವನ್ನು ತಲುಪಿಸಲು ಅವಶ್ಯ ಮಾಹಿತಿ ಒದಗಿಸುವ ದಾರಿದೀಪವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಲಾಯಿತು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ದುಂಡು ಮೇಜಿನ ಸಭೆ ನಡೆಯಿತು.

ವೀರಶೈವರು ಹಾಗೂ ಒಕ್ಕಲಿಗರು ಜಾತಿಗಣತಿ ವರದಿಯನ್ನು ಅವೈಜ್ಞಾನಿಕ ಎಂದು ವಿರೋಧ ಮಾಡುತ್ತಿದ್ದಾರೆ. ಒಂದು ವೇಳೆ ಜಾತಿಗಣತಿ ಜಾರಿಗೆ ಅಡ್ಡಿಯುಂಟು ಮಾಡಿದರೆ ಪ್ರತಿ ಹೋರಾಟ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಭಾರತ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲಸ ನಿರ್ವಹಿಸುವ ನುರಿತ ತಾಂತ್ರಿಕ ತಜ್ಞರು ವರದಿಗೆ ಅಂತಿಮ ರೂಪ ನೀಡಿದ್ದಾರೆ. ಹೀಗಿರುವಾಗ ಜಾತಿ ಗಣತಿ ವರದಿ ಅದ್ಹೇಗೆ ಅವೈಜ್ಞಾನಿಕವಾಗುತ್ತದೆ ಎಂದು ಸಭೆಯಲ್ಲಿ ಪ್ರಶ್ನಿಸಲಾಯಿತು.

ಬುಡಕಟ್ಟು ಜನಾಂಗ, ಅಲೆಮಾರಿಗಳು ಸೇರಿದಂತೆ ಸೂಕ್ಷ್ಮಾತಿ ಸೂಕ್ಷ್ಮ ಜಾತಿಗಳನ್ನು ಆಯೋಗ ಗುರುತಿಸಿದ್ದು, ಈ ವರ್ಗಗಳ ಮೀಸಲಾತಿ ಹೆಚ್ಚಳಕ್ಕೆ ಇದು ಅಗತ್ಯ ಮಾಹಿತಿ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ವರ್ಗಗಳಿಗೆ ಮೀಸಲಾತಿಯನ್ನು ಶೇಕಡ 50ರಿಂದ 75ಕ್ಕೆ ಹೆಚ್ಚಳ ಮಾಡಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ, ನಿವೃತ್ತ ಕೆಎಎಸ್ ಅಧಿಕಾರಿ ಕೆ.ಎಸ್.ಲಿಂಗಪ್ಪ, ಒಕ್ಕೂಟದ ಖಜಾಂಚಿ ಸಿ.ವೈಲಕ್ಷ್ಮಿಕಾಂತ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.



ಮೈಸೂರಿನ 44ನೇ ವಾರ್ಡ್ ವ್ಯಾಪ್ತಿಯ ಬೋಗಾದಿ 2ನೇ ಹಂತ ದಕ್ಷಿಣ ಭಾಗದ ಜನಹಿತ ಮುಖ್ಯ ರಸ್ತೆಗೆ 40 ಲಕ್ಷ ರೂ ವೆಚ್ಚದಲ್ಲಿ ಡಾಂಬರೀಕರಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರು ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ನಿಕಟಪೂರ್ವ ಪಾಲಿಕೆ ಸದಸ್ಯೆ ಸವಿತಾ ಸುರೇಶ್, ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಉಮಾಶಂಕರ್, ನಿವಾಸಿಗಳ ಸಂಘದ ಅಧ್ಯಕ್ಷರಾದ ಸುರೇಶ್, ಟೆಂಟ್ ಕುಮಾರ್, ಜನಹಿತ ಸಂಘದ ಶ್ರೀನಿವಾಸ್, ಬಸಪ್ಪ, ಸೊಸೈಟಿ ಕುಮಾರ್, ಲೋಕೇಶ್, ಉಪ ಆಯುಕ್ತರಾದ ಸತ್ಯಮೂರ್ತಿ, ಜೆಇ ರಜತ್, ಮಹೇಶ್, ಅನಿಲ್ ಇನ್ನಿತರರಿದ್ದರು.

ರಾಷ್ಟ್ರೀಯ ಲೋಕ್ ಅದಾಲತ್ ಮಾ.16ಕ್ಕೆ ಮುಂದೂಡಿಕೆ

ಮೈಸೂರು,ಮಾ.11–ಮಾ.9ರಂದು ನಡೆಯಬೇಕಾಗಿದ್ದ ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ಮಾ.16ಕ್ಕೆ ಮುಂದೂಡಲಾಗಿದೆ. ಲೋಕ್ ಅದಾಲತ್‌ನಲ್ಲಿ ಸಾರ್ವಜನಿಕರು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮತ್ತು ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಇಚ್ಛಿಸಿದ್ದಲ್ಲಿ ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ತಾಲೂಕು ಕಾನೂನು ಸೇವೆಗಳ ಸಮಿತಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂ: 1800–425–0131 ಅನ್ನು ಸಂಪರ್ಕಿಸಬಹುದು.

ನನಗೇ ಟಿಕೆಟ್ ದೊರೆಯುತ್ತೆ; ಗೆದ್ದು ಮತ್ತೆ ಜನರ ಸೇವೆ ಮಾಡ್ತೇನೆ; ರಾಜ್ಯದಾದ್ಯಂತ ಯುವಕರ ಬೆಳೆಸ್ತೇನೆ

ಫೇಸ್‌ಬುಕ್ ಲೈವ್‌ನಲ್ಲಿ ಸಂಸದ ಪ್ರತಾಪ್ ಸಿಂಹ ವಿಶ್ವಾಸ

ಮೈಸೂರು, ಮಾ. 11– ಕೆಟ್ಟವರ ಅಸೂಯೆ, ಕೆಟ್ಟತನಕ್ಕೆ ಶಕ್ತಿ ಇದೆ ಅನ್ನುವುದಾದರೆ ಒಳ್ಳೆಯವರ ಆಶೀರ್ವಾದಕ್ಕೂ ಶಕ್ತಿ ಇರಬೇಕಲ್ಲವೇ? ನನಗೆ ಟಿಕೆಟ್‌ಗೆ ತೊಂದರೆ ಆಗುತ್ತದೆ ಎಂದು ಗೊತ್ತಾದ ತಕ್ಷಣ ಕಳೆದ ನಾಲ್ಕು ದಿನಗಳಿಂದ ನನ್ನ ಪರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುತ್ತಿರುವವರು, ದೇವಸ್ಥಾನಗಳಲ್ಲಿ ಹರಕೆ ಹೊತ್ತಿದ್ದಾರೆ. ತಾಯಿ ಚಾಮುಂಡೇಶ್ವರಿ, ಕಾವೇರಿ ಮಾತೆ, ಇಗ್ಗುತ್ತಪ್ಪ ಆಶೀರ್ವಾದದಿಂದ ನನಗೆ ಟಿಕೆಟ್ ದೊರೆಯುತ್ತದೆ. ಮುಂದಿನ 5 ವರ್ಷ ಕಾಲ ಮೈಸೂರು ಮತ್ತು ಕೊಡಗಿನ ಜನರಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ಸೋಮವಾರ ರಾತ್ರಿ ಫೇಸ್‌ಬುಕ್ ಲೈವ್‌ನಲ್ಲಿ 43 ನಿಮಿಷ ಮಾತನಾಡಿದ ಅವರು, ತಾವು ಸಂಸದರಾಗಿ 10 ವರ್ಷ ಕಾಲ ಮಾಡಿದ ಅಭಿವೃದ್ಧಿ ಕೆಲಸಗಳು, ಪತ್ರಕರ್ತನಾಗಿದ್ದಾಗ ತನ್ನನ್ನು ಬೆಳೆಸಿದ ಹಿರಿಯರ ಬಗ್ಗೆ ಹೆಚ್ಚಿನ ಸಮಯ ಮಾತನಾಡಿದರು.



ಸಾಮಾನ್ಯ ಪತ್ರಕರ್ತನಾಗಿದ್ದ ನನ್ನನ್ನು ಕರೆತಂದು ಸಂಸದರಾಗಿ ಮಾಡಿದ್ದು, ಪ್ರಧಾನಿ ಮೋದಿ ಹಾಗೂ ಪಕ್ಷದ ಹಿರಿಯರು ಮತ್ತು ಜನತೆ ಎಂದ ಅವರು, ಮೋದಿ ಹೆಸರಿನಲ್ಲಿ ಗೆದ್ದಿದ್ದೇನೆ, ಅವರ ಹೆಸರಿಗೆ ಕಳಂಕ ಬಾರದಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಜನರ ವಿಶ್ವಾಸ ಗಳಿಸಿದ್ದೇನೆ ಎಂದರು.


ಈ ಕ್ಷೇತ್ರದಲ್ಲಿ 1989ರಿಂದ 2019ರವರೆಗೆ ಒಮ್ಮೆಯೂ ಕೂಡ ಯಾವುದೇ ಸಂಸದರು ಮರು ಆಯ್ಕೆಯಾಗಿಲ್ಲ. ಮಹಾರಾಜರನ್ನೇ ಇಲ್ಲಿನ ಜನತೆ ಪುನರಾಯ್ಕೆ ಮಾಡಿಲ್ಲ. ಒಮ್ಮೆ ಮಹಾರಾಜರನ್ನು ಜನತೆ 3ನೇ ಸ್ಥಾನಕ್ಕೆ ತಳ್ಳಿದ್ದರು. ಆದರೆ, ಅದೇ ಜನತೆ ನನ್ನನ್ನು 2ನೇ ಬಾರಿಗೆ ಪುನರಾಯ್ಕೆ ಮಾಡಿ 10 ವರ್ಷ ಸೇವೆ ಮಾಡಲು ಅವಕಾಶ ಕೊಟ್ಟಿದ್ದಾರೆ. ನಾನೂ ಕೂಡ ಪ್ರಾಮಾಣಿಕವಾಗಿ ಅಭಿವೃದ್ಧಿ ಕೆಲಸವನ್ನು ಮಾಡಿದ್ದೇನೆ. ಈಗಲೂ ಕೂಡ ಇಲ್ಲಿನ ಜನರು ನಾನು ಮತ್ತೆ ಸಂಸದನಾಗಬೇಕೆಂದು ಬಯಸುತ್ತಿದ್ದಾರೆ. ನನಗೆ ಇದಕ್ಕಿಂತ ಬೇರೆ ಏನೂ ಬೇಕಾಗಿಲ್ಲ ಎಂದರು.

ಪತ್ರಕರ್ತನಾಗಿದ್ದಾಗ ಯಾರ ಮುಲಾಜು ಇಲ್ಲದೇ ಕೆಲಸ ಮಾಡುತ್ತಿದ್ದೆ. ಹಠಾತ್ತನೇ ರಾಜಕಾರಣಿಯಾದಾಗ ಇದಕ್ಕೆ ಹೊಂದಿಕೊಳ್ಳಲು ಕಷ್ಟಪಡಬೇಕಾಯಿತು. ಕೊಡಗಿನ ಜನರು ದೇಶದ ಬಗ್ಗೆ ಅಭಿಮಾನ ಹೊಂದಿರುವವರು. ಏನೇ ಆಗಲಿ ದೇಶಕ್ಕಾಗಿ ಬಿಜೆಪಿಗೆ ಮತ ಹಾಕುತ್ತೇವೆ ಎಂದು ಮತ ಹಾಕುತ್ತಾರೆ. ನನಗೆ ಅಲ್ಲಿನ ಜನರು ಸಮಸ್ಯೆ ಆಗಿಲ್ಲ. ಆದರೆ ಮೈಸೂರಿನಲ್ಲಿ ಜಾತಿ ರಾಜಕಾರಣವಿದೆ. ಇದು ನನಗೆ ಕಷ್ಟವಾಯಿತು. ಇಲ್ಲಿನ ವ್ಯವಸ್ಥೆಗೆ ಹೊಂದಿಕೊಳ್ಳುವುದರೊಳಗಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಬಂತು. ಅಲ್ಲಿನ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು ಎಂದರೆ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದ ಅವರು, ನಾನೇ ಹೊಂದಿಕೊಳ್ಳಲು ತಿಣುಕಾಡುತ್ತಿರುವಾಗ ಬೇರೆಯವರನ್ನು ಗೆಲ್ಲಿಸುವುದಾದರೂ ಹೇಗೆ? ಎಂದು ಪ್ರಶ್ನಿಸಿದರು.

ಈಗಲೂ ಕೂಡ ಪ್ರತಾಪ್ ಸಿಂಹ ಯಾರನ್ನು ಗೆಲ್ಲಿಸಿದ್ದಾನೆ ಎಂದು ಕೇಳುತ್ತಿದ್ದಾರೆ. ಸೋತು ಕೂತಿರುವವರೆಲ್ಲಾ ಅವರದೇ ಕಾರಣಕ್ಕಾಗಿ ಸೋತಿದ್ದಾರೆ. ಅವರ ಉದಾಸೀನ ಅಥವಾ ಬೇರೆ ಕಾರಣಕ್ಕಾಗಿ ಸೋತಿದ್ದಾರೆ. ಆದರೆ, ಪ್ರತಾಪ್ ಸಿಂಹ ಏಕೆ ಗೆಲ್ಲಿಸಲಿಲ್ಲ ಎಂದು ಕೇಳುತ್ತಾರೆ. ನಾನು ಸಂಸದನಾಗುವ ಮುನ್ನ ಮೈಸೂರು ಮಹಾನಗರ ಪಾಲಿಕೆಯಲ್ಲಿ ಬಿಜೆಪಿಯ 17 ಸದಸ್ಯರಿದ್ದರು. ನಾನು ಬಂದ ನಂತರ 23 ಸದಸ್ಯರಾದರು, ಅದರ ಶ್ರೇಯಸ್ಸು ನನಗೇ ಸೇರಬೇಕಲ್ಲವೇ? ನನ್ನನ್ನು ಗೆಲ್ಲಿಸಿಲ್ಲ ಎಂದು ಹೇಳುತ್ತಾರಲ್ಲ, ನಾನು ಸಂಸದನಾಗುವ ಮುನ್ನ ಎಷ್ಟು ಸ್ಥಾನಗಳಲ್ಲಿ ಗೆದ್ದಿದ್ದರು ಎಂದು ಪ್ರಶ್ನಿಸಿದ ಅವರು, ಗ್ರಾಮ ಪಂಚಾಯ್ತಿಗಳಲ್ಲೂ ಬಿಜೆಪಿ ಇರಲಿಲ್ಲ. ಆದರೆ ಈಗ ಮೋದಿಯವರು ಬೇಕು ಎಂಬ ಕಾರಣಕ್ಕಾಗಿ ಎಲ್ಲಾ ಹಂತದಲ್ಲೂ ಬಿಜೆಪಿ ಗೆದ್ದು ಬರುತ್ತಿದೆ ಎಂದರು.

ಹಿರಿಯರ ಆಶೀರ್ವಾದ, ಮೈಸೂರು ಮತ್ತು ಕೊಡಗಿನ ಜನರ ವಿಶ್ವಾಸದಿಂದ ನನಗೆ 10 ವರ್ಷ ಅವಕಾಶ ದೊರೆತಿತ್ತು. ಮೈಸೂರು, ಕೊಡಗಿನ ಜನ ಮಾತ್ರವಲ್ಲದೇ ರಾಜ್ಯದ ಎಲ್ಲೆಡೆಯೂ ಜನರು ಪ್ರತಾಪ್ ಸಿಂಹ ಮತ್ತೇ ಸಂಸದನಾಗಬೇಕು ಎಂದು ಹೇಳುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಬೇರೆ ಯಾವುದೇ ಸಂಸದರಿಗೂ ಇಲ್ಲದಂತಹ ವಿಶ್ವಾಸವನ್ನು ನನಗೆ ತೋರಿಸುತ್ತಿದ್ದಾರೆ. ಈ ವಿಶ್ವಾಸದ ಮುಂದೆ ನನಗೆ ಬೇರೆ ಯಾವ ಸ್ಥಾನವೂ ಬೇಕಾಗಿಲ್ಲ. ಮುಂದಿನ 5 ವರ್ಷ ನಾನು ಮೈಸೂರು ಮತ್ತು ಕೊಡಗು ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ಯುವಕರನ್ನು ರಾಜಕೀಯವಾಗಿ ಬೆಳೆಸುತ್ತೇನೆ. ನನ್ನ ಕ್ಷೇತ್ರವನ್ನೂ ಕೂಡ ಅಭಿವೃದ್ಧಿಪಡಿಸುತ್ತೇನೆ ಎಂದು ಅವರು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.3.2024 ಮಂಗಳವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ– ಕೊರ್ಗಿ ಶಂಕರ ನಾರಾಯಣ ಉಪಾಧ್ಯಾಯ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ, ಪ್ರಸ್ತುತಿ– ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ಅಧಿತಿ ಕೃಷ್ಣ ಪ್ರಕಾಶ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ–ತುರ್ತು ಚಿಕಿತ್ಸೆ ಹಾಗೂ ತೆಗೆದುಕೊಳ್ಳಬೇಕಾದ ಜಾಗ್ರತೆ ಕುರಿತು ಡಾ. ಐಶ್ವರ್ಯ ಅವರೊಂದಿಗೆ ಸಂದರ್ಶನ, 12.30 ದೇವರನಾಮ–ಡಾ. ಆರ್.ಎಸ್. ಶ್ರೀಲತಾ, ನಾಗಮಣಿ ಶ್ರೀನಾಥ್, 12.45 ಅರಬಿಂದೋ ಅರ್ಕಸಾಲಿ ಅವರಿಂದ ಭಾಷಣ, 1.20 ಭಾವಗೀತೆಗಳು– ಬಿ. ಸುನಂದಾ ದಿಲೀಪ್, 3.00 ಹೆಚ್.ಕೆ. ನಾರಾಯಣ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ– ಶಿವಲೀಲೆ ಸುಗುಣಮಣಿ, ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ರೇಷ್ಮೆ ಸಿರಿ ಬಾನುಲಿ ಸರಣಿ, ರೇಷ್ಮೆ ಕೃಷಿ ತಾಂತ್ರಿಕತೆಗಳ ಅಳವಡಿಕೆಯಲ್ಲಿ ವಿಸ್ತರಣೆಯ ಪಾತ್ರ ಕುರಿತು ಸಂವಾದ, 9.30 ಎಂ.ಡಿ. ರಾಮನಾಥನ್–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ– ಕೆ.ವಿ. ವಸಂತಲಕ್ಷ್ಮಿ, ವ್ಯಾಖ್ಯಾನ ಹೆಚ್.ವಿ.ನಾಗರಾಜರಾವ್, 10.30 ಸವಿನೆನಪು

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಭಾರತೀಯ ಜನಔಷಧಿ ಕೇಂದ್ರ :** ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ,ಉಪಸ್ಥಿತರು : ಶಾಸಕ ಹರೀಶ್‌ಗೌಡ, ಮಾಜಿ ಮೇಯರ್ ಶಿವಕುಮಾರ್, ಮಾಜಿ ಪಾಲಿಕೆ ಸದಸ್ಯ ಬಾಲು, ಬಿ.ಪಿ. ಅರುಣ್, ಶ್ರೀಮತಿ ನಾಜಿಯ ಖುರತ್ ಉಲ್ ಐನ್, ಶರೀಫ್, ಶ್ರೀಮತಿ ಶಿಲ್ಪ ಅಗರ್‌ವಾಲ, ಜೆ. ಲೋಹಿತೇಶ್ವರ, ರವಿಚಂದ್ರನ್, ಬಿ. ರಾಘವೇಂದ್ರ, ಸ್ಥಳ: ರೈಲ್ವೆ ನಿಲ್ದಾಣ, ಬೆಳಗ್ಗೆ 8ಕ್ಕೆ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಸರ್ಕಾರಿ ನೌಕರರ ಸಂಘ, ಜಿಲ್ಲಾ ಶಾಖೆ :** ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ :** ವಿವಿಧ ಜಿಲ್ಲೆಯ ವಿಶೇಷಚೇತನರ ಪ್ರೌಢಶಾಲೆ ಮುಖ್ಯೋಪಾಧ್ಯಾಯರು, ಮುಖ್ಯಸ್ಥರಿಗೆ ವಿಶೇಷ ಕಾರ್ಯಾಗಾರ, ಸ್ಥಳ: ಪಾಲಿಟೆಕ್ನಿಕ್ ಆವರಣ, ಬೆಳಗ್ಗೆ 10 ರಿಂದ.

■ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಂಸ್ಕೃತಿಕ ವೇದಿಕೆ :** ವಿಶ್ವ ಮಹಿಳಾ ದಿನಾಚರಣೆ, ಸಾಧಕಿಯರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಪೊಲೀಸ್ ಅಧೀಕ್ಷಕಿ ಡಾ.ಬಿ.ಟಿ.ಕವಿತಾ, ಮಾಜಿ ಉಪಮೇಯರ್ ಡಾ.ರೂಪ ಯೋಗೀಶ್, ರೈತ ಮಹಿಳೆ ವಸಂತ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎನ್.ಮಾಯಾದೇವಿ, ಸ್ಥಳ : ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 7.30 ರಿಂದ ಗಣಪತಿ ಪೂಜೆ, ಪುಣ್ಯಾಹ, 108 ಕಳಶ ಸ್ಥಾಪನೆ, ಗಣಹೋಮ, ಶ್ರೀ ಮದನಗೋಪಾಲಕೃಷ್ಣ ಮಹಾಯಾಗ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಜಯಲಕ್ಷ್ಮಿಪುರಂ.

■ **ದಿ ಆರ್ಗನೈಸೇಷನ್ ಫಾರ್ ದಿ ಡೆವಲಪ್‌ಮೆಂಟ್ ಆಫ್ ಪೀಪಲ್ (ಓಡಿಪಿ) :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಅಧ್ಯಕ್ಷತೆ : ಓಡಿಪಿ ಸಂಸ್ಥೆ ಅಧ್ಯಕ್ಷ ಡಾ.ಬರ್ನಾಡ್ ಮೊರಾಸ್, ಉದ್ಘಾಟನೆ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಕೆ.ಎಂ.ಗಾಯತ್ರಿ, ಮುಖ್ಯ ಅತಿಥಿಗಳು: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಸೀಮಾ ಲಾಟ್ಕರ್, ಮೈಸೂರು ಆಡಳಿತ ತರಬೇತಿ ಸಂಸ್ಥೆ ಜಂಟಿ ನಿರ್ದೇಶಕರಾದ ಶ್ರೀಮತಿ ಕೆ.ರೂಪಶ್ರೀ, ಧರ್ಮಪ್ರಾಂತ್ಯದ ಶ್ರೇಷ್ಠ ಗುರುಗಳಾದ ಸ್ವಾಮಿ ಆಲ್ಫ್ರೆಡ್ ಜಾನ್ ಮೆಂಡಾನ್ಸಾ, ಓಡಿಪಿ ಸಂಸ್ಥೆ ನಿರ್ದೇಶಕ ಸ್ವಾಮಿ, ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಮುಖ್ಯ ಭಾಷಣ: ಮೈಸೂರು ವಿವಿ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗದ ಅಧ್ಯಕ್ಷೆ ಶ್ರೀಮತಿ ಡಾ. ಎಸ್.ಎಸ್.ಮಾಲಿನಿ, ಮಹಿಳೋದಯ ಮಹಿಳಾ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಲತಾಮಣಿ, ಮೈಸೂರು ಎಸ್‌ಹೆಚ್‌ಜಿ ಕಿರಿಯ ಪುಷ್ಪಾ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ವಾಣಿ, ಸ್ಥಳ: ಓಡಿಪಿ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಪ್ರತಿಭಾನ್ವೇಷಣಾ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ವಿಶ್ರಾಂತ ಪ್ರಾಂಶುಪಾಲ ಪ್ರೊ. ಸಿ.ಎ. ಶ್ರೀಧರ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಶಾರದ, ಉಪಪ್ರಾಂಶುಪಾಲ ಡಾ.ಜಿ. ಪ್ರಸಾದಮೂರ್ತಿ, ಶ್ರೀಮತಿ ಎಂ.ಎಸ್. ಸಂಧ್ಯಾರಾಣಿ, ಸ್ಥಳ: ಶ್ರೀ ನಟರಾಜ ಸಭಾಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ದಂಡಿನಮಾರಮ್ಮನವರ ಪೂಜಾ ಮಹೋತ್ಸವ ಸಮಿತಿ:** ಶ್ರೀ ಮನೆಮಂಚಮ್ಮ ಶ್ರೀ ದಂಡಿನ ಮಾರಮ್ಮ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವದ ಪ್ರಯುಕ್ತ ಮ. 12.30ಕ್ಕೆ ಅನ್ನಸಂತರ್ಪಣೆ, ಸ್ಥಳ: ಶ್ರೀ ಕ್ಷೇತ್ರ ದಂಡಿನಮಾರಮ್ಮ ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಶ್ರೀರಾಮಕೃಷ್ಣ ಆಶ್ರಮ :** ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ 189ನೆಯ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಬೆಳಗ್ಗೆ 5.15 ರಿಂದ ವೇದಮಂತ್ರಗಳ ಪಠಣೆ, ಮಂಗಳಾರತಿ, ಭಜನೆ, ವಿಶೇಷ ಪೂಜೆ, ವಿಷ್ಣುಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಮಹಾಮಂಗಳಾರತಿ, ಹೋಮ, ಪ್ರಸಾದ ವಿನಿಯೋಗ, ಶ್ರೀಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಭಗವಾನ್ ಶ್ರೀ ರಾಮಕೃಷ್ಣರ ಜೀವನ ಮತ್ತು ಸಂದೇಶ ಕುರಿತು ಕನ್ನಡದಲ್ಲಿ ಪ್ರವಚನ, ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** 100ನೇ ವರ್ಷದ ಮೈಸೂರು ಕರಗ ಶತಮಾನೋತ್ಸವದ ಅಂಗವಾಗಿ ಶ್ರೀ ರೇಣುಕಾದೇವಿ ಅಮ್ಮನವರ 38ನೇ ವರ್ಷದ ವಾರ್ಷಿಕೋತ್ಸವ, ಜೀರ್ಣೋದ್ಧಾರ ಮಹಾ ಕುಂಬಾಭಿಷೇಕ ಮಹೋತ್ಸವ, ಬೆಳಿಗ್ಗೆ ಗುರು ಪ್ರಾರ್ಥನೆ, ಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂರಸರ ಹೋಮ, ನವ ಚಂಡಿಕಾಹೋಮ, ಪೂರ್ಣಾಹುತಿ ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ, ಮಧ್ಯಾಹ್ನ ಬಿಂಬ ಶುದ್ಧಿ, ಯಾಗಶಾಲಾ ಪ್ರವೇಶ, ಕಳಶ ಸ್ಥಾಪನೆ ದೇವಿಯಾಗ ಪ್ರಾರಂಭ ಸಾಯಂಕಾಲ ಪುಣ್ಯಾಹ, ಶೂಲಿನಿದುರ್ಗಾಹೋಮ, ಕಳಶಾರ್ಚನೆ, ಅಧಿವಾಸ ಹೋಮ, ಅಷ್ಟಾವರ್ಧನ ಸೇವೆ, ಮಹಾಮಂಗಳಾರತಿಯ ನಂತರ ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರೇಣುಕಾದೇವಿ ಕರಗ ದೇವಸ್ಥಾನ, ಇಟ್ಟಿಗೆಗೂಡು.

ಹಾರೋಹಳ್ಳಿ ಗ್ರಾಮ (ಮೈಸೂರು ತಾಲೂಕು)

■ **ಮೈಸೂರು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 8.30 ರಿಂದ ಶ್ರಮದಾನ, ಸಹಾಯಕ ಪ್ರಾಧ್ಯಾಪಕ ಡಾ. ಟಿ.ಎಂ. ಪ್ರಶಾಂತ್ ಅವರಿಂದ ಮತದಾನದ ಹಕ್ಕು ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಾರೋಹಳ್ಳಿ ಗ್ರಾಪಂ ಅಧ್ಯಕ್ಷ ಜಯಪ್ಪ ಕಾಡನಹಳ್ಳಿ, ಮುಖ್ಯ ಅತಿಥಿಗಳು : ಸೂರ್ಯಕುಮಾರ್, ಗುರುದೇವ ಆರಾಧ್ಯ, ಮಹೇಶ್, ರೇವಣ್ಣ, ಸಿ.ಡಿ. ಚಲುವರಾಜು, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾರೋಹಳ್ಳಿ ಗ್ರಾಮ, ಮೈಸೂರು ತಾಲೂಕು, ಸಂಜೆ 4.30ಕ್ಕೆ.

ಸಾಲಿಗ್ರಾಮದಲ್ಲಿಂದು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್ತು:** ವಿಶ್ವಗುರು ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: **ಜಿಲ್ಲಾ ಶರಣ ಸಾಹಿತ್ಯ ಪರಿಷತ್** ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಪ್ರೊ.ಮೊರಬದ ಮಲ್ಲಿಕಾರ್ಜುನ ಅವರಿಂದ ದತ್ತಿ ಉಪನ್ಯಾಸ, ಅಧ್ಯಕ್ಷತೆ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಂಶುಪಾಲ ಜಿ.ಗೋವಿಂದರಾಜು, ಆಶಯನುಡಿ: ನಿಕಟಪೂರ್ವ ಕಸಾಪ ಅಧ್ಯಕ್ಷ ಎಂ.ಚಂದ್ರಶೇಖರ್, ತಾಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಸಿ.ಪಿ.ರಮೇಶ್‌ಕುಮಾರ್, ಎಸ್.ಕೆ. ಮಧುಚಂದ್ರ, ಗಾಯನಹಳ್ಳಿ ಕುಮಾರಸ್ವಾಮಿ, ಸ್ಥಳ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಸಾಲಿಗ್ರಾಮ, ಬೆಳಗ್ಗೆ 11ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 12 ಮಂಗಳವಾರ 2024

ಸಂಪುಟ: 44 | ಸಂಚಿಕೆ: 323 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕಲರ್ ಕಾಟನ್ ಕ್ಯಾಂಡಿ ನಿಷೇಧ: ಗೋಬಿ ಮಂಚೂರಿಗೆ ಕೃತಕ ಬಣ್ಣ ಬಳಸುವವರಿಗೆ

10 ಲಕ್ಷ ರೂ. ದಂಡ, 7 ವರ್ಷ ಶಿಕ್ಷೆ!

● ಸರ್ಕಾರದ ಕಟ್ಟಾಜ್ಞೆ ● ಚಿಕನ್ ಕಬಾಬ್‌ನಲ್ಲೂ ಹಾನಿಕಾರಕ ಅಂಶ?

ಬೆಂಗಳೂರು: ಕರ್ನಾಟಕದಲ್ಲಿ ಕಲರ್ ಕಾಟನ್ ಕ್ಯಾಂಡಿ ಬಳಕೆಯನ್ನು ರಾಜ್ಯ ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿದೆ. ಕೃತಕ ಬಣ್ಣ ಬಳಸುವುದರಿಂದ ಆರೋಗ್ಯದ ಮೇಲೆ ಭಾರಿ ದುಷ್ಪರಿಣಾಮ ಬೀರುವುದರಿಂದ ಕಲರ್ ಕಾಟನ್ ಕ್ಯಾಂಡಿಯನ್ನು ನಿಷೇಧಿಸಲಾಗಿದೆ. ಜೊತೆಗೆ ಗೋಬಿ ಮಂಚೂರಿ ತಯಾರಿಸುವಾಗ ಕೃತಕ ಬಣ್ಣ ಬಳಸುವುದನ್ನು ಕೂಡ ನಿಷೇಧಿಸಿ ಸರ್ಕಾರ ಆದೇಶಿಸಿದೆ.

ಸೋಮವಾರ ವಿಕಾಸಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕರ್ನಾಟಕದಲ್ಲಿ ಕಲರ್ ಕಾಟನ್ ಕ್ಯಾಂಡಿ ಮಾರಾಟ ಮಾಡುವಂತಿಲ್ಲ ಎಂದು ಹೇಳಿದ್ದಾರೆ. ರಾಜ್ಯಾದ್ಯಂತ ಮಾರಾಟ ಮಾಡುತ್ತಿರುವ ಕಲರ್ ಕಾಟನ್ ಕ್ಯಾಂಡಿ ಹಾಗೂ ಗೋಬಿ ಮಂಚೂರಿಯನ್ ಮಾದರಿಗಳಲ್ಲಿ ಆರೋಗ್ಯಕ್ಕೆ ಮಾರಕವಾದ ಅಂಶ ಹಾಗೂ ಬಳಕೆಯ ಬಣ್ಣ ಸೇರಿದಂತೆ ವ್ಯಸನಕಾರಿ ರಾಸಾಯನಿಕ ಅಂಶಗಳು ಪತ್ತೆಯಾಗಿದ್ದು, ಈ ಅಸುರಕ್ಷಿತ ವಸ್ತುಗಳನ್ನು ಬಳಕೆ ಮಾಡದಂತೆ ಸೂಚಿಸಿದ್ದಾರೆ. ಕರ್ನಾಟಕ ರಾಜ್ಯ ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ವಿಭಾಗವು, ಕಾಟನ್ ಕ್ಯಾಂಡಿ ಮತ್ತು ಗೋಬಿ ಮಂಚೂರಿ ಮಾದರಿಯನ್ನು ಸಂಗ್ರಹಿಸಿತ್ತು. ಪರೀಕ್ಷೆಗೆ ಒಳಪಡಿಸಿದಾಗ ಇವುಗಳಲ್ಲಿ ಕೃತಕ ಬಣ್ಣಗಳ ಬಳಸಿರುವುದು ಪತ್ತೆಯಾಗಿದೆ. ಕಲಬೆರಕೆ ಕಲರ್ ಬಳಕೆ ಮಾಡೋದು ಮತ್ತು ಕ್ಯಾನ್ಸರ್‌ಕಾರಕ ಅಂಶಗಳು ಪತ್ತೆಯಾಗಿದೆ. ಗೋಬಿ ಮಂಚೂರಿ ಹಾಗೂ ಕಾಟನ್ ಕ್ಯಾಂಡಿ ಯಲ್ಲಿ ಕೃತಕ ಬಣ್ಣ ಬೆರಕೆ ಹಿನ್ನೆಲೆ ಈ ಹಿಂದೆ ವಿವಿಧ ಸ್ಯಾಂಪಲ್ ಗಳ ಪರೀಕ್ಷೆಗೆ ನೀಡಲಾಗಿತ್ತು. ಸದ್ಯ ಪರೀಕ್ಷೆಯ ವರದಿ ಬಂದ ಹಿನ್ನೆಲೆ ಈ ಬಗ್ಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕೃತ ಆದೇಶ ಹೊರಡಿ ಸಿದ್ದಾರೆ. ಈ ಬಗ್ಗೆ ವಿವರ ನೀಡಿದ ಸಚಿವ ದಿನೇಶ್ ಗುಂಡೂರಾವ್ ಅವರು, ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಮಾದರಿಗಳನ್ನು ಸಂಗ್ರಹಿಸಲಾಗಿತ್ತು.

ಗೋಬಿ ಮಂಚೂರಿಯಲ್ಲೂ ವಿಷಕಾರಿ ಅಂಶ: ರಾಜ್ಯದಲ್ಲಿ 171 ಗೋಬಿ ಮಂಚೂರಿ ಸ್ಯಾಂಪಲ್ ಸಂಗ್ರಹಿಸಿದ್ದು, ಅದರಲ್ಲಿ 107 ಮಾದರಿಗಳಲ್ಲಿ ಅಪಾಯಕಾರಿ ರಾಸಾಯನಿಕಗಳು ಪತ್ತೆಯಾದವು. ಟಾರ್‌ಟ್ರಾಸೈನ್ ಸನ್ಸೆಟ್ ಯೆಲ್ಲೋ ಮತ್ತು ಕಾರ್ಮೋಸಿನ್ ಎಂಬ ರಾಸಾಯನಿಕಗಳು ಇದರಲ್ಲಿ ● 6ನೇ ಪುಟಕ್ಕೆ



ಸಿಎಎ ಜಾರಿ

● ಮಸೂದೆ ಅಂಗೀಕಾರಗೊಂಡ ನಾಲ್ಕು ವರ್ಷಗಳ ಬಳಿಕ ಅಧಿಸೂಚನೆ ಪ್ರಕಟ ● ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಕೇಂದ್ರ ಸರ್ಕಾರದ ಮಹತ್ವದ ಹೆಜ್ಜೆ ● ಪಾಕಿಸ್ತಾನ, ಬಾಂಗ್ಲಾದೇಶ, ಆಫ್ಘಾನಿಸ್ತಾನದಿಂದ 2014ರ ಡಿ.31ಕ್ಕೆ ಮೊದಲು ಭಾರತಕ್ಕೆ ಬಂದು ನೆಲೆಸಿದ ಅಲ್ಪಸಂಖ್ಯಾತರಿಗೆ ಭಾರತದ ಪೌರತ್ವ

ನವದೆಹಲಿ, ಮಾ.11– ಲೋಕಸಭೆ ಚುನಾವಣೆ ಹೊಸ್ತಿಲಲ್ಲಿ ಕೇಂದ್ರ ಸರ್ಕಾರ 'ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ)'ಯನ್ನು ಜಾರಿಗೊಳಿಸಿದೆ.

ಸಂಸತ್ತಿನಲ್ಲಿ ಮಸೂದೆ ಅಂಗೀಕಾರಗೊಂಡ ನಾಲ್ಕು ವರ್ಷಗಳ ನಂತರ ಸಿಎಎ ಜಾರಿಗೆ ಬಂದಿದೆ. ಈ ಮೂಲಕ ಯಾವುದೇ ದಾಖಲೆಗಳು ಇಲ್ಲದೆ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನದಿಂದ 2014ರ ಡಿಸೆಂಬರ್ 31ಕ್ಕೆ ಮೊದಲು ಭಾರತ ಪ್ರವೇಶಿಸಿ, ಇಲ್ಲಿಯೇ ನೆಲೆಸಿರುವ ಅಲ್ಲಿನ ಅಲ್ಪಸಂಖ್ಯಾತರಿಗೆ ಭಾರತದ ಪೌರತ್ವ ದೊರಕಲಿದೆ. ಪೌರತ್ವ ತಿದ್ದುಪಡಿ ಕಾಯ್ದೆ–2019ಕ್ಕೆ(ಸಿಎಎ) ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದ್ದು, ಈ ಮೂರು ದೇಶಗಳಲ್ಲಿ ದೌರ್ಜನ್ಯಕ್ಕೆ ಗುರಿಯಾಗಿ ಭಾರತಕ್ಕೆ ಬಂದ ಹಿಂದೂ, ಸಿಖ್, ಜೈನ, ಬೌದ್ಧ, ಪಾರ್ಸಿ ಮತ್ತು ಕ್ರೈಸ್ತ ಸಮುದಾಯದವರಿಗೆ ಭಾರತದ ಪೌರತ್ವ ನೀಡುವ ಕಾರ್ಯವನ್ನು ಕೇಂದ್ರ ಸರ್ಕಾರವು ಇನ್ನು ಆರಂಭಿಸಲಿದೆ. ಪೌರತ್ವ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿಯವರು 2019ರ ಡಿಸೆಂಬರ್‌ನಲ್ಲಿ ಅಂಕಿತ ಹಾಕಿದ್ದರು. ಆದರೆ ಈ ಕಾನೂನು ವಿರೋಧಿಸಿ ದೇಶದ ಹಲವು ಕಡೆಗಳಲ್ಲಿ ಪ್ರತಿಭಟನೆಗಳು ನಡೆದಿದ್ದಲ್ಲದೆ, ಈ ಕಾಯ್ದೆಯು ತಾರತಮ್ಯದಿಂದ ಕೂಡಿದೆ ಎಂದು ಹಲವು ರಾಜಕೀಯ ಪಕ್ಷಗಳು ಆರೋಪಿಸಿದ್ದವು. ಅಲ್ಲದೆ ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಈವರೆಗೆ ಅಧಿಸೂಚನೆಯಲ್ಲಿ ಪ್ರಕಟಿಸದ ಕಾರಣ ಕಾಯ್ದೆಯು ಜಾರಿಗೆ ಬಂದಿರಲಿಲ್ಲ.

ಪೌರತ್ವ(ತಿದ್ದುಪಡಿ) ನಿಯಮಗಳು–2024 ಹೆಸರಿನ ಈ ನಿಯಮಗಳು, ಸಿಎಎ–2019 ಕಾಯ್ದೆಯ ಪ್ರಕಾರ ಅರ್ಹರಾದವರಿಗೆ ಭಾರತೀಯ ಪೌರತ್ವ ನೀಡಲು ಅವಕಾಶ ಕಲ್ಪಿಸಲಿವೆ ● 9ನೇ ಪುಟಕ್ಕೆ



ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ

ಡಾ.ಸಿ.ಎನ್.ಮಂಜುನಾಥ್ ಸ್ಪರ್ಧೆ

● ಮಾಜಿ ಸಿಎಂ ಕುಮಾರಸ್ವಾಮಿ ಅಧಿಕೃತ ಘೋಷಣೆ ● ಬಿಜೆಪಿ ವರಿಷ್ಠರೇ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದ್ದಾರೆ ● ಮಾಜಿ ಪ್ರಧಾನಿ ದೇವೇಗೌಡರು ಸೇರಿ ಕುಟುಂಬದೊಂದಿಗೆ ಚರ್ಚಿಸಿ ನಿರ್ಧಾರ

ಬೆಂಗಳೂರು, ಮಾ.11(ಕೆಎಂಶಿ)– ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ಚುನಾವಣಾ ಕಣಕ್ಕಿಳಿಯಲಿದ್ದಾರೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅಧಿಕೃತ ಘೋಷಣೆ ಮಾಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ರಾಮನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪ್ರಮುಖ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕಿರಾತಕರನ್ನು ಮಣಿಸಲು ಡಾ. ಮಂಜುನಾಥ್ ಸ್ಪರ್ಧೆ ಅನಿವಾರ್ಯ ಎಂದಿದ್ದಾರೆ. ಬಿಜೆಪಿ ವರಿಷ್ಠರು ಡಾ.ಮಂಜುನಾಥ್ ಅವರನ್ನೇ ಕಣಕ್ಕಿಳಿಸಬೇಕೆಂದು ನನಗೆ ಸಲಹೆ ಮಾಡಿದ್ದಾರೆ, ನಾನು ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಅವರನ್ನು ಕಣಕ್ಕಿಳಿಸಬೇಕೆಂದುಕೊಂಡಿದ್ದೆ, ಆದರೆ ಅವರೂ ಕೂಡ ಡಾಕ್ಟರ್ ಹೆಸರನ್ನೇ ಮುಂದಿಟ್ಟಿದ್ದಾರೆ. ಹಿಂದಿನ ಚುನಾವಣೆಗಳಲ್ಲಿ ಆದ ಕಹಿಯನ್ನು ಮರೆತು ಚುನಾವಣಾ ಕೆಲಸ ಮಾಡೋಣ, ಹಿಂದೆ ಆಗಿರುವ ತಪ್ಪುಗಳನ್ನು ಸರಿ ಮಾಡಿಕೊಂಡು ಮುಂದೆ ಹೋಗೋಣ. ನಿಷ್ಠಾವಂತ ಕಾರ್ಯಕರ್ತರು ನೀವಿದ್ದೀರಿ. ರಾಮನಗರ ಕ್ಷೇತ್ರದ ಜನರು ಯಾವತ್ತೂ ಜಾತಿ ಮೇಲೆ ಚುನಾವಣೆ ಮಾಡಿದವರಲ್ಲ, ● 6ನೇ ಪುಟಕ್ಕೆ



ರಾಜ್ಯದಲ್ಲಿ 600 ಇಂದಿರಾ ಕ್ಯಾಂಟೀನ್ ಆರಂಭ





ಬೆಂಗಳೂರು: ಲೋಕಸಭೆ ಚುನಾವಣೆಗೆ ಮುನ್ನ ರಾಜ್ಯದಾದ್ಯಂತ ಕನಿಷ್ಠ 600 ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಘೋಷಿಸಿದ್ದಾರೆ. ಇಂದು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದಿರಾ ಕ್ಯಾಂಟೀನ್ ಉದ್ಘಾಟಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಇಂದಿರಾ ಕ್ಯಾಂಟೀನ್‌ನಲ್ಲಿ ಎಲ್ಲರಿಗೂ 5 ರೂ.ಗೆ ಬೆಳಗಿನ ಉಪಾಹಾರ ಮತ್ತು 10 ರೂ.ಗೆ ಊಟ ನೀಡಲಾಗುವುದು ಎಂದರು.

ನಾವು ಬೆಂಗಳೂರಿನಲ್ಲಿ ಒಟ್ಟು 188 ಹೊಸ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸುತ್ತಿದ್ದೇವೆ. ವಿಮಾನ ನಿಲ್ದಾಣದ ಬಳಿ ಇಂದಿರಾ ಕ್ಯಾಂಟೀನ್ ಆರಂಭಿಸುವಂತೆ ಟ್ಯಾಕ್ಸಿ ಚಾಲಕರು ಹಾಗೂ ಇತರೆ ಚಾಲಕರ ಬೇಡಿಕೆ ಇತ್ತು. ಹೀಗಾಗಿ ಇಲ್ಲಿ ಎರಡು ಕ್ಯಾಂಟೀನ್ ● 9ನೇ ಪುಟಕ್ಕೆ

ಕಚೇರಿಗೆ ಹೋಗುವಂತಿಲ್ಲ...! ಲಂಚ ನೀಡಬೇಕಿಲ್ಲ...!!

'ನಂಬಿಕೆ ನಕ್ಷೆ'

● ಆರಂಭದಲ್ಲಿ ಬಿಬಿಎಂಪಿಯಲ್ಲಿ ಜಾರಿ; ನಂತರ ರಾಜ್ಯಾದ್ಯಂತ ವಿಸ್ತರಣೆ
● 50'X80' ನಿವೇಶನದವರೆಗೆ 4 ಯೂನಿಟ್ ಮನೆ ನಿರ್ಮಾಣಕ್ಕೆ ಆರ್ಕಿಟೆಕ್ಟ್ ಇಲ್ಲವೇ ಇಂಜಿನಿಯರ್ ಮೂಲಕ ಕಟ್ಟಡಗಳ ನಕ್ಷೆ ಅನುಮೋದನೆ



ಸುದ್ದಿಗೋಷ್ಠಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಬೆಂಗಳೂರು, ಮಾ.11(ಕೆಎಂಶಿ)– ಸಾರ್ವಜನಿಕರು ಕಟ್ಟಡ ನಕ್ಷೆ ಅನುಮತಿ ಪಡೆಯಲು ಪಾಲಿಕೆ ಕಚೇರಿಗಳಿಗೆ ಅಲೆಯುವಂತಿಲ್ಲ, ಅಧಿಕಾರಿಗಳಿಗೆ ಲಂಚ ನೀಡದೆ 'ನಂಬಿಕೆ ನಕ್ಷೆ' ಯೋಜನೆಯಡಿ ಮಂಜೂರಾತಿ ಪಡೆಯುವ ಹೊಸ ವಿಧಾನವನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ.

ಬೆಂಗಳೂರು ನಗರದಲ್ಲಿ ಈ ಯೋಜನೆ ಮೊದಲು ಜಾರಿಗೊಳ್ಳಲಿದ್ದು, ನಂತರದ ದಿನಗಳಲ್ಲಿ ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆ, ಉಳಿದಂತೆ ಪಾಲಿಕೆ, ನಗರಸಭೆಗಳಿಗೆ ವಿಸ್ತರಣೆ ಆಗಲಿದೆ.

50X80 ಅಡಿ ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ 4 ಯುನಿಟ್ ಮನೆ ಕಟ್ಟಿಕೊಳ್ಳುವವರು ನೋಂದಾಯಿತ ವಾಸ್ತುಶಿಲ್ಪಿ (ಆರ್ಕಿಟೆಕ್ಟ್) ಅಥವಾ ಇಂಜಿನಿಯರ್ ಮೂಲಕ ತಮ್ಮ ಕಟ್ಟಡದ ನಕ್ಷೆಗಳಿಗೆ ಆನ್‌ಲೈನ್ ಮೂಲಕ ಸ್ವಯಂ ಅನುಮತಿ ಪಡೆಯುವ 'ನಂಬಿಕೆ ನಕ್ಷೆ' ಯೋಜನೆ ಇದಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಂಬಿಕೆ ನಕ್ಷೆ ಯೋಜನೆ ಅನುಷ್ಠಾನದ ಜೊತೆಗೆ ತೆರಿಗೆ ಪದ್ಧತಿಯಲ್ಲೂ ಒಂದಷ್ಟು ● 9ನೇ ಪುಟಕ್ಕೆ

ಕಡಕೊಳ ಬಳಿ 100 ಕೋಟಿ ವೆಚ್ಚದ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್

ಇಂದು ವರ್ಚುಯಲ್ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟನೆ

● 60 ಎಕರೆಯಲ್ಲಿದೆ ಅತ್ಯಾಧುನಿಕ ಪಾರ್ಕ್: ಸೂಕ್ತ ಭದ್ರತಾ ವ್ಯವಸ್ಥೆ ● ಬಂದರುಗಳಿಗೆ ತಡೆರಹಿತ ಸಂಪರ್ಕ; ಲಾಜಿಸ್ಟಿಕ್ ಮೂಲಸೌಕರ್ಯದಲ್ಲಿ ಕ್ರಾಂತಿ ● ಮೈಸೂರು ರೈಲ್ವೆ ನಿಲ್ದಾಣದಲ್ಲಿ ಜನೌಷಧ್ ಕೇಂದ್ರಕ್ಕೂ ಚಾಲನೆ



ಮೈಸೂರು, ಮಾ.11(ಬಿಎಲ್‌ಯು)– ಮೈಸೂರಿನ ಹೊರವಲಯದ ಕಡಕೊಳ ತಾಂಡವಪುರ ಕೈಗಾರಿಕಾ ಪ್ರದೇಶದಲ್ಲಿ 100 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ನಾಳೆಯಿಂದ ಕಾರ್ಯಾರಂಭ ಮಾಡಲಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ವರ್ಚುವಲ್ ಮೂಲಕ ನಾಳೆ ಉದ್ಘಾಟನೆ ಮಾಡಲಿದ್ದಾರೆ ಎಂದು ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ತಿಳಿಸಿದರು. ಮೈಸೂರು ನೈರುತ್ಯ ರೈಲ್ವೆ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಗುತ್ತಿಗೆ ಪಡೆದ 60 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಕಾರ್ಯಾರಂಭಗೊಳ್ಳಲಿದೆ ಎಂದರು. ಈ ಪಾರ್ಕ್‌ನಲ್ಲಿ ಮೂರು ರೈಲು ಮಾರ್ಗಗಳು, ಗೋದಾಮುಗಳು, ಲೋಡಿಂಗ್ ಮತ್ತು ಅನ್ ಲೋಡಿಂಗ್ ಮಾಡಲು ಎಲ್ಲಾ ಸೌಕರ್ಯ ಕಲ್ಪಿಸಲಾಗಿದೆ.

ಆಡಳಿತ ಕಚೇರಿ ಕಟ್ಟಡ ಕೂಡ ನಿರ್ಮಾಣ ಮಾಡಿದ್ದು, ಸುಧಾರಿತ ವೈಶಿಷ್ಟ್ಯತೆಗಳೊಂದಿಗೆ ಸುಸಜ್ಜಿತ ಪಾರ್ಕ್ ನಿರ್ಮಿಸಲಾಗಿದೆ ಎಂದು ಶಿಲ್ಪಿ ಅಗರವಾಲ್ ಹೇಳಿದರು. ಪಾರ್ಕ್‌ನಲ್ಲಿ ಸುರಕ್ಷತೆ ಮತ್ತು ಭದ್ರತಾ ವ್ಯವಸ್ಥೆ ಮಾಡಲಾಗಿದ್ದು, ಅಗ್ನಿಶಾಮಕ ಸೇವೆ ಮತ್ತು ಸಿಸಿಟಿವಿ ಕಣ್ಗಾವಲು ಸೇರಿದಂತೆ ಬಿಗಿ ಭದ್ರತಾ ಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ ಎಂದರು. ಮೈಸೂರು ನೀಲಗಿರಿ ರಾಷ್ಟ್ರೀಯ ● 6ನೇ ಪುಟಕ್ಕೆ



ಮೈಸೂರು–ಚೆನ್ನೈ ಎರಡನೇ ವಂದೇ ಭಾರತ್ ರೈಲು ಸೇವೆಗೆ ಚಾಲನೆ

ಮೈಸೂರು ಹಾಗೂ ಚೆನ್ನೈ ನಡುವೆ ಮತ್ತೊಂದು ವಂದೇ ಭಾರತ್ ರೈಲು ಸಂಚಾರಕ್ಕೆ ಕೂಡ ಪ್ರಧಾನಮಂತ್ರಿ ನರೇಂದ್ರ ಮೋದಿ ನಾಳೆ ಚಾಲನೆ ನೀಡುವರು ಎಂದು ಶಿಲ್ಪಿ ಅಗರವಾಲ್ ಹೇಳಿದರು.

ಮೈಸೂರು ಯಾರ್ಡ್‌ನಲ್ಲಿ ನಿರ್ವಹಣಾ ಸೌಲಭ್ಯದ ಕಾಮಗಾರಿಗಳು ಪ್ರಗತಿಯಲ್ಲಿರುವ ಕಾರಣ ಸದ್ಯಕ್ಕೆ ಬೆಂಗಳೂರು–ಚೆನ್ನೈ ನಡುವೆ ವಂದೇ ಭಾರತ್ ರೈಲು ಸಂಚರಿಸಲಿದೆ. ಏಪ್ರಿಲ್ 5 ರಿಂದ ವಂದೇ ಭಾರತ್ ರೈಲು ಸಂಚಾರ ಆರಂಭವಾಗಲಿದೆ. ಬೆಳಿಗ್ಗೆ 6 ಗಂಟೆಗೆ ಮೈಸೂರಿಂದ ಸಂಚಾರ ಆರಂಭಿಸುವ ರೈಲು ಮಧ್ಯಾಹ್ನ 12.20 ಗಂಟೆಗೆ ಚೆನ್ನೈ ತಲುಪಲಿದೆ ಎಂದು ಹೇಳಿದರು. ಹಾಗೆಯೇ ಸಂಜೆ 5 ಗಂಟೆಗೆ ಚೆನ್ನೈನಿಂದ ಹೊರಡುವ ವಂದೇ ಭಾರತ್ ರೈಲು ರಾತ್ರಿ 11.30 ಗಂಟೆಗೆ ಮೈಸೂರಿಗೆ ಬರಲಿದೆ ಎಂದು ಶಿಲ್ಪಿ ಅಗರವಾಲ್ ತಿಳಿಸಿದರು. 2 ಪ್ರಮುಖ ನಗರಗಳ ಮಧ್ಯೆ ತಡೆರಹಿತ ಮತ್ತು ಆರಾಮದಾಯಕ ಅನುಭವ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು–ಮನಮಧುರೈ ವಿಶೇಷ ರೈಲು ಸಂಚಾರ ಆರಂಭ



ಸೋಮವಾರ ಮೈಸೂರು ಮನಮಧುರೈ ವಿಶೇಷ ರೈಲು ಸಂಚಾರಕ್ಕೆ ಸಂಸದ ಪ್ರತಾಪ್ ಸಿಂಹ ಹಸಿರು ನಿಶಾನೆ ತೋರಿದರು.

ಬೇಡಿಕೆ ಮೇರೆಗೆ ಮೈಸೂರು ಹಾಗೂ ತಮಿಳುನಾಡಿನ ಮನಮಧುರೈ ನಡುವೆ ಇಂದಿನಿಂದ ವಿಶೇಷ ರೈಲು ಸಂಚಾರ ಆರಂಭಗೊಂಡಿದೆ. ವಾರದಲ್ಲಿ ಒಂದು ಟ್ರಿಪ್ ಸಂಚರಿಸುವ ವಿಶೇಷ ರೈಲು ಸೋಮವಾರ ಸಂಜೆ 6.35 ಗಂಟೆಗೆ ಹೊರಟು ಮಾರನೆ ದಿನ ಬೆಳಿಗ್ಗೆ 9.10 ಗಂಟೆಗೆ ಮನಮಧುರೈ ತಲುಪಲಿದೆ.

ಹಾಗೆಯೇ ಮಾರ್ಚ್ 12 ರಂದು ಮಧ್ಯಾಹ್ನ 12 ಗಂಟೆಗೆ ಮನ ಮಧುರೈನಿಂದ ಹೊರಟು ಬುಧವಾರ ಸರಿ ರಾತ್ರಿ 1.55 ಗಂಟೆಗೆ ಮೈಸೂರಿಗೆ ಆಗಮಿಸಲಿದೆ. ವಿಶೇಷ ರೈಲು ಎರಡು ದಿಕ್ಕುಗಳಲ್ಲಿ ಮಂಡ್ಯ, ಮದ್ದೂರು, ರಾಮನಗರಂ, ಕೆಂಗೇರಿ, ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ನಿಲ್ದಾಣ, ಬಂಗಾರಪೇಟೆ, ತಿರುಪತ್ತೂರು, ಸೇಲಂ, ನಾಮಕ್ಕಲ್, ಕರೂರ್, ತಿರುಚ್ಚಿರಾಪಳ್ಳಿ, ದಿಂಡಿಗಲ್ ಮೂಲಕ ಸಂಚರಿಸಿ ಮಧುರೈ ನಿಲ್ದಾಣ ತಲುಪಲಿದೆ.

ಈ ರೈಲಿನಲ್ಲಿ ಎರಡನೇ ಹವಾ ನಿಯಂತ್ರಿತ ದರ್ಜೆಯ–2, ಮೂರನೇ ಹವಾ ನಿಯಂತ್ರಿತ ದರ್ಜೆಯ–6, ಸ್ಲೀಪರ್ ಕ್ಲಾಸ್ ಬೋಗಿಗಳು 9, ಸಾಮಾನ್ಯ ದ್ವಿತೀಯ ದರ್ಜೆ ಬೋಗಿಗಳು 2 ಮತ್ತು ಬ್ರೇಕ್ ವ್ಯಾನ್ ಕಮ್ ಜನರೇಟರ್ ಕಾರ್ 2 ಸೇರಿದಂತೆ ಒಟ್ಟು 21 ಬೋಗಿಗಳಿರುತ್ತವೆ. ಮಧುರೈ ಬಳಿ ಸೇತುವೆ ಕಾಮಗಾರಿ ನಡೆಯುತ್ತಿರುವ ಕಾರಣ ಮೈಸೂರಿನಿಂದ ಹೊರಡುವ ರೈಲು ಸದ್ಯಕ್ಕೆ ಮಧುರೈ ತನಕ ಸಂಚರಿಸಲಿದೆ. ಸೇತುವೆ ಕಾಮಗಾರಿ ಪೂರ್ಣಗೊಂಡ ಬಳಿಕ ತಿಂಗಳ ನಂತರ ಈ ರೈಲು ರಾಮೇಶ್ವರಂಗೆ ಸಂಚರಿಸಲಿದೆ.

ನಕ್ಕರೆ ಅದೇ ಸ್ವರ್ಗ

ಮಗ : (ತನ್ನ ತಂದೆಯೊಂದಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬ ಐಸ್ ಕ್ರೀಂ ಮಾರುತ್ತಾ ಬಂದಾಗ) ಅಪ್ಪಾ, ನೀನು ನನಗೆ ಐಸ್ ಕ್ರೀಂ ಕೊಡಿಸಲೇಬೇಕು. ಇಲ್ಲಾಂದ್ರೆ ಸರಿಯಲ್ಲ

ಅಪ್ಪ : ಏನೋ ಮಾಡ್ತೀಯಾ?

ಮಗ : ಕಂಡಕ್ಟರ್‌ಗೆ ನನ್ನ ನಿಜವಾದ ವಯಸ್ಸು ಹೇಳ್ತೀನಿ...!

ಮೈಸೂರು ಮಿತ್ರ

ಮಂಗಳವಾರ, 12 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........


ನಿಮ್ಮ ಆಂತರಿಕ ಸ್ಥಿತಿಯ ಮೇಲೆ ನಿಮಗೆ ನಿಯಂತ್ರಣವಿಲ್ಲದಿದ್ದರೆ ನೀವು ಯಾವುದೇ ಕೆಲಸ ಮಾಡಲಿ ಅಥವಾ ಏನೂ ಮಾಡದಿದ್ದರೂ ನಿಮಗೆ ಒತ್ತಡ ಇರುತ್ತದೆ. – ಜಗ್ಗೀ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಚಿ ಉಂಡರೆ ಹಸಿವಿಲ್ಲ

ನಿಮ್ಮ ಪತ್ರಗಳು

ಪ್ರಸಾದ ಹಸಿದವರನ್ನು ಸೇರಲಿ, ಕಸದವರನ್ನಲ್ಲಾ...

ಮಾನ್ಯರೆ,



ಶಿವರಾತ್ರಿಯಂದು ದೇವರ ದರ್ಶನಕ್ಕೆಂದು ನಂಜನಗೂಡಿನ ದೇವಸ್ಥಾನದಲ್ಲಿ ಸಾಲಲ್ಲಿ ಸಾಗುತ್ತಿದ್ದಾಗ ಕಂಡಿದ್ದು ಶಿವನಿಗೂ ಸಿಟ್ಟು ಬರಿಸುವ ದೃಶ್ಯ!

ಬಂದ ಭಕ್ತರೆಲ್ಲಾ ತಂದ ಹಣ್ಣು ಆವರಣದಲ್ಲಿ ರಾಶಿಯೇ ಆಗಿತ್ತು ಅಲ್ಲೇ ಗಂಧದಕಡ್ಡಿಯನ್ನು ಹಚ್ಚುವುದು, ಬಾಳೆ ಹಣ್ಣು ನೈವೇದ್ಯ ಮಾಡುವುದು, ಅಲ್ಲೇ ಕಾಯಿ ಒಡೆದು ನೀರು ಚೆಲ್ಲಿ ರಾಡಿ ಮಾಡಿದ್ದರು. ಅಲ್ಲಿ ಸಾಗುವವರೆಲ್ಲಾ ಹೆಬ್ಬೆರಳ ಮೇಲೆ ನಡೆಯುವಷ್ಟು ಕೆಸರುಮಯ, ಗಿಜಿಗಿಜಿಯಾಗಿತ್ತು. ಯಾರೋ ಹಣ್ಣಿನ ಮೇಲೆ ಕಾಲಿಟ್ಟು ಅದು ಅಪ್ಪಚ್ಚಿಯಾಗಿ ಹೋಗಿತ್ತು. ಇದನ್ನೆ ಅಲ್ಲಿರುವವರಿಗೆ ಹೇಳಿದರೆ ರೀ.. ಇದು ನಮ್ಮ ಸಂಪ್ರದಾಯ ಪರಂಪರೇ ಕಣ್ರೀ! ಅಂತಾ ದಬಾಯಿಸ್ತಾರೇ, ಹೌದು ಇದು ನಮ್ಮ ಆಚಾರ! ಇದು ನಮ್ಮ ಪರಂಪರೆ ಆದರೆ ಹಸಿದವರ ಪಾಲಾಗಬೇಕಿದ್ದ ಪ್ರಸಾದ ಕಸದವರ ಪಾಲಾದರೆ ಆ ಪರಶಿವನು ಮೆಚ್ಚಲಾರ. ನೀವು ತಂದ ನೈವೇದ್ಯ ಪ್ರಸಾದ ಹೊರಗೆ ಗೋಮಾತೆಗೋ ಹಸಿದವರಿಗೆ ಕೊಟ್ಟರೆ ನಿಮ್ಮ ಇಷ್ಟಾರ್ಥ ನೆರವೇರುತ್ತದೆಯೇ ಹೊರತು ಹೀಗೆ ಕಸದ ರಾಶಿ ಮಾಡಿದರೆ ಯಾವ ಭಗವಂತನೂ ಮೆಚ್ಚಲಾರ, ನೀವು ವಿದ್ಯಾವಂತರೋ ಅವಿದ್ಯಾವಂತರೋ ತಿಳಿಯದು.

ದಾನಂ ಶಿವಂ, ದಾಸೋಹಂ ಶಿವಂ ಎಂಬಂತೆ ಭಗವಂತನ ಸನ್ನಿಧಿಯಾದ ಭೂ ಮಂಡಲದಲ್ಲಿ ಬೆಳೆದು ಬಂದ ಪದಾರ್ಥ ವ್ಯರ್ಥವಾದರೆ ನೀವು ಮಾಡಿದ್ದು ವ್ಯರ್ಥ! ಬೇಡಿದ್ದು ವ್ಯರ್ಥ! ನೀವು ತಂದದ್ದು ಹಸಿದವರು ತಿಂದರೆ ಪರಮಾತ್ಮ ತಿಂದಂತೆ! ಗೋಮಾತೆ ತಿಂದರೆ 36 ಕೋಟಿ ದೇವರಿಗೆ ಸಮರ್ಪಿತವಾದಂತೆ! ಅಲ್ಲೇ ರಾಶಿಯೇ ಹಾಕಿದರೆ ಮುನ್ಸಿಪಾಲಿಟಿಯವರ ಕಸವಾದಂತೆ! ಭಕ್ತರೇ ನಿಮ್ಮ ಪ್ರಸಾದ ನೈವೇದ್ಯ ಹಸಿದವರ ಪಾಲಾಗಲಿ, ಕಸದವರಪಾಲಲ್ಲಾ!

–ನೊಂದ ಭಕ್ತರು.

ಹದಗೆಟ್ಟಿರುವ ಬಸ್ ನಿಲ್ದಾಣ ನವೀಕರಣಗೊಳಿಸಿ



ಮಾನ್ಯರೇ,

ಸಾಂಸ್ಕೃತಿಕ ಮತ್ತು ಸ್ವಚ್ಛ ನಗರವೆಂದೇ ಮೈಸೂರು ಸುಪ್ರಸಿದ್ಧವಾಗಿದೆ. ಆದರೆ ಮೈಸೂರಿನ ಹೃದಯ ಭಾಗವಾಗಿರುವ ನಗರ ಬಸ್ ನಿಲ್ದಾಣದ ಗ್ರಾಮೀಣ ವಿಭಾಗದ ಬಸ್ ನಿಲ್ದಾಣ ಸಂಪೂರ್ಣವಾಗಿ ಹದಗೆಟ್ಟು ಸುಮಾರು ವರ್ಷಗಳೇ ಕಳೆದರೂ ನಗರದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸದೆ ಇರುವುದು ವಿಪರ್ಯಾಸ.

ಬೇಸಿಗೆಯಾದ್ದರಿಂದ ಬಸ್‌ಗಳ ಸಂಚಾರದಿಂದ ಅತಿಯಾದ ಧೂಳೇಳುತ್ತಿರುವುದರಿಂದ ಇಲ್ಲಿರುವ ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಧೂಳಿನಿಂದಾಗಿ ಪ್ರಯಾಣಿಕರು ತಂಗುದಾಣಗಳಲ್ಲಿ ಕುಳಿತುಕೊಳ್ಳಲು ಆಗುತ್ತಿಲ್ಲ. ಕೆಲ ಗುಂಡಿಗಳು ಇರುವುದರಿಂದ ಬಸ್ಸನ್ನು ಹತ್ತಲು ಹಿರಿಯ ನಾಗರಿಕರು ಮತ್ತು ವಿದ್ಯಾರ್ಥಿಗಳು ಓಡಿಬರುವಾಗ ಬಿದ್ದು ಅನಾಹುತಗಳು ಸಂಭವಿಸುತ್ತಿರುವುದು ಸಾಮಾನ್ಯವಾಗಿವೆ.

ಇನ್ನೂ, ಮಳೆಗಾಲ ಆರಂಭವಾದರೆ ಕೆಸರುಮಯವಾಗಲಿದೆ .ಆದ್ದರಿಂದ ನಗರ ವಿಭಾಗಕ್ಕೆ ಇರುವ ಹಾಗೆ ಗ್ರಾಮೀಣ ವಿಭಾಗದ ನಿಲ್ದಾಣದಲ್ಲೂ ಕಾಂಕ್ರೀಟ್ ಹಾಕುವುದು ಮತ್ತು ಪ್ರಯಾಣಿಕರಿಗೆ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಮಾಡಲು ಅಧಿಕಾರಿಗಳು ಗಮನಹರಿಸಲಿ.

– ಪ್ರಜ್ವಲಿತ ಎ ಪಿ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ರಾಜ್ಯಸಭೆಗೆ ಸುಧಾಮೂರ್ತಿ ಆಯ್ಕೆ ಅರ್ಥಪೂರ್ಣ

ಮಾನ್ಯರೆ,



ಸರಳ, ಸಜ್ಜನಿಕೆ, ಸಮಾಜಮುಖಿ ಕಾರ್ಯಗಳಿಗೆ ಇನ್ನೊಂದು ಹೆಸರು ಇನ್ಫೋಸಿಸ್‌ನ ಸುಧಾಮೂರ್ತಿ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರಸ್ತುತ ಮಹಿಳಾ ದಿನಾಚರಣೆಯ ಅಂಗವಾಗಿ ಕೇಂದ್ರ ಸರ್ಕಾರ ಸುಧಾಮೂರ್ತಿಯವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಿರುವುದು ಅರ್ಥಪೂರ್ಣ ನಿರ್ಧಾರವಾಗಿದೆ.

ಸುಧಾಮೂರ್ತಿ ಅವರು ಕರ್ನಾಟಕದ ಶಿಗ್ಗಾಂವ್‌ನ ಡಾ. ಆರ್.ಹೆಚ್.ಕುಲಕರ್ಣಿ ಮತ್ತು ವಿಮಲಾ ದಂಪತಿ ಪುತ್ರಿಯಾಗಿ (1950 ಆಗಸ್ಟ್ 19) ಜನಿಸಿದರು. ದೇಶಸ್ಥ ಮಾಧ್ವ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಸುಧಾಮೂರ್ತಿಯವರು ಬಿವಿಬಿ ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಮುಗಿಸಿದರು. ತರಗತಿಯಲ್ಲಿ ಮೊದಲಿಗರಾಗಿ ಯಶಸ್ವಿ ಸಾಧನೆ ಮಾಡಿದ್ದರಿಂದ ಆಗಿನ ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸ್ ಅವರಿಂದ ಚಿನ್ನದ ಪದಕ ಪಡೆದುಕೊಂಡರು. ನಂತರ ಅವರು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ)ಯಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಇ ಪದವಿ ಪಡೆದುಕೊಂಡು ಸಾಧನೆ ಮಾಡಿದ್ದರು. ಪ್ರಥಮ ಸ್ಥಾನ ಪಡೆದುಕೊಂಡ ಅವರು ಭಾರತೀಯ ಎಂಜಿನಿಯರ್‌ಗಳ ಸಂಸ್ಥೆ (ಐಐಇ)ಯಿಂದ ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದರು.

ಸುಧಾಮೂರ್ತಿಯವರು ಇನ್ಫೋಸಿಸ್ ಕಂಪನಿ ಸ್ಥಾಪನೆ ಮಾಡುವಲ್ಲಿ ತಮ್ಮ ಪತಿ ನಾರಾಯಣಮೂರ್ತಿಯವರಿಗೆ ಬೆನ್ನೆಲುಬಾಗಿ ನಿಂತಿದ್ದರಿಂದ ಇನ್ಫೋಸಿಸ್ ಈಗ ಜಗತ್ತಿನ ಪ್ರತಿಷ್ಠಿತ ತಂತ್ರಜ್ಞಾನ ಸಂಸ್ಥೆಗಳಲ್ಲಿ ಒಂದಾಗಿದೆ. ಇದರ ಜೊತೆಗೆ ಅತಿವೃಷ್ಟಿ, ಕೋವಿಡ್, ಶಿಕ್ಷಣ, ಮಹಿಳಾ ಅಭಿವೃದ್ಧಿ ಮುಂತಾದ ಹಲವಾರು ಕ್ಷೇತ್ರಗಳ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿರುವ ಇವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿರುವುದು ರಾಜ್ಯಕ್ಕೆ ಸಂದ ಗೌರವವಾಗಿದೆ.

–ರಾಸುಮ ಭಟ್, ಚಿಕ್ಕಮಗಳೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಬಿಡಲೊಲ್ಲದು ಪೂರ್ವಜರ ಅಲಿಖಿತ ಸಂಸ್ಕಾರ...!


ಇತ್ತೀಚೆಗೆ ಹಿರಿಯರೊಬ್ಬರು ಪರಿಚಯವಾದರು. ಬ್ಯಾಂಕ್ ಉದ್ಯೋಗಿ ಸತ್ಯನಾರಾಯಣ ಅಂತ. ವಯಸ್ಸು 70 ದಾಟಿರಬಹುದು. ಮಗ, ಮಗಳು, ಸೊಸೆ, ಮೊಮ್ಮಕ್ಕಳು, ಪತ್ನಿಯ ಜೊತೆ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಬಹಳ ಶಿಸ್ತಿನ ಮನುಷ್ಯ. ಮಾತುಕತೆ, ವ್ಯವಹಾರ, ನಡವಳಿಕೆಗಳಲ್ಲಿ ಸ್ವಲ್ಪ ಖಡಕ್ಕೇ! ಅವರು ನನ್ನ ಸಂಪರ್ಕಕ್ಕೆ ಐದಾರು ಸಲ ಸಿಕ್ಕಿ ಮಾತಾಡಿದ್ದರು. ಅವರ ತಂದೆ–ತಾಯಿ ಬದುಕಿಲ್ಲ. ಅಣ್ಣ ತಮ್ಮಂದಿರೆಲ್ಲ ದೊಡ್ಡ ದೊಡ್ಡ ಕೆಲಸಗಳಲ್ಲಿ ಬೇರೆ ಬೇರೆ ಊರುಗಳಲ್ಲಿ ವಾಸವಾಗಿದ್ದಾರೆ. ಬಹುಪಾಲು ಹಿರಿಯರ ವಿಶ್ರಾಂತ ಬದುಕು ಹೀಗೇ ಇರಬಹುದು.

ಸ್ವಲ್ಪ ಅನುಕೂಲತೆಗಳಿರುವ ಹಿರೀಕರ ಬದುಕುಗಳು ಸ್ವಲ್ಪ ಹೆಚ್ಚುಕಮ್ಮಿ ಹೀಗೆಯೇ. ನಾನು ಹೇಳ ಹೊರಟಿರುವುದು ಅದನ್ನಲ್ಲ! ಅದೇನೆಂದರೆ ಆ ಹಿರಿಯರು ಪ್ರತೀ ಬಾರಿ ಮಾತಾಡುವಾಗಲೂ 'ನೋಡಿ ರಮೇಶ್ ನಮ್ಮ ತಂದೆಯವರು ಹೇಳ್ತಾ ಇದ್ರು' ಅಂತಾನೇ ಮಾತು ಶುರು ಮಾಡೋದು. ಸಾಕಷ್ಟು ಬಾರಿ ಅವರ ತಂದೆ ತಾಯಿಯವರನ್ನು ಅವರ ಮಾತಿನಲ್ಲಿ ತರೋರು. ಮಾತಾಡುವ ಪ್ರತೀ ಸಂದರ್ಭಗಳಲ್ಲೂ ಅವರ ತಂದೆತಾಯಿ ಕಾಲದ ಯಾವುದೋ ಒಂದು ಘಟನೆಯನ್ನೋ, ಅವರಾಡಿದ ಮಾತನ್ನೋ ನೆನಪಿಸಿಕೊಂಡು ಮಾತಿನ ಮಧ್ಯಕ್ಕೆ ತಂದು ಅವತ್ತಿನ ನಮ್ಮ ಮಾತುಕತೆಯನ್ನು ಮುಗಿಸುತ್ತಿದ್ದರು.


ಕುತೂಹಲಕ್ಕೆ ನಿಮ್ಮ ತಂದೆ ಏನಾಗಿದ್ದರು ಎಂದು ಕೇಳಿದೆ! ಆ ಕಾಲಕ್ಕೆ ಅವರು ಎಸ್ಸೆಸ್ಸೆಲ್ಸಿ ಫೇಲು, ಕೋಲಾರದ ಎ.ಸಿ. ಕಚೇರಿಯಲ್ಲಿ ಸಣ್ಣ ನೌಕರಿಯಲ್ಲಿದ್ದರು. ಆದರೂ ನಮ್ಮ ತಂದೆ ನಮಗೆಲ್ಲಾ ಹೇಳೋರು, ನಮಗೆ ಏನೂ ಅನುಕೂಲ ಇಲ್ಲ ಎಂದು ಕೊರಗುತ್ತಾ ಕೂರಬೇಡಿ. ಏನೆಲ್ಲಾ ಬೇಕು ಅನ್ನಿಸುತ್ತೋ ಅದನ್ನು ಪಡೆಯೋಕೆ ವಾಮಮಾರ್ಗ ಹಿಡಿಯಬೇಡಿ. ನಾನು ನಿಮಗೆ ಆಸ್ತಿ, ಹಣ ಅನುಕೂಲಗಳನ್ನು ಮಾಡಲಾರೆ. ವಿದ್ಯೆ, ವಿನಯ, ಸಂಸ್ಕಾರಗಳನ್ನು ಮಾತ್ರ ಕೊಡೋದಿಕ್ಕೆ ಸಾಧ್ಯ ಆಗುತ್ತೆ, ಅದನ್ನಷ್ಟೇ ಕೊಡುತ್ತೇನೆ. ನಿಮ್ಮ ಮುಂದಿನ ತಲೆಮಾರಿಗೆ ನೀವೂ ಅದನ್ನೇ ಹಂಚುತ್ತಾ ಹೋಗಿ! ನೀವು ಬಯಸಿದ್ದೆಲ್ಲಾ ನಿಮ್ಮನ್ನೇ ಹುಡುಕಿಕೊಂಡು ಬರುತ್ತೆ, ಆತುರ ಬೇಡ! ನಿಂತು ಹೊರಡಿ, ಎನ್ನುತ್ತಿದ್ದರು ಅಂತ ಅವರು ಹೇಳ್ತಾ ಇದ್ರು ಅಂತ ಪದೇ ಪದೆ ನೆನಪಿಸಿಕೊಳ್ಳುತ್ತಿದ್ದರು.

ಇವತ್ತು ನಮ್ಮೆಲ್ಲರಿಗೂ ಆಸ್ತಿ, ಅನುಕೂಲ, ಸಾಮಾಜಿಕ ಸ್ಥಾನಮಾನ ಹೀಗೆ ಎಲ್ಲವೂ ಇದೆ ಇವರೆ. ಆದರೆ ಮಕ್ಕಳಿಗೆ ನಮ್ಮ ಹಿರಿಯರು ಬಾಳಿದ ಬಾಳ್ವೆಯನ್ನು ಆಗಾಗ ಹೇಳಬೇಕು ಅನ್ನಿಸುತ್ತೆ. ಆದರೆ ಮಕ್ಕಳು ಏನೆಂದುಕೊಳ್ಳುತ್ತಾರೋ ಎನ್ನುವ ಆತಂಕ ನನ್ನದು. ಆದರೂ ಮನಸ್ಸು ತಡೆಯುವುದೇ ಇಲ್ಲ. ಬಿಡುವಿನ ವೇಳೆಯಲ್ಲಿ ಮಕ್ಕಳ ಮುಂದೆ ನಾನು ಪದೇ ಪದೆ ಹೇಳುತ್ತಲೇ ಇರುತ್ತೇನೆ ಎಂದರು. ಯಾಕೆ ಆ ಹಿರಿಯರ ಮಾತುಗಳು ನನಗೆ ಇಲ್ಲಿ ಮುಖ್ಯ ಎನ್ನಿಸಿತು ಎಂದರೆ, ಲಕ್ಷಾಂತರ ಕೋಟ್ಯಾಂತರ ಬೆಲೆಬಾಳುವ ಆಸ್ತಿ, ಅನುಕೂಲಗಳನ್ನು ಮಕ್ಕಳಿಗಾಗಿ ಮಾಡಿಡಲು ತಮ್ಮ ಆರೋಗ್ಯ ಲೆಕ್ಕಿಸದೆ ದುಡಿದು ಸುಣ್ಣವಾಗಿ ಹೋದ ಅಪ್ಪಂದಿರ ಬಗ್ಗೆ ಕೆಲವರು ಯಾವ ಮುಲಾಜನ್ನೂ ಇಟ್ಟುಕೊಳ್ಳದೆ ನಿಷ್ಠೂರವಾಗಿ ಮಾತಾಡುವ ಪರಿ ನಮಗೆ ಗೊತ್ತಿದೆ. ನಮ್ಮಪ್ಪ, ನಮ್ಮ ಅಣ್ಣನಿಗೆ ಎರಡೆಕರೆ ಜಾಗ ಆಸ್ತಿ ಕೊಟ್ಟ, ಯಾಕೆ ಕೊಡಬೇಕಿತ್ತು? ಆ ಇನ್ನೊಂದು ಕಟ್ಟಡವನ್ನು ತಂಗಿಯ ಹೆಸರಿಗೆ ಏಕೆ ಬರೆಯಬೇಕಿತ್ತು. ಅವಳಿಗೆ ಒಳ್ಳೇ ಕಡೆ ಸಂಬಂಧ ನೋಡಿ ಮದುವೆ ಮಾಡಿರ್ಲಿಲ್ವ, ನಮ್ಮ ಚಿಕ್ಕಪ್ಪ, ಚಿಕ್ಕಪ್ಪನ ಮಕ್ಕಳಿಗೆ ನಮ್ಮಪ್ಪ ಆ ಕಾಲದಲ್ಲಿ ಅವನಿಗೆ ಮಕ್ಕಳು ಜಾಸ್ತಿ ಅಂತ ಬಾಡಿಗೆ ಬರೋ ಅಂಗಡಿ ಮನೇನ ಯಾಕೆ ಬಿಟ್ಟುಕೊಡಬೇಕಿತ್ತು? ಹೀಗೆ ಮಾತಾಡುವವರನ್ನು ಸಾಕಷ್ಟು ನೋಡಿದ್ದೇವೆ. ಯಾಕೆ ಹೀಗೆ ಮಾತುಗಳು ಹುಟ್ಟುತ್ತವೆ ಎಂದರೆ ಅಪ್ಪನಿಂದ ಮಕ್ಕಳಿಗೆ ಅನುಕ್ರಮವಾಗಿ ಆಸ್ತಿ ಮತ್ತು ಅನುಕೂಲಗಳು ಸಕ್ರಮವಾಗಿ ವರ್ಗಾವಣೆಯಾಗಿರುತ್ತವೆ. ಆದರೆ ಕೆಲವರಿಗೆ ಮಾತ್ರ ಆಸ್ತಿ ಅನುಕೂಲಗಳ ಜೊತೆ ಅಪ್ಪ ಅಮ್ಮನ ನೀತಿ–ನ್ಯಾಯ, ಸಂಸ್ಕಾರ, ಮಾತು, ಬವಣೆ, ಬದುಕು ಎಲ್ಲವೂ ಎದೆಯ ಭೂಪಟದಲ್ಲಿ ಅಚ್ಚೊತ್ತಿದ್ದಂತೆ ಸಂಸ್ಕಾರದ ರೂಪದಲ್ಲಿ ಬಂದಿರುತ್ತವೆ. ಅದು ವಂಶವಾಹಿನಿಯಂತೆ ಬದುಕಿಗೊಂದು ಸಂಸ್ಕಾರ, ಸಾಕೆಂಬುವ ಸಿರಿತನ, ಹಂಚುಣ್ಣುವ ದೊಡ್ಡತನದ ಜೊತೆಗೆ ಪ್ರತಿಭೆ, ಕಲೆ, ಅಂಗಸೌಷ್ಠವ ಇತ್ಯಾದಿಗಳು ಜೀನ್ಸ್‌ನ ಜೊತೆ ವರ್ಗಾವಣೆಯಾಗಿರುತ್ತದೆ. ಆ ಮನುಷ್ಯ ಒಂದು ಘಂಟೆ ಮಾತಾಡುವಾಗಲೂ, ಐದಾರು ಬಾರಿಯಾದರೂ ಅವರ ತಂದೆ–ತಾಯಿ ಕಟ್ಟಿಕೊಟ್ಟ, ಹೇಳುತ್ತಿದ್ದ ಮಾತುಗಳನ್ನು ಮತ್ತೆ ಮತ್ತೆ ನೆನೆಸಿಕೊಳ್ಳುತ್ತಿದ್ದಾಗ ನನಗೂ ಅಂಥದೇ ಮರುಕಳಿಸಿ ನಿಮಗೂ ಅಂಥದೇನಾದರೂ ಇದ್ದರೆ ನೆನಪಿಸೋಣವೆಂದು ಈ ಅಂಕಣ ಬರೆದೆ. ಇದೊಂದು ಆತ್ಮೀಯ ಪತ್ರದ ಒಕ್ಕಣೆಯಂತಿರಬೇಕು. ಮಾಹಿತಿ ಕೋಶದಂತಿರಬಾರದೆಂದೆನಿಸಿ ಬರೆಯಲು ಕುಳಿತಾಗ ಬಿಟ್ಟೂ ಬಿಡದೆ ಡಾ. ರಾಜ್‌ಕುಮಾರ್ ನೆನಪಾದರು.


ಮೀಡಿಯಾಗಳಲ್ಲಿ ಡಾ. ರಾಜ್‌ಕುಮಾರ್ ಅವರ ಆರಂಭದ ಸಂದರ್ಶನಗಳಿಂದ ಹಿಡಿದು ಕಡೆಯ ಸಂದರ್ಶನಗಳವರೆಗೆ ಒಂದಲ್ಲಾ ಒಂದು ಸಂದರ್ಶನಗಳನ್ನು ನಾವೂ ನೀವೂ ನೋಡಿರುತ್ತೇವೆ. ಯಾವುದಾದರೊಂದು ಸಂದರ್ಶನವನ್ನು ನೆನಪಿಸಿಕೊಳ್ಳಿ, ನಮ್ಮಪ್ಪಾಜಿ ಹೇಳ್ತಿದ್ರು, ಹುಬ್ಬನ್ನ ಪಾತ್ರಕ್ಕೆ ತಕ್ಕಂತೆ ಸರಿ ಮಾಡ್ಕೋಬೇಕು ಕಂದ, ರಂಗಭೂಮಿನೇ ದೇವರು. ತಿನ್ನೋ ಅನ್ನನ ಚೆಲ್ಲಬಾರದು ಕಂದ ಅಂತ ನಮ್ಮಪ್ಪಾಜಿ ಯಾವಾಗಲೂ ಹೇಳೋರು ಅಂತ ಸಾಕಷ್ಟು ಸಂದರ್ಶನಗಳಲ್ಲಿ ಡಾ.ರಾಜ್‌ಕುಮಾರ್ ಅವರು ಮಾತಾಡಿದ್ದುಂಟು. ಅದು ಅಭಿನಯ ಇರಲಿ, ಜೀವನ ಇರಲಿ, ಜೀವನ ಮೌಲ್ಯಗಳಿರಲಿ ಸಂದರ್ಭಕ್ಕೆ ಒದಗಿ ಬರುವ ಅದು ಯಾವುದೇ ಇರಲಿ, ಅಲ್ಲೆಲ್ಲಾ ಅಪ್ಪಾಜಿ ಹೇಳುತ್ತಿದ್ದ ಮಾತುಗಳನ್ನು ನೆನಪಿಸಿಕೊಳ್ಳುತ್ತಿದ್ದ ಅವರ ಸಂದರ್ಶನಗಳು ನೆನಪಾಗಿ ಹೋಯ್ತು. ಇವತ್ತಿಗೆ ರಂಗಭೂಮಿ, ಸಿನಿಮಾಗಳಲ್ಲಿ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರಿಗಿಂತ ರಾಜ್‌ಕುಮಾರ್ ಹೆಚ್ಚು ಯಶಸ್ಸನ್ನು ನೋಡಿದವರು. ಅಂಥಾ ಕಾಲದಲ್ಲೂ ಅವರು ಅವರ ತಂದೆ ಹೇಳುತ್ತಿದ್ದ ಮಾತುಗಳನ್ನು ನೆನಸಿಕೊಳ್ಳುತ್ತಾ ವಿನಯದಿಂದ ಬೆಳೆದರು. ಅವರ ಮಕ್ಕಳು ಈಗಲೂ ಅದನ್ನೇ ಮುಂದುವರೆಸಿಕೊಂಡು ಅಪ್ಪಾಜಿ ಹೇಳ್ತಿದ್ರು ಅಂತ ಮಾತಾಡ್ತಾರೆ. ಅಂದರೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ರಿಜಿಸ್ಟರ್ ಆಗದೆ ಮನಸ್ಸೆಂಬ ಹಾಳೆಗಳ ಮೇಲೆ ಹೆಬ್ಬೆಟ್ಟು ಒತ್ತಿ ಬರೆದುಕೊಟ್ಟ ಶುದ್ಧ ಕ್ರಯಪತ್ರದ ಸಂಸ್ಕಾರದ ಫಲವೇ ನಮ್ಮ ಜೀವನಾನುಭವ.



ಕುವೆಂಪು



ಮಾಸ್ತಿ ವೆಂಕಟೇಶ ಅಯ್ಯಂಗಾರ್



ಡಾ.ರಾಜ್‌ಕುಮಾರ್

> ಅನುದಿನ ನಮ್ಮನ್ನು ರೂಪಿಸಿ ನಮ್ಮನ್ನು ಗೆಲ್ಲಿಸುವ ಸಾಪೇಕ್ಷ ಸಂಸ್ಕಾರವೇ ಆತ್ಮ ಸಾಕ್ಷಾತ್ಕಾರಗಳು. ನಮ್ಮ ಹಿರಿಯರು ಒಂದಲ್ಲಾ ಒಂದು ವಿಧದಲ್ಲಿ ನಮಗಾಗಿ ಬಿಟ್ಟುಹೋದ ಆತ್ಮಚರಿತ್ರೆಗಳು. ಸಾಮಾನ್ಯವಾಗಿ ಸಾಧಕರ, ಪ್ರಖ್ಯಾತರ ಆತ್ಮಚರಿತ್ರೆಗಳನ್ನು ಓದುವಾಗ ಅವರ ಸಾಧನೆಗಳನ್ನು ಪಕ್ಕಕ್ಕಿಟ್ಟು ಅವರ ಬದುಕಿಗೆ ಇಷ್ಟೆಲ್ಲಾ ಸಾಧಿಸಲು, ಆ ಸಾಧಿಸುವ ಛಲ, ಸಾಧಿಸಿದ ಶಕ್ತಿ, ಸಾಧಿಸುವ ಗುಣ ಎಲ್ಲಿಂದ ಬಂತು? ಹೇಗೆ ಬಂತೆಂದು ಅದೇ ಆತ್ಮಚರಿತ್ರೆಯಲ್ಲಿನ ಪುಟಗಳಲ್ಲಿ ಅವರ ವೈಯಕ್ತಿಕ ಬದುಕಿನ ಮೇಲೆ ಕಣ್ಣಾಡಿಸಿ ನೋಡುವ ಚಾಳಿ ನನಗೆ. ಅಲ್ಲಿ ಗೋಚರಿಸಿದ ಈ ಆತ್ಮ ಸಾಕ್ಷಾತ್ಕಾರ ಸತ್ಯವೇ ಅವರ ಪೂರ್ವಜರು ಕೊಟ್ಟ ಆತ್ಮ ಚರಿತ್ರೆಗಾಗುವಷ್ಟು ಅಲಿಖಿತ ಸಂಸ್ಕಾರ ಮತ್ತು ಜೀವ ತುಂಬಿದ ಅನುಭವದ ಸಾರ.

ರಾಷ್ಟ್ರಕವಿ ಕುವೆಂಪು ಅವರು ಬಾಲಕರಾಗಿದ್ದಾಗಿನಿಂದ ರಾಷ್ಟ್ರಕವಿಯಾಗುವವರೆಗಿನ ನೆನಪಿನ ದೋಣಿಯೆಂಬ ಆತ್ಮಚರಿತ್ರೆಯಲ್ಲಿ ಬರೆಯುತ್ತಾರೆ. ಅವರ ಕುಪ್ಪಳ್ಳಿಯ ಮನೆಯಲ್ಲಿ ಕೂಡು ಕುಟುಂಬವಿತ್ತು. ಅಪ್ಪ ಅಮ್ಮ ಒಕ್ಕಲು ಸಂಸ್ಕೃತಿಯ ಶ್ರೀಮಂತಿಕೆಯಲ್ಲಿ ಬಾಳಿದವರು. ತಮ್ಮ ತಂದೆ ತಾಯಿಯ ಬಗ್ಗೆ ನೆಲದ ಒಡಲಿನಂಥಾ ಮಾತುಗಳನ್ನು ಅವರು ಬರೆಯುತ್ತಾರೆ. ಇದೊಂಥರ 'ಮೈ ಆಟೋಗ್ರಾಫ್' ಥರ. ಯಾರನ್ನೂ ಬಿಡದ ಎಲ್ಲರನ್ನೂ ಕೂಡ ತನ್ನ ತೊಳ್ತೆಕ್ಕೆಯೊಳಕ್ಕೆ ತಂದುಕೊಳ್ಳುತ್ತಾ ಹೃದಯ ಹೃದಯಗಳಲ್ಲಿ ತೇಲುವ ನೆನಪಿನ ದೋಣಿ. ಪಿತೃ ಪಕ್ಷದ ದಿನ ಎಡೆ ಹಾಕಿ ಧೂಪ ಹಾಕುವುದು ಶಾಸ್ತ್ರ ಸಂಪ್ರದಾಯ. ಆದರೆ ಅನುದಿನ ನಮ್ಮನ್ನು ರೂಪಿಸಿ ನಮ್ಮನ್ನು ಗೆಲ್ಲಿಸುವ ಸಾಪೇಕ್ಷ ಸಂಸ್ಕಾರವೇ ಆತ್ಮ ಸಾಕ್ಷಾತ್ಕಾರಗಳು. ನಮ್ಮ ಹಿರಿಯರು ಒಂದಲ್ಲಾ ಒಂದು ವಿಧದಲ್ಲಿ ನಮಗಾಗಿ ಬಿಟ್ಟುಹೋದ ಆತ್ಮ ಚರಿತ್ರೆಗಳು. ಸಾಮಾನ್ಯವಾಗಿ ಸಾಧಕರ, ಪ್ರಖ್ಯಾತರ ಆತ್ಮಚರಿತ್ರೆಗಳನ್ನು ಓದುವಾಗ ಅವರ ಸಾಧನೆಗಳನ್ನು ಪಕ್ಕಕ್ಕಿಟ್ಟು ಅವರ ಬದುಕಿಗೆ ಇಷ್ಟೆಲ್ಲಾ ಸಾಧಿಸಲು, ಆ ಸಾಧಿಸುವ ಛಲ, ಸಾಧಿಸಿದ ಶಕ್ತಿ, ಸಾಧಿಸುವ ಗುಣ ಎಲ್ಲಿಂದ ಬಂತು? ಹೇಗೆ ಬಂತೆಂದು ಅದೇ ಆತ್ಮಚರಿತ್ರೆಯಲ್ಲಿನ ಪುಟಗಳಲ್ಲಿ ಅವರ ವೈಯಕ್ತಿಕ ಬದುಕಿನ ಮೇಲೆ ಕಣ್ಣಾಡಿಸಿ ನೋಡುವ ಚಾಳಿ ನನಗೆ. ಅಲ್ಲಿ ಗೋಚರಿಸಿದ ಈ ಆತ್ಮ ಸಾಕ್ಷಾತ್ಕಾರ ಸತ್ಯವೇ ಅವರ ಪೂರ್ವಜರು ಕೊಟ್ಟ ಆತ್ಮ ಚರಿತ್ರೆಗಾಗುವಷ್ಟು ಅಲಿಖಿತ ಸಂಸ್ಕಾರ ಮತ್ತು ಜೀವ ತುಂಬಿದ ಅನುಭವದ ಸಾರ.

ಅಲ್ಲಿ ಸಿಗುವ ಈ ಸಂಸ್ಕಾರಗಳನ್ನೇ ನಾವು ಹಳೆಯ ಚಿನ್ನ ಎಂದು ಕರೆಯುವುದು. ಡಾ.ಗುರುರಾಜ ಕರ್ಜಗಿಯವರು ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದಾಗ ಅವರ ವಿದ್ಯಾರ್ಥಿಗಳನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮನೆಗೆ ಕರೆದುಕೊಂಡು ಹೋಗಿದ್ದರಂತೆ. ಕಾರಣ ಇಷ್ಟೆ, ಮಾಸ್ತಿ ಕನ್ನಡದ ಹೆಸರಾಂತ ಸಾಹಿತಿಗಳು, ಬೆಂಗಳೂರಿನ ಬಸವನಗುಡಿಯಲ್ಲಿ ಅವರ ಮನೆ. ಸುಮಾರು ಇಪ್ಪತ್ತೈದು ಮೂವತ್ತು ಜನ ವಿದ್ಯಾರ್ಥಿಗಳಿದ್ದರಂತೆ. ಎಲ್ಲ ವಿದ್ಯಾರ್ಥಿಗಳಿಗೂ ಮಾಸ್ತಿಯವರು ತಮ್ಮ ಮನೆಯಲ್ಲಿ ಚೌಚೌ ಬಾತ್, ಕಾಫಿ ಮಾಡಿಸಿ ತಣಿಸಿದ್ದರಂತೆ. ಕರ್ಜಗಿಯವರು ಹೀಗೇ ಮಾತಾಡುತ್ತಾ 'ಸಾರ್ ನೀವು ತುಂಬಾನೇ ತೊಂದ್ರೆ ತಗೊಂಡ್ರಿ, ಕಾಫಿ ತಿಂಡಿ ಅಂತ' ಎಂದರಂತೆ.

ಆ ಮಾತಿಗೆ ಮಾಸ್ತಿಯವರು ಹೇಳಿದರಂತೆ' ನೋಡಿ ಸ್ವಾಮಿ ತೊಂಭತ್ತು ವರ್ಷದ ಹಿಂದೆ ಈ ಭೂಮಿ ಮೇಲೆ ಒಂದು ಹುಳ ಹುಟ್ಟಿತ್ತು. ಅದಕ್ಕೆ ಅಳುವುದೊಂದನ್ನು ಬಿಟ್ಟು ಬೇರೇನೂ ಬರುತ್ತಿರಲಿಲ್ಲ. ಮುಂದೆ ಅದೇ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂಬ ಹೆಸರಿನಿಂದ ಹೆಸರಾಗಿ ಅದನ್ನು ನೋಡುವುದಕ್ಕೆ ದೂರದ ಊರಿನಿಂದ ಜನ ಬಂದು ಹೋಗುತ್ತಾರೆ ಎಂದರೆ, ಅದು ಭಗವಂತನ ಕೃಪೆ ಅಲ್ಲವೇ? ಕಾಫಿ ತಿಂಡಿ ಕೊಡಲಿಕ್ಕೆ ಈಗ ನಮಗೆಲ್ಲಾ ಅನುಕೂಲವಿದೆ. ನಾನು ಪುಟ್ಟ ಹುಡುಗನಾಗಿದ್ದಾಗ ನಮ್ಮನೆಯಲ್ಲಿ ತುಂಬಾ ಬಡತನ, ಯಾರೋ ಹಿರಿಯರೊಬ್ಬರು ಒಂದು ದಿನ ಮಧ್ಯಾಹ್ನ ನಮ್ಮ ಮನೆಗೆ ಬಂದರು. ಅವರಿಗೆ ತಿನ್ನಲಿಕ್ಕೆ ಏನನ್ನಾದರೂ ಕೊಡಲು ಮನೆಯಲ್ಲಿ ಏನೂ ಇರಲಿಲ್ಲ. ಅಂಗಡಿಗೆ ಹೋಗಿ ತಂದು ಕೊಡಲು ಕೈಯ್ಯಲ್ಲಿ ಕಾಸಿಲ್ಲ. ಆಗ ನಮ್ಮ ತಂದೆ ದೇವರ ಮನೆಯಲ್ಲಿ ದೇವರ ಪೂಜೆಗೆ ಅಂತ ಇಟ್ಟುಕೊಂಡಿದ್ದ ತಾಮ್ರದ ತಟ್ಟೆ, ತೀರ್ಥದ ಬಟ್ಟಲು ಎರಡನ್ನೂ ಬಂದಿರುವ ಆ ಹಿರಿಯರಿಗೆ ಗೊತ್ತಾಗದ ಹಾಗೆ ಹಿಂಬಾಗಿಲಿನಿಂದ ತೆಗೆದುಕೊಂಡು ಹೋಗಿ ಹತ್ತಿರದ ಗಿರವಿ ಅಂಗಡಿಯಲ್ಲಿ ಅಡವಿಟ್ಟು ಒಂದು ಅಚ್ಚು ಬೆಲ್ಲವನ್ನು ಮನೆಗೆ ತಂದರು. ಹಾಗೆ ತಂದವರೇ ಆ ಬೆಲ್ಲದ ನೀರಿನಲ್ಲಿ ಪಾನಕ ಮಾಡಿ ಆ ಹಿರಿಯರಿಗೆ ಕೊಟ್ಟು ಇಷ್ಟೇ ಸ್ವಾಮಿ ಇರೋದು ಎಂದರು. ಇದು ನಮ್ಮ ತಂದೆ ಕಲಿಸಿದ ಸಂಸ್ಕಾರ. ಇವತ್ತು ಮನೆಯಲ್ಲಿ ಏನೆಲ್ಲಾ ಇದೆ, ಇದ್ದಾಗ ಮಾಡೋದರಲ್ಲೇನು ಬಂತು ಬಿಡಿ ಎಂದರಂತೆ.

ಇವತ್ತು ಸಾವಿರ ಕೋಟಿ, ಲಕ್ಷ ಕೋಟಿ, ನೂರಾರು ಎಕರೆ ಜಮೀನು, ಮನೆ, ಕಟ್ಟಡ, ಆಸ್ತಿಪಾಸ್ತಿಗಳೆಲ್ಲಾ ಮನುಷ್ಯನ ಬಾಹ್ಯ ಶ್ರೀಮಂತಿಕೆಯ ಇಂಡೆಕ್ಸ್‌ಗಳಂತೆ ಕಂಡು, ಅವರ ಸ್ಥಾನಮಾನಗಳನ್ನು ಹೆಚ್ಚಿಸುತ್ತವೆ. ನಮ್ಮ ನಡುವೆಯೇ ಇರುವ ಕೆಲ ಸಂಸ್ಕಾರವಂಥ ಹಿರಿಯರ ಮಾತು, ನಡವಳಿಕೆ, ಸ್ವಭಾವ, ಜೀವನಾನುಭವಗಳು ನಮ್ಮಂಥವರಿಗೆ ಬ್ಯಾಂಕ್ ಬ್ಯಾಲೆನ್ಸುಗಳಂತೆ ಕಾಣುತ್ತವೆ. ಸರ್ವಜ್ಞ ಕೂಡ ಇಂಥದನ್ನೇ ಕುರಿತು ಬರೆದ ತ್ರಿಪದಿಗಳಿವೆ ನೋಡಿ!

ತಂದೆ ತಾಯಿಗಳ ಘನದಿಂದ ವಂದಿಸುವಂತೆ।
ಬಂದ ಕುತ್ತುಗಳು ಬಯಲಾಗಿ ಸ್ವರ್ಗವದು।
ಮುಂದೆ ಬಂದಕ್ಕು ಸರ್ವಜ್ಞ
ಗುರುಗಳಿಗೆ ಹಿರಿಯರಿಗೆ ।
ಶಿರಬಾಗಿ ಎರಗಿದರೆ ।
ನರಸುರರು ಒಲಿದು ಸಿರಿಸುರಿದು ಕೈಲಾಸ ।
ಕರತಲಾಮಲಕ ಸರ್ವಜ್ಞ।

ಹೀಗೆ ಈ ಒತ್ತಡದ ಜೀವನದಲ್ಲಿ ಹೊಟ್ಟೆಪಾಡಿಗಾಗಿ ತೆಗೆದುಕೊಳ್ಳುವ ರಿಸ್ಕು ಕ್ಯಾಲುಕ್ಯುಲೇಷನ್ನು, ಗೆಲುವಿನ ಹಿಂದೆ ಧಾವಿಸುವ ಅವಸರದ ನಡುವೆ ಎದೆಯಾಳದಲ್ಲೊಂದು ಆತ್ಮತೃಪ್ತಿಯ–ಬುದ್ಧಿ–ಭಾವ–ಬದುಕು–ಮೇಳವಿಸಿದರೆ ಅದೇ ಆತ್ಮಸಂಸ್ಕಾರ. ರಕ್ತದಲ್ಲೇ ಇರುವ ಹಿರಿಯರು ಕೊಟ್ಟ ಜೀವನ ಸಾಕ್ಷಾತ್ಕಾರ. ಏನಂತೀರಿ?

ಸಹಕಾರ ಸಂಘಗಳು ಸ್ವತಂತ್ರ–ಸ್ವಾಯತ್ತ ಸಂಸ್ಥೆಗಳಾಗಿ ಬೆಳೆಯಬೇಕು

- ಕಾಯ್ದೆ ತಿದ್ದುಪಡಿ ಅನಗತ್ಯ ; ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ
- ಸಹಕಾರ ಸಂಘಗಳ ಪದಾಧಿಕಾರಿಗಳು, ಸಿಇಓಗಳಿಗೆ ತರಬೇತಿ ಕಾರ್ಯಕ್ರಮ



ಹುಣಸೂರಿನ ಕನಕ ಭವನದಲ್ಲಿ ಹಮ್ಮಿಕೊಂಡಿದ್ದ ಸಹಕಾರ ಸಂಘಗಳ ಪದಾಧಿಕಾರಿಗಳು, ಸಿಇಓಗಳಿಗೆ ತರಬೇತಿ ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಮೈಸೂರು,ಮಾ.11(ಪಿಎಂ)– ಸಹಕಾರ ಸಂಘಗಳು ಸ್ವತಂತ್ರ ಮತ್ತು ಸ್ವಾಯತ್ತ ಸಂಸ್ಥೆಗಳಾಗಿ ಬೆಳೆಯಬೇಕು. ಆದರೆ ರಾಜ್ಯ ಸರ್ಕಾರವು ಸಹಕಾರ ಸಂಘಗಳಲ್ಲಿ ನಾಮ ನಿರ್ದೇಶನ ಮಾಡುವ ಸಲುವಾಗಿ ಕಾಯ್ದೆ ತಿದ್ದುಪಡಿಗೆ ಮುಂದಾಗಿರುವುದು ಅನಗತ್ಯ ಎಂದು ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಹೇಳಿದರು.

ಹುಣಸೂರಿನ ಕನಕ ಭವನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು, ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಹಾಗೂ ಮೈಸೂರು ಹಾಲು ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಹುಣಸೂರು ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಪದಾಧಿಕಾರಿಗಳು ಮತ್ತು ಸಿಇಓಗಳಿಗೆ ಸೋಮವಾರ ಹಮ್ಮಿಕೊಂಡಿದ್ದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಸಂಘಗಳು ಜನರ ಸಂಸ್ಥೆಗಳಾಗಿದ್ದು, ಈ ಕ್ಷೇತ್ರದಲ್ಲಿ ಸಹಕಾರ ತತ್ವ–ಮೌಲ್ಯಗಳ ಪಾಲನೆ ಅತ್ಯಂತ ಅಗತ್ಯ. ಈ ಕ್ಷೇತ್ರಕ್ಕೆ ಸ್ವಾಯತ್ತೆ ಅತ್ಯಂತ ಮುಖ್ಯ. ಆದರೆ ಇಂದಿನ ರಾಜ್ಯ ಸರ್ಕಾರವು ಸಹಕಾರ ಸಂಘಗಳಿಗೆ ನಾಮನಿರ್ದೇಶನ ಮಾಡುವುದಕ್ಕಾಗಿ ಕಾಯ್ದೆ ತಿದ್ದುಪಡಿಗೆ ಕೈ ಹಾಕಿದ್ದು, ಇದು ಅನವಶ್ಯಕ. ಸಂಘಗಳ ಸದಸ್ಯರಿಂದ ಚುನಾವಣೆಯ ಮೂಲಕ ಆಯ್ಕೆಯಾದ ನಿರ್ದೇಶಕ ಮಂಡಳಿಯವರು ಆಡಳಿತ ನಡೆಸಬೇಕು. ಇದೇ ನ್ಯಾಯ. ಆದರೆ ಸರ್ಕಾರ ನಾಮ ನಿರ್ದೇಶನ ಮಾಡುವ ಮೂಲಕ ಸಹಕಾರ ಸಂಘಗಳಿಗೆ ಅನ್ಯಾಯ ಮಾಡಿ ರಾಜಕಾರಣ ಮಾಡಲು ಹೊರಟಿದೆ. ಇದನ್ನು ನಾವೆಲ್ಲರೂ ಪ್ರಶ್ನೆ ಮಾಡಬೇಕು ಎಂದು ತಿಳಿಸಿದರು.

ನಾಮನಿರ್ದೇಶನ ಕೈಬಿಡಿ: ಸರ್ಕಾರದ ಈ ನಡೆಯನ್ನು ವಿರೋಧಿಸಬೇಕಿದೆ. ಒಂದು ವೇಳೆ ಸರ್ಕಾರ ನಾಮನಿರ್ದೇಶನ ಮಾಡಿದರೂ ಅವರಿಗೆ ಮತದಾನ ಮಾಡುವ ಹಕ್ಕು ನೀಡಬಾರದು. ಸಹಕಾರ ಸಂಘಗಳಲ್ಲಿ ಚುನಾವಣೆ ಮೂಲಕ ಆಡಳಿತ ಮಂಡಳಿ ಆಯ್ಕೆ ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ತಲಾ ಒಂದು ಸ್ಥಾನ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ತಲಾ ಎರಡು ಸ್ಥಾನಗಳ ಮೀಸಲಾತಿ ಈಗಾಗಲೇ ಜಾರಿಯಲ್ಲಿದೆ ಆದ್ದರಿಂದ ಈ ಮೀಸಲಾತಿ ಮುಂದುವರೆಯಲಿ. ಆದರೆ ಸಹಕಾರ ಸಂಘಗಳು ಸ್ವಾಯತ್ತತೆಯಿಂದ ಉತ್ತಮವಾಗಿ ಬೆಳವಣಿಗೆಯಾಗಲು ಸರ್ಕಾರ ನಾಮನಿರ್ದೇಶನದ ತಿದ್ದುಪಡಿ ಕೈಬಿಡಬೇಕು ಎಂದು ಜಿ.ಡಿ. ಹರೀಶ್‌ಗೌಡ ಒತ್ತಾಯಿಸಿದರು.


ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್(ಎಂಸಿಡಿಸಿಸಿ) 2019ರವರೆಗೆ 62 ವರ್ಷಗಳ ಇತಿಹಾಸದಲ್ಲಿ ಕೇವಲ 350 ಕೋಟಿ ರೂ.ಗಳನ್ನು ಮಾತ್ರ ಠೇವಣಿ ಹೊಂದಿತ್ತು. ಆದರೆ 2019ರಲ್ಲಿ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ನಂತರದಲ್ಲಿ ಬ್ಯಾಂಕಿನಲ್ಲಿ 900 ಕೋಟಿ ರೂ. ಠೇವಣಿ ಸಂಗ್ರಹಿಸಲಾಯಿತು. ಜೊತೆಗೆ ಹೆಚ್ಚಿನ ಸಾಲ–ಸೌಲಭ್ಯಗಳನ್ನು ಜಿಲ್ಲೆಯಾದ್ಯಂತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತ ಸದಸ್ಯರಿಗೆ ನೀಡಲಾಗಿದೆ. ಆ ಮೂಲಕ ರೈತರು, ಬ್ಯಾಂಕಿನ ಅಭಿವೃದ್ಧಿಗೆ ಮಾತ್ರವಲ್ಲದೆ, ಜಿಲ್ಲೆ ಹಾಗೂ ಸಹಕಾರಿಗಳ ಶ್ರೇಯೋಭಿವೃದ್ಧಿಗೆ ಕೊಡುಗೆ ನೀಡಲಾಗಿದೆ. ಜಿಲ್ಲೆಯ ಅನೇಕ ಸಹಕಾರ ಸಂಘಗಳಿಗೆ ಸುಮಾರು 10 ಕೋಟಿ ರೂ.ಗಳಷ್ಟು ಕಟ್ಟಡ ಸಹಾಯಧನ ಒದಗಿಸಿಕೊಟ್ಟಿದ್ದೇನೆ ಎಂದು ಅವರು ವಿವರಿಸಿದರು.

ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಯೂನಿಯನ್ ನಿರ್ದೇಶಕರಾದ ಬಿ.ಮಹದೇವಸ್ವಾಮಿ, ಭೈರಪ್ಪ, ಮೈಮುಲ್ ನಿರ್ದೇಶಕ ಶಿವಗಾಮಿ ಹಾಗೂ ಇಲಾಖೆ ಅಧಿಕಾರಿಗಳು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಮಂಗಳವಾರ 12 ಮಾರ್ಚ್ 2024

ಬೆಂಗಳೂರು ಕುಡಿಯುವ ನೀರಿಗಾಗಿ ಕೆಆರ್‌ಎಸ್‌ನಿಂದ ನೀರು ಬಿಡುಗಡೆ; ತಮಿಳುನಾಡಿಗೆ ಹರಿಸಿಲ್ಲ: ನೀರಾವರಿ ಇಲಾಖೆ ಸ್ಪಷ್ಟನೆ



ಬೆಂಗಳೂರು, ಮಾ. 11– ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸಿಲ್ಲ. ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಗಾಗಿ ಹರಿಸಲಾಗಿದೆ ಎಂದು ನೀರಾವರಿ ಇಲಾಖೆ ಸ್ಪಷ್ಟಪಡಿಸಿದೆ.

ಬೆಂಗಳೂರಿಗೆ ನೀರಿನ ಬರ ಇದ್ದರೂ ತಮಿಳುನಾಡಿಗೆ ಕಾವೇರಿ ನೀರು ಹರಿಸಲಾಗುತ್ತಿದೆ ಎಂದು ಪ್ರತಿಪಕ್ಷಗಳ ಆರೋಪ ಹಿನ್ನೆಲೆಯಲ್ಲಿ ನೀರಾವರಿ ಇಲಾಖೆ ಪ್ರತಿಕಾ ಪ್ರಕಟಣೆ ಹೊರಡಿಸಿದೆ.

ಇಲಾಖೆಯ ಮೈಸೂರು ವಿಭಾಗ ಹಾಗೂ ಬೆಂಗಳೂರು ನಗರಕ್ಕೆ ಕುಡಿಯಲು ನೀರು ಸರಬರಾಜು ಮಾಡುವ ಉದ್ದೇಶಕ್ಕಾಗಿ ಮಳವಳ್ಳಿ ತಾಲೂಕಿನ ಶಿವಾ ಅಣೆಕಟ್ಟೆಯನ್ನು ಉಪಯೋಗಿಸಲಾಗುತ್ತಿದೆ. ಕಾವೇರಿ ನದಿಯಿಂದ ಬೆಂಗಳೂರು, ಮೈಸೂರು ಮತ್ತು ಇತರೆ ಪಟ್ಟಣ ಹಾಗೂ ಗ್ರಾಮಗಳಿಗೆ ಕುಡಿಯಲು ಹಾಗೂ ಕೈಗಾರಿಕೆಗಳಿಗೆ ಸರಬರಾಜು ಮಾಡಲು ಪ್ರತಿದಿನ 1000 ಕ್ಯೂಸೆಕ್‌ನಷ್ಟು ನೀರಿನ ಅಗತ್ಯತೆ ಇದೆ ಎಂದು ನೀರಾವರಿ ಇಲಾಖೆ ತಿಳಿಸಿದೆ.

ಬೆಂಗಳೂರು ಜಲ ಮಂಡಳಿ (ಬಿಡಬ್ಲ್ಯೂಎಸ್‌ಎಸ್‌ಬಿ) ನೀಡಿರುವ ಮಾಹಿತಿಯಂತೆ ಮಳವಳ್ಳಿ ತಾಲೂಕಿನ ಶಿವಾ ಅಣೆಕಟ್ಟೆ ಬಳಿಯಿಂದ ನೀರನ್ನು ತೊರೆಕಾಡನಹಳ್ಳಿವರೆಗೆ ಹರಿಸಿ, ಅಲ್ಲಿ ಸ್ಥಾಪಿಸಿರುವ ಜಲಸ್ಥಾವರದ ಮುಖಾಂತರ ಸುಮಾರು 1470 ಎಂಎಲ್‌ಡಿ (600 ಕ್ಯೂಸೆಕ್‌ನಷ್ಟು) ನೀರನ್ನು ಬೆಂಗಳೂರಿಗೆ ಸರಬರಾಜು ಮಾಡಲಾಗುತ್ತಿದೆ. ಮಾರ್ಚ್ 6ರಿಂದ 8ವರೆಗೆ ಶಿವಾ ಅಣೆಕಟ್ಟಿನಲ್ಲಿನ ನೀರಿನ ಮಟ್ಟವು ದಿನದಿಂದ ದಿನಕ್ಕೆ ಗಣನೀಯವಾಗಿ ಕಡಿಮೆಯಾಗಿ ಅಣೆಕಟ್ಟೆಯ ಮೇಲ್ಭಾಗದಿಂದ 36 ಇಂಚಿನಷ್ಟು ಕೆಳಮಟ್ಟ ತಲುಪಿದೆ. ಇದರಿಂದ, ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪ್ರಮಾಣವನ್ನು ಸರಬರಾಜು ಮಾಡಲು ವ್ಯತ್ಯಯವಾಗಿದೆ ಎಂದಿದೆ.

ಮಾರ್ಚ್ 9ರಂದು ಬೆಂಗಳೂರು ಜಲ ಮಂಡಳಿ ಅಧಿಕಾರಿಗಳು ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡಿ, ನೀರಿನ ಹರಿವಿನ ಪ್ರಮಾಣವನ್ನು ಹೆಚ್ಚಿಸಲು ಕೋರಿದ್ದಾರೆ. ಅದರಂತೆ ಕೆಆರ್‌ಎಸ್ ಜಲಾಶಯದಿಂದ ಹಂತ ಹಂತವಾಗಿ ನೀರನ್ನು ಏರಿಕೆ ಮಾಡಿ, ಸುಮಾರು 4780 ಕ್ಯೂಸೆಕ್‌ಗಳಷ್ಟು ನೀರನ್ನು ಹರಿಸಲಾಗಿದೆ. ನಂತರ, ಕೆಆರ್‌ಎಸ್ ಡ್ಯಾಂನಿಂದ ಕಾವೇರಿ ಪಾತ್ರದುದ್ದಕ್ಕೂ ಬೆಂಗಳೂರು ಜಲ ಮಂಡಳಿ ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿದ್ದಾರೆ ಎಂದು ಇಲಾಖೆ ವಿವರಿಸಿದೆ.

ಸಿ.ಡಿ.ಎಸ್. ಅಣೆಕಟ್ಟು, ರಾಮಸ್ವಾಮಿ ಅಣೆಕಟ್ಟು, ಮಾಧವ ಮಂತ್ರಿ ಅಣೆಕಟ್ಟು, ಮೇದಿನಿ ಅಣೆಕಟ್ಟು, ಸತ್ತೇಗಾಲ ಬಳಿಯಿರುವ ಅಣೆಕಟ್ಟು ಹಾಗೂ ಶಿವಾ ಅಣೆಕಟ್ಟುಗಳನ್ನು ಪರಿವೀಕ್ಷಣೆ ಮಾಡಲಾಗಿದೆ. ಅದರಂತೆ, ಸತ್ತೇಗಾಲ ಅಣೆಕಟ್ಟು ಹಾಗೂ ಶಿವಾ ಅಣೆಕಟ್ಟುಗಳಲ್ಲಿ ನೀರಿನ ಮಟ್ಟವು ತಳಮಟ್ಟ ತಲುಪಿದ್ದು, ತೀವ್ರ ಕೊರತೆ ಉಂಟಾಗಿದೆ. ಮಾರ್ಚ್ 9ರಂದು ಕೆಆರ್‌ಎಸ್‌ನಿಂದ 4780 ಕ್ಯೂಸೆಕ್ ಹಾಗೂ ಕಬಿನಿ ಜಲಾಶಯದಿಂದ 2000 ಕ್ಯೂಸೆಕ್ ನೀರನ್ನು ಹರಿಸಿದ್ದರ ಪರಿಣಾಮ ಮಾರ್ಚ್ 10ರ ಬೆಳಗ್ಗೆ ಶಿವಾ ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಅಣೆಕಟ್ಟೆಯ ಮೇಲ್ಭಾಗದಿಂದ 38 ಇಂಚು ಕೆಳಮಟ್ಟದಿಂದ 24 ಇಂಚಿಗೆ ತಲುಪಿದ್ದು (16 ಇಂಚು ಏರಿಕೆ) ನಿಧಾನವಾಗಿ ಏರಿಕೆಯಾಗಿದೆ ಎಂದಿದೆ.

ಮಾರ್ಚ್ 10ರ ಬೆಳಗ್ಗೆ 10 ಗಂಟೆಗೆ ಕೆಆರ್‌ಎಸ್‌ನ ನೀರಿನ ಹರಿವಿನ ಪ್ರಮಾಣವನ್ನು 4780 ಕ್ಯೂಸೆಕ್‌ನಿಂದ 2769 ಕ್ಯೂಸೆಕ್‌ಗೆ ಇಳಿಕೆ ಮಾಡಲಾಗಿದೆ. ಶಿವಾ ಅಣೆಕಟ್ಟೆಯ ನೀರಿನ ಮಟ್ಟವು ಮಧ್ಯಾಹ್ನ 12 ಗಂಟೆಗೆ 2 ಇಂಚು ಏರಿಕೆಯಾದ್ದರಿಂದ ಕೆಆರ್‌ಎಸ್‌ನ ನೀರಿನ ಹರಿವಿನ ಪ್ರಮಾಣವನ್ನು 2769 ಕ್ಯೂಸೆಕ್‌ನಿಂದ 1008 ಕ್ಯೂಸೆಕ್‌ಗೆ ಇಳಿಕೆ ಮಾಡಲಾಗಿದೆ. ಮಾರ್ಚ್ 10ರ ಸಂಜೆ 6.00 ಗಂಟೆಗೆ ಶಿವಾ ಅಣೆಕಟ್ಟೆಯ ನೀರಿನಮಟ್ಟ ಅಣೆಕಟ್ಟೆಯ ಮೇಲ್ಭಾಗದಿಂದ 18 ಇಂಚು ಕೆಳಗಡೆಯಿದ್ದು, ಹಿಂದಿನ ದಿನದ (ಮಾರ್ಚ್ 9) 36 ಇಂಚು ಕೆಳಮಟ್ಟಕ್ಕೆ ಹೋಲಿಸಿದರೆ, ಒಟ್ಟಾರೆ 18 ಇಂಚಿನಷ್ಟು ಏರಿಕೆಯಾಗಿದೆ. ಪ್ರಸ್ತುತ, ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪ್ರಮಾಣವನ್ನು ಸುಸ್ಥಿರಗೊಳಿಸಲಾಗುತ್ತಿದೆ. ಹೀಗಾಗಿ, ಕೆಆರ್‌ಎಸ್ ಜಲಾಶಯದಿಂದ 4,000 ಕ್ಯೂಸೆಕ್‌ಗೂ ಹೆಚ್ಚು ನೀರನ್ನು ತಮಿಳುನಾಡಿಗೆ ಹರಿಸಿಲ್ಲ. ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಗಾಗಿ ಹರಿಬಿಡಲಾಗಿದೆ ಎಂದು ನೀರಾವರಿ ಇಲಾಖೆ ಸ್ಪಷ್ಟೀಕರಣ ನೀಡಿದೆ.

ಮಾ.15ರಂದು ಮೈಸೂರಲ್ಲಿ ಪಂಚ ಗ್ಯಾರಂಟಿ ಫಲಾನುಭವಿಗಳ ಸಮಾವೇಶ





ಮೈಸೂರು ಜಿ.ಪಂ. ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಸಮಾವೇಶ ಕುರಿತು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು,ಮಾ.11(ಎಂಟಿವೈ)– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಮಾ.15ರಂದು ಮಧ್ಯಾಹ್ನ 12 ಗಂಟೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರು ಜಿ.ಪಂ. ಸಭಾಂಗಣದಲ್ಲಿ ಸೋಮವಾರ ನಡೆದ ಗ್ಯಾರಂಟಿ ಯೋಜನೆಗಳ ಸಮಾವೇಶ ಕುರಿತು ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಕಾರ್ಯಕ್ರಮಗಳು ಎಲ್ಲಾ ಜಾತಿ, ಧರ್ಮಗಳ ಬಡ ಹಾಗೂ ಮಧ್ಯಮ ವರ್ಗ ಕುಟುಂಬಗಳಿಗೆ ನೆರವಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜನರು ಗೌರವಯುತವಾಗಿ ಜೀವನ ನಡೆಸಲು ಗ್ಯಾರಂಟಿ ಕಾರ್ಯಕ್ರಮ ಸಹಕಾರಿಯಾಗಿದ್ದು, ಜನಮನ್ನಣೆ ಗಳಿಸಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಅರ್ಹ ಫಲಾನುಭವಿಗಳಿಗೆ ಗ್ಯಾರಂಟಿ ಕಾರ್ಯಕ್ರಮಗಳ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ. ಮಾ.15ರಂದು ಮಧ್ಯಾಹ್ನ 12 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ಯಾರಂಟಿ ಯೋಜನೆಗಳ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಸಮಾವೇಶದಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯ ಸರ್ಕಾರ ನುಡಿದಂತೆ ನಡೆಯುತ್ತಿದೆ. ಈ ಹಿಂದೆ ನೀಡಿದ ವಾಗ್ದಾನ ಈಡೇರಿಸಿದ್ದೇವೆ ಎಂದು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ನಡೆಸಲಾಗುತ್ತಿದೆ. ಈ ಸಮಾವೇಶದಲ್ಲಿ 50 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ಪಾಲ್ಗೊಳ್ಳಲಿದ್ದಾರೆ. ಸಮಾವೇಶಕ್ಕೆ ಬರುವವರಿಗೆ ಕುಡಿಯುವ ನೀರು, ಊಟದ ವ್ಯವಸ್ಥೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮೈಸೂರು ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಯೋಜನೆಯಲ್ಲಿ 6.73 ಲಕ್ಷ ಫಲಾನುಭವಿಗಳಿದ್ದಾರೆ. ಗೃಹ ಜ್ಯೋತಿ ಯೋಜನೆಯಲ್ಲಿ 9 ಲಕ್ಷ ಫಲಾನುಭವಿಗಳು ಸೌಲಭ್ಯ ಪಡೆಯುತ್ತಿದ್ದಾರೆ. ಯುವನಿಧಿ ಯೋಜನೆಯಲ್ಲಿ 783, ಅನ್ನಭಾಗ್ಯ ಯೋಜನೆಯಲ್ಲಿ 7.10ಲಕ್ಷ ಪಡಿತರ ಚೀಟಿಗಳಿಂದ 22.76 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗುತ್ತಿದೆ. ಶಕ್ತಿ ಯೋಜನೆಯಲ್ಲಿ ಪ್ರತಿದಿನ ಸಾವಿರಾರು ಮಹಿಳೆಯರು ಸಾರಿಗೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಈ ಎಲ್ಲಾ ಯೋಜನೆಗಳ ಫಲಾನುಭವಿಗಳ ಸಮಾವೇಶ ನಡೆಸುವ ಮೂಲಕ ಅವರಿಂದ ಅಭಿಪ್ರಾಯ ಕೇಳಲಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಜಿಲ್ಲೆಯಲ್ಲಿ 256 ಗ್ರಾಪಂ ಹಾಗೂ 16 ಸ್ಥಳೀಯ ಸಂಸ್ಥೆಗಳಿದ್ದು, ಈ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಿಂದ 50 ಸಾವಿರ ಫಲಾನುಭವಿಗಳು ಸಮಾವೇಶಕ್ಕೆ ಆಗಮಿಸಲಿದ್ದಾರೆ. ಜಿಲ್ಲೆಯ ವಿವಿಧೆಡೆಯಿಂದ ಫಲಾನುಭವಿಗಳನ್ನು ಕರೆತರಲು 500 ಬಸ್‌ಗಳ ಏರ್ಪಾಡು ಮಾಡಲಾಗಿದೆ. ಸಂಬಂಧಿಸಿದ ಅಧಿಕಾರಿಗಳು ಸಮಾವೇಶಕ್ಕೆ ಆಗಮಿಸುವ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ವೇದಿಕೆ, ಆಹಾರದ ವ್ಯವಸ್ಥೆ ಮಾಡಲು ಸೂಚಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರೀತ್ಸೆ... ಪ್ರೀತ್ಸೆ...!

- ಯುವತಿ ಪೀಡಿಸುತ್ತಿರುವ ಯುವಕನ ವಿರುದ್ಧ ಪ್ರಕರಣ ದಾಖಲು
- ಖಾಸಗಿ ಚಿತ್ರಗಳ ತೆಗೆದು ಕಿರುಕುಳ
- ಮನೆ ಹತ್ತಿರ ಬಂದು ಕಿರುಕುಳ ಆರೋಪ

ಮೈಸೂರು, ಮಾ. 11– ಯುವಕನೋರ್ವ ಕೆಲವು ವರ್ಷಗಳಿಂದ ಯುವತಿಯ ಬೆನ್ನು ಬಿದ್ದು ಪ್ರೀತಿಸುವಂತೆ ಪೀಡಿಸುತ್ತಿರುವುದಲ್ಲದೇ, ಆಕೆಯನ್ನು ಬ್ಲಾಕ್‌ಮೇಲ್ ಮಾಡಿ 2 ಲಕ್ಷ ರೂ. ಹಾಗೂ ಸ್ಕೂಟರ್ ಕಿತ್ತುಕೊಂಡಿದ್ದಾನೆ. ಅಲ್ಲದೇ, ಪ್ರಾಣ ಬೆದರಿಕೆ ಹಾಕುತ್ತಿದ್ದಾನೆ ಎಂಬ ಆರೋಪದಡಿ ಮೈಸೂರಿನ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈಗ 25 ವರ್ಷ ವಯಸ್ಸಾಗಿರುವ ಯುವತಿ 2014–15ರಲ್ಲಿ ವಾಸವಿದ್ದ ಮನೆಯ ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದ ಟಿ.ಕೆ. ನಿಖಿಲ್ ಎಂಬಾತ ಈಕೆ ಕಾಲೇಜಿಗೆ ಹೋಗುವಾಗ, ನಂತರ ಕೆಲಸಕ್ಕೆ ಹೋಗುವಾಗ ಅಡ್ಡಗಟ್ಟಿ ಪ್ರೀತಿಸುವಂತೆ ಪೀಡಿಸುತ್ತಿದ್ದನಲ್ಲದೇ, ಅವಾಚ್ಯ ಶಬ್ಧಗಳಿಂದ ನಿಂದಿಸಿ ಮಾನಸಿಕ ಕಿರುಕುಳ ನೀಡುತ್ತಿದ್ದ. ತನ್ನನ್ನು ಮದುವೆಯಾಗದಿದ್ದರೆ ಕೊಲೆ ಮಾಡುವುದಾಗಿ, ಬೇರೆ ಯಾರನ್ನಾದರೂ ಮದುವೆಯಾಗಲು ಪ್ರಯತ್ನಿಸಿದರೆ ಮದುವೆ ಮುರಿದು ಬೀಳುವಂತೆ ಮಾಡುವುದಾಗಿಯೂ ಬೆದರಿಕೆ ಹಾಕುತ್ತಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ತನ್ನ ಖಾಸಗಿ ಫೋಟೋಗಳನ್ನು ಕದ್ದು ತೆಗೆದುಕೊಂಡಿರುವ ಈತ, ಫೋಟೋಗಳನ್ನು ಫೇಸ್‌ಬುಕ್ ಮತ್ತು ವಾಟ್ಸಾಪ್‌ನಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿ ಲಕ್ಷ ರೂ. ನಗದು, ಆತನ ತಂದೆಯ ಮೊಬೈಲ್‌ಗೆ ಗೂಗಲ್ ಪೇ ಮೂಲಕ 77 ಸಾವಿರ ರೂ. ಹಾಗೂ ಆತನ ಖಾತೆಗೆ 33 ಸಾವಿರ ರೂ. ಸೇರಿದಂತೆ 2 ಲಕ್ಷ ರೂ.ಗಳನ್ನು ಪಡೆದಿದ್ದಾನೆ. 2022ರಲ್ಲಿ ತಂದೆಯನ್ನು ನೋಡಲು ಹೋಗಬೇಕೆಂದು ತಿಳಿಸಿ, ತನ್ನನ್ನು ಹೆದರಿಸಿ ತನ್ನ ಡಿಯೋ ಸ್ಕೂಟರ್ (ಕೆಎ 09–ಜೆಹೆಚ್ 1227) ಅನ್ನು ಕಿತ್ತುಕೊಂಡು ಹೋಗಿದ್ದು, ಇನ್ನೂ ಅದನ್ನು ವಾಪಸ್ ಕೊಟ್ಟಿಲ್ಲ ಎಂದು ಯುವತಿ ದೂರಿನಲ್ಲಿ ಆರೋಪಿಸಿದ್ದಾಳೆ.

ಅಷ್ಟಕ್ಕೇ ನಿಲ್ಲದ ನಿಖಿಲ್ ತಾನು ಹಾಲಿ ವಾಸವಿರುವ ಮನೆ ಮುಂದೆ ಕಾರಿನಲ್ಲಿ ಬಂದು ಜೋರಾಗಿ ಹಾರ್ನ್ ಹೊಡೆಯುವುದಲ್ಲದೇ ಎಲ್ಲರಿಗೂ ಕೇಳಿಸುವಂತೆ ನನ್ನ ಹೆಸರಿಡಿದು ಸೈಕೋ ರೀತಿ ಕಿರುಚಾಡುತ್ತಾನೆ. ಈತನ ಸೈಕೋ ರೀತಿಯ ವರ್ತನೆ ಗೊತ್ತಿದ್ದರೂ ಕೂಡ ಆತನ ತಂದೆ ಸುಂದರ್ ಅಲಿಯಾಸ್ ಕುಂಜಿರಾಂ ಮತ್ತು ತಾಯಿ ಸರೋಜ ಅವರು ಆತನನ್ನು ಬೆಂಬಲಿಸುತ್ತಿದ್ದಾರೆ. ನಿಖಿಲ್ ಹಲವಾರು ಬಾರಿ ತನ್ನ ಮೇಲೆ ಮಾನಸಿಕ ಹಾಗೂ ದೈಹಿಕ ಹಲ್ಲೆ ನಡೆಸಿ ಮದುವೆಯಾಗುವಂತೆ ಪೀಡಿಸುತ್ತಿದ್ದಾನೆ. ಈತನ ವರ್ತನೆಯಿಂದಾಗಿ ತಾನು ಮಾನಸಿಕ ತೊಳಲಾಟಕ್ಕೆ ಒಳಗಾಗಿ ಯಾರಿಗೂ ಹೇಳಿಕೊಳ್ಳಲಾಗದೇ ಮಾನಸಿಕ ಹಾಗೂ ದೈಹಿಕವಾಗಿ ಕುಗ್ಗಿಹೋಗಿದ್ದು, ತನ್ನನ್ನು ಹಿಂಸಿಸುತ್ತಿರುವ ನಿಖಿಲ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಯುವತಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿಜಯ ನಗರ ಠಾಣೆ ಇನ್ಸ್‌ಪೆಕ್ಟರ್ ಪ್ರದೀಪ್ ತನಿಖೆ ಮುಂದುವರೆಸಿದ್ದಾರೆ.

ಕೌಶಲ್ಯ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಮಾ.11–ಮೈಸೂರಿನ ರುಡ್‌ಸೆಟ್ ಸಂಸ್ಥೆಯಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕ ಯುವತಿಯರಿಗಾಗಿ ಸ್ವಉದ್ಯೋಗ ಮಾಡಲು ವಿವಿಧ ರೀತಿಯ ಕೌಶಲ್ಯ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. ಕಂಪ್ಯೂಟರ್ ಡಿ.ಟಿ.ಪಿ. (ಮಾ.12ರಿಂದ 25ವರೆಗೆ (45 ದಿನಗಳು) ಅಭ್ಯರ್ಥಿಗಳ ಅರ್ಹತೆ: 18ರಿಂದ 45 ವರ್ಷಗಳ ವಯೋಮಿತಿಯನ್ನು ಹೊಂದಿರಬೇಕು. ಕನ್ನಡ ಓದು ಬರಹ ಬಲ್ಲವರಾಗಿರಬೇಕು. ಸ್ವ ಉದ್ಯೋಗವನ್ನು ಮಾಡಬೇಕೆಂಬ ಆಸಕ್ತಿ ಹೊಂದಿರಬೇಕು. ತರಬೇತಿಯು ಊಟ ಮತ್ತು ವಸತಿ ಸಹಿತವಾಗಿ ಸಂಪೂರ್ಣ ಉಚಿತವಾಗಿರುತ್ತದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ಮೊಬೈಲ್ ನಂಬರ್‌ವುಳ್ಳ ಸ್ವವಿಳಾಸದ ಅರ್ಜಿಯೊಂದಿಗೆ, ಆಧಾರ್‌ಕಾರ್ಡ್, ಬಿ.ಪಿ.ಎಲ್. ರೇಷನ್‌ಕಾರ್ಡ್ ಜೆರಾಕ್ಸ್ ಪ್ರತಿಗಳೊಂದಿಗೆ ಸಂಪರ್ಕಿಸಿ ರುಡ್‌ಸೆಟ್ ಸಂಸ್ಥೆಯಲ್ಲಿ ತರಬೇತಿಯಲ್ಲಿ ಪಾಲ್ಗೊಳ್ಳಲು ತಿಳಿಸಲಾಗಿದೆ. ತರಬೇತಿಗೆ ಆಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನೇರ ಸಂದರ್ಶನ ಮೂಲಕ ನಡೆಸಲಾಗುವುದು. ಹೆಚ್ಚಿನ ಮಾಹಿತಿಗೆ 0821–2519663, 9449860466, 9844013948 ಸಂಪರ್ಕಿಸಬಹುದು.

ಲೈನ್‌ಮ್ಯಾನ್ ಎಡವಟ್ಟು; ವ್ಯಕ್ತಿ ಸಾವು

ಮೈಸೂರು, ಮಾ. 11(ಆರ್‌ಕೆ)– ವಿದ್ಯುತ್ ತಂತಿ ಸ್ಥಳಾಂತರಿಸುವ ವೇಳೆ ವಿದ್ಯುತ್ ಸ್ಪರ್ಶಗೊಂಡು ಯುವಕ ಸಾವನ್ನಪ್ಪಿದ ದಾರುಣ ಘಟನೆ ಮೈಸೂರಿನ ಕಲ್ಯಾಣಗಿರಿಯಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಶ್ರೀರಂಗಪಟ್ಟಣ ತಾಲೂಕು ಮಹದೇವಪುರ ನಿವಾಸಿ ಪ್ರದೀಪ್(27) ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾದವನಾಗಿದ್ದು, ಲೈನ್‌ಮ್ಯಾನ್ ಶೇಖರ್ ಎಂಬಾತ ಈತನಿಂದ ಅನಧಿಕೃತವಾಗಿ ವಿದ್ಯುತ್ ತಂತಿ ಸ್ಥಳಾಂತರಿಸುವ ಕೆಲಸ ಮಾಡಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ ಎಂದು ಹೇಳಲಾಗಿದೆ. ಮನೆಯೊಂದರ ಮುಂದೆ ಹಾದುಹೋಗಿದ್ದ ವಿದ್ಯುತ್ ತಂತಿಯನ್ನು ಮನೆಗೆ ತಾಗದಂತೆ ಸ್ಥಳಾಂತರಿಸುವ ಕೆಲಸವನ್ನು ಪ್ರದೀಪ್ ಮಾಡುತ್ತಿದ್ದಾಗ ಹಠಾತ್ತನೇ ತಂತಿಯಲ್ಲಿ ವಿದ್ಯುತ್ ಹರಿದ ಪರಿಣಾಮ ವಿದ್ಯುತ್‌ಸ್ಪರ್ಶದಿಂದ ಪ್ರದೀಪ್ ಸಾವನ್ನಪ್ಪಿ ಆತನ ದೇಹ ತಂತಿ ಮೇಲೆಯೇ ನೇತಾಡುತ್ತಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸ್ಥಳೀಯರು ವಿದ್ಯುತ್ ತಂತಿಯಲ್ಲಿ ನೇತಾಡುತ್ತಿದ್ದ ಪ್ರದೀಪ್‌ನ ದೇಹವನ್ನು ಖಾಸಗಿ ಆಸ್ಪತ್ರೆಗೆ ಕೊಂಡೊಯ್ದಿದ್ದಾರೆ. ಈ ವೇಳೆ ಆಸ್ಪತ್ರೆಗೆ ಧಾವಿಸಿದ ಆತನ ಕುಟುಂಬಸ್ಥರು ಹಾಗೂ ಮಹದೇವಪುರ ಗ್ರಾಮಸ್ಥರು ಚೆಸ್ಕಾಂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಚೆಸ್ಕಾಂ ಸೂಪರಿಂಟೆಂಡೆಂಟ್ ಇಂಜಿನಿಯರ್ ಸುನಿಲ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಪೂರ್ಣ ಚಂದ್ರ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸುಧೀಂದ್ರ, ಅಸಿಸ್ಟೆಟ್ ಇಂಜಿನಿಯರ್ ಮಂಜುನಾಥ್ ಇತರರು ಆಗಮಿಸಿ, ಪ್ರದೀಪ್ ಮಾಡುತ್ತಿದ್ದ ಕೆಲಸ ಅನಧಿಕೃತವಾಗಿತ್ತು. ಈ ಕೆಲಸಕ್ಕೆ ಚೆಸ್ಕಾಂನಿಂದ ಅನುಮತಿ ಪಡೆದಿರಲಿಲ್ಲ. ನಮ್ಮ ಲೈನ್‌ಮ್ಯಾನ್ ಅನಧಿಕೃತವಾಗಿ ಪ್ರದೀಪ್‌ನಿಂದ ಈ ಕೆಲಸ ಮಾಡಿಸುತ್ತಿದ್ದಾಗ, ಅವಘಡ ಸಂಭವಿಸಿದೆ ಎಂದು ತಮಗೆ ತಿಳಿದು ಬಂದಿರುವುದಾಗಿ ಸಮಜಾಯಿಷಿ ನೀಡಿದರು.

ಈ ಸಂಬಂಧ ಉದಯಗಿರಿ ಠಾಣೆ ಪೊಲೀಸರು ಪ್ರದೀಪ್‌ನ ತಂದೆ ಕುಮಾರ್ ನೀಡಿದ ದೂರಿನನ್ವಯ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮಾಜಿ ಶಾಸಕ ವಾಸು ಅಜಾತಶತ್ರು

ಒಕ್ಕಲಿಗ ಸಮುದಾಯದಿಂದ ಶ್ರದ್ಧಾಂಜಲಿ



ಮಾಜಿ ಶಾಸಕ ವಾಸು ಅವರಿಗೆ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ಮಾ.11–ಇತ್ತೀಚೆಗೆ ನಿಧನರಾದ ಮಾಜಿ ಶಾಸಕರು ಹಾಗೂ ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ವಾಸು ಅವರಿಗೆ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು.

ಈ ವೇಳೆ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ವಾಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ವಾಸು ಅವರು ನಮ್ಮ ಸಮುದಾಯದ ಮುಂಚೂಣಿ ನಾಯಕರು, ಶಿಸ್ತಿನ ಸಿಪಾಯಿ, ನಾಡು ಕಂಡಂತಹ ಸರಳ–ಸಜ್ಜನಿಕೆಯ ರಾಜಕಾರಣಿ. ಮೈಸೂರು ಮೇಯರ್ ಆಗಿ, ಚಾಮರಾಜ ವಿಧಾನಸಭಾ ಶಾಸಕರಾಗಿ ಹಲವು ಕೆಲಸ ಮಾಡುವ ಮೂಲಕ ಮೈಸೂರಿನ ಜನತೆಯ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಮುಖ್ಯವಾಗಿ ಕೆಆರ್‌ಎಸ್ ರಸ್ತೆಯಲ್ಲಿ ನೂತನವಾಗಿ ಆರಂಭಿಸಿರುವ ಜಯದೇವ ಹೃದ್ರೋಗ ಆಸ್ಪತ್ರೆ ಇದು ಇವರ ಅದ್ಭುತ ಕೊಡುಗೆ. ಪಡುವಾರಹಳ್ಳಿಯಲ್ಲಿರುವ ನೂತನ ಮಹಾರಾಣಿ ಕಾಲೇಜು ಕಟ್ಟಡ ಸಹ ಇವರ ಹೋರಾಟದ ಫಲವೇ. ಎಲ್ಲಾ ವರ್ಗದ ಜನರಿಗೆ ತಮ್ಮ ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆಯ ಮೂಲಕ ಉದ್ಯೋಗ ನೀಡಿದ್ದಾರೆ. ರಾಜಕೀಯ ಕ್ಷೇತ್ರದ ಅಜಾತಶತ್ರುವಾಗಿದ್ದು, ಎಲ್ಲರನ್ನು ಬಹಳ ಪ್ರೀತಿ ವಿಶ್ವಾಸದಿಂದ ನೋಡುತ್ತಿದ್ದ ವಾಸು ಅವರ ನಿಧನ ಸಮಾಜಕ್ಕೆ ಭಾರಿ ನಷ್ಟ ಎಂದರು.

ಸಭೆಯಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷೆ ತೇಜಸ್ ಲೋಕೇಶ್‌ಗೌಡ, ಮಹಿಳಾ ಅಧ್ಯಕ್ಷ ಲತಾ ರಂಗನಾಥ್, ಜಗದೀಶ್, ಶಿವಲಿಂಗಯ್ಯ, ಚರಣ್‌ರಾಜ್, ದೀಪಕ್‌ಗೌಡ, ಮಹಾದೇವ, ಮಂಜುಳಾ, ಪದ್ಮ, ಹೇಮ, ಗಾಯತ್ರಿ, ಪ್ರತಿಮ, ಮಾಯ, ಲಕ್ಷ್ಮೀ, ಪುಷ್ಪಾ, ಶಿಲ್ಪ, ಹನುಮಂತಯ್ಯ, ಚಂದ್ರಶೇಖರ, ದರ್ಶನ್ ಗೌಡ ಇತರರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ವಿಶ್ವಕರ್ಮ ಮುಖಂಡರ ಪ್ರತಿಭಟನೆ



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ವಿಶ್ವಕರ್ಮ ಸಮುದಾಯ ಮುಖಂಡರು ಪುರಭವನದ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.11(ಎಸ್‌ಪಿಎನ್)– ವಿಶ್ವಕರ್ಮ ಅಭಿವೃದ್ಧಿ ನಿಗಮದಿಂದ ಸಿಗುವ ಸವಲತ್ತುಗಳು ಗ್ರಾಮೀಣ ಪ್ರದೇಶದ ಯುವಕರಿಗೂ ಸಿಗಬೇಕು ಎಂಬುದು ಸೇರಿದಂತೆ 14 ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ವಿಶ್ವಕರ್ಮ ಸಮುದಾಯ ಮುಖಂಡರು ಪುರಭವನದ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು, ರಾಜ್ಯ ವಿಶ್ವಕರ್ಮ ಯುವ ಘಟಕದ ಉಪಾಧ್ಯಕ್ಷ ನಾಗೇಂದ್ರ ವಿಶ್ವಕರ್ಮ ವಹಿಸಿದ್ದು, ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿದರು. ನಂತರ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ವಿಶ್ವಕರ್ಮ ವಿಶ್ವವಿದ್ಯಾಲಯ ಸ್ಥಾಪನೆ ಮಾಡಬೇಕು. ತಾಳವಾಡಿ ಗಡಿಭಾಗದಲ್ಲಿರುವ ವಿಶ್ವಕರ್ಮ ಸಮಾಜದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಬೇಕು. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಲ್ಲಿ ಬಾಕಿ ಇರುವಂತಹ ಸಾಲವನ್ನು ಮನ್ನಾ ಮಾಡಬೇಕು ಎಂದು ಒತ್ತಾಯಿಸಿದರು.

ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಕನಿಷ್ಠ 100 ಕೋಟಿ ರೂ.ಅನುದಾನ ಮೀಸಲಿಡಬೇಕು. ಸರ್ಕಾರದಿಂದ ಆಚರಣೆಗೊಳ್ಳುವ ವಿಶ್ವಕರ್ಮ ಜಯಂತೋತ್ಸವ ಹಾಗೂ ಸಂಸ್ಮರಣಾ ಕಾರ್ಯಕ್ರಮಗಳಲ್ಲಿ ಸಂಬಂಧಪಟ್ಟ ಜಿಲ್ಲಾ ಹಂತದ ಸಾಧಕರನ್ನು ಗೌರವಿಸಬೇಕು. ವಿಧಾನಸೌಧದ ಆವರಣದಲ್ಲಿ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳ ಮೂಲಕ ನಾಡಿಗೆ ಅಪಾರ ಗೌರವ ತಂದುಕೊಟ್ಟಿರುವ ಅಮರಶಿಲ್ಪಿ ಜಕಣಾಚಾರಿ ಪ್ರತಿಮೆ ಸ್ಥಾಪಿಸಬೇಕು. ಆರ್ಥಿಕವಾಗಿ ಹಿಂದುಳಿದಿರುವ ವಿಶ್ವ ಕರ್ಮ ಸಮುದಾಯದ ಮಠ–ಮಾನ್ಯಗಳ ಅಭಿವೃದ್ಧಿಗೆ 50 ಕೋಟಿ ಅನುದಾನ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಬೆಂಗಳೂರಿನಲ್ಲಿ ವಿಶ್ವಕರ್ಮ ಸಮಾಜದ ಬಡ ಮಕ್ಕಳ ವ್ಯಾಸಂಗಕ್ಕಾಗಿ ಸಮುದಾಯ ಭವನ ನಿರ್ಮಾಣಕ್ಕೆ 5 ಎಕರೆ ನಿವೇಶನ ಮಂಜೂರು ಮಾಡಬೇಕು. ಈ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಮೀಸಲಿಡಬೇಕು. ಉತ್ತರ ಮತ್ತು ದಕ್ಷಿಣ ಕರ್ನಾಟಕ ಭಾಗದಲ್ಲಿ ವಿಶ್ವಕರ್ಮ ವಸತಿ ಶಾಲೆ ಮಂಜೂರು ಮಾಡಬೇಕೆಂಬುದು ಸೇರಿದಂತೆ ಒಟ್ಟು 14 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮರೂರು ನಂಜುಂಡಸ್ವಾಮಿ, ನಿಂಗಚಾರಿ, ಮಣಿ, ಪುಟ್ಟಣ್ಣ, ಸಿದ್ದರಾಜಾಚಾರಿ, ಮಳವಳ್ಳಿ ಶ್ರೀನಿವಾಸ ಸೇರಿದಂತೆ ಇತರರಿದ್ದರು.

ಇಂದಿನಿಂದ ದಿವ್ಯಾಂಗರ ಉಚಿತ ಹೋಮಿಯೋಪತಿ ವೈದ್ಯಕೀಯ ಶಿಬಿರ

ಮೈಸೂರು,ಮಾ.11(ಜಿಎ)–ಮೈಸೂರಿನ ದಟ್ಟಗಳ್ಳಿಯಲ್ಲಿರುವ ಕೇವಲಿನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 'ಭರವಸೆ' ಶೀರ್ಷಿಕೆಯಡಿ ದಿವ್ಯಾಂಗರ ಉಚಿತ ಹೋಮಿಯೋಪತಿ ವೈದ್ಯಕೀಯ ಶಿಬಿರವನ್ನು ಮಾ.12ರಿಂದ ಆರಂಭಿಸಲಾಗುತ್ತಿದೆ ಎಂದು ಟ್ರಸ್ಟ್ ಅಧ್ಯಕ್ಷೆ ಸೀಮಂತಿನಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟ್ರಸ್ಟ್ ವತಿಯಿಂದ ಪ್ರತಿ 2 ತಿಂಗಳಿಗೊಮ್ಮೆ ಎಂಬಂತೆ ದಿವ್ಯಾಂಗ ಮಕ್ಕಳಿಗೆ ಸಂಪೂರ್ಣ ಉಚಿತವಾದ ಹೋಮಿಯೋಪತಿ ವೈದ್ಯಕೀಯ ಶಿಬಿರ, ಸಮಾಲೋಚನೆ, ರೋಗ ನಿರ್ಣಯ, ಔಷಧಿ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು. ಮಾ.12, ಬೆಳಗ್ಗೆ 9 ಗಂಟೆಗೆ ರಂಗರಾವ್ ಸ್ಮಾರಕ ವಿಕಲಚೇತನ ಶಾಲೆಯಲ್ಲಿ ಎನ್.ಆರ್.ಫೌಂಡೇಷನ್ ಅಧ್ಯಕ್ಷ ಎಂ.ಗುರು ಶಿಬಿರವನ್ನು ಉದ್ಘಾಟಿಸುವರು. ಬೌದ್ಧಿಕ ವಿಕಲಾಂಗತೆ, ಆಟಿಸಂ, ಸೆರೆಬ್ರಲ್ ಪಾಲ್ಸಿ ಮತ್ತು ಎಪಿಲೆಪ್ಸಿ ಹೊಂದಿರುವ ಮಕ್ಕಳಿಗೆ ಉಚಿತ ಸಮಾಲೋಚನೆ ನೀಡಲಾಗುವುದು. ಮಾಹಿತಿಗೆ 9886457987, 9901225074 ಸಂಪರ್ಕಿಸಿ ಎಂದರು.

ಹೈಟೆನ್ಷನ್ ತಂತಿ ಬಿದ್ದು 6 ಮಂದಿ ಸಜೀವ ದಹನ

ಉತ್ತರ ಪ್ರದೇಶ: ಇಲ್ಲಿನ ಗಾಜಿಪುರದಲ್ಲಿ ಬಸ್ ಮೇಲೆ ಹೈಟೆನ್ಷನ್ ತಂತಿ ಬಿದ್ದ ಪರಿಣಾಮ ಬೆಂಕಿ ಹೊತ್ತಿಕೊಂಡು 6 ಮಂದಿ ಸಜೀವ ದಹನವಾಗಿದ್ದಾರೆ. ಸ್ವಲ್ಪ ಸಮಯದಲ್ಲೇ ಬೆಂಕಿ ಭೀಕರ ಸ್ವರೂಪ ಪಡೆದುಕೊಂಡಿದ್ದು, ಬಸ್ ಸಂಪೂರ್ಣ ಬೆಂಕಿಗೆ ಆಹುತಿಯಾಗಿದೆ. ಈ ಅವಘಡದಲ್ಲಿ ಹೆಚ್ಚಿನ ಸಾವು ನೋವು ಸಂಭವಿಸುವ ಸಾಧ್ಯತೆ ಇದೆ. ಮದುವೆ ಸಮಾರಂಭ ಮುಗಿಸಿ ಹಿಂದಿರುಗುತ್ತಿದ್ದರು, ಮರ್ದಾದಲ್ಲಿ ಅಪಘಾತ ಸಂಭವಿಸಿದೆ. ಡಿಎಂ, ಎಸ್‌ಪಿ ಸೇರಿದಂತೆ ಹಲವು ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿದ್ದಾರೆ. ಬಸ್‌ನಲ್ಲಿ 35ಕ್ಕೂ ಹೆಚ್ಚು ಮಂದಿ ಇದ್ದರು ಎನ್ನುವ ಮಾಹಿತಿ ಲಭ್ಯವಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕೂಡ ಸ್ಪಂದಿಸಿ, ಸ್ಥಳಕ್ಕೆ ಆಗಮಿಸಿ ಪರಿಹಾರ ಕಾರ್ಯ ಆರಂಭಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಇತಿಹಾಸದಲ್ಲಿ ವಿಮೋಚನಾ ಹೋರಾಟಗಳಿಗೆ ಲೆನಿನ್ ರಷ್ಯಾ ಕ್ರಾಂತಿ ಪ್ರೇರಣೆ

ವಿಚಾರ ಸಂಕಿರಣದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಎನ್.ವಿಜಯಕುಮಾರ್ ಅಭಿಪ್ರಾಯ

ಮೈಸೂರು, ಮಾ.11(ಜಿಎ)–ಮಾನವ ಇತಿಹಾಸದಲ್ಲಿ ವಿಮೋಚನಾ ಹೋರಾಟಗಳಿಗೆ ಲೆನಿನ್ ನಡೆಸಿದ ರಷ್ಯಾ ಕ್ರಾಂತಿ ಪ್ರೇರಣೆಯಾಗಿತ್ತು ಎಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಎನ್.ವಿಜಯಕುಮಾರ್ ಅಭಿಪ್ರಾಯಪಟ್ಟರು.

ಸಿಪಿಐ, ಸಿಪಿಐ(ಎಂ), ಸಿಪಿಐಎಂಎಲ್, ಎಸ್‌ಯುಸಿಐಸಿ ಪಕ್ಷಗಳ ಜಿಲ್ಲಾ ಸಮಿತಿ ವತಿಯಿಂದ ಕಾಮ್ರೇಡ್ ವಿ.ಐ.ಲೆನಿನ್ ಅವರ ಮರಣ ಶತಾಬ್ದಿ ಅಂಗವಾಗಿ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಮಿಕ ವರ್ಗದ ಪ್ರಭುತ್ವ ಮತ್ತು ಭಾರತದ ರಾಜಕೀಯ, ಸಾಂಸ್ಕೃತಿಕ ವಲಯದ ಮೇಲೆ ಲೆನಿನ್ ಪ್ರಭಾವ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಭಾರತದ ಸ್ವಾತಂತ್ರ್ಯ ಚಳುವಳಿಯೂ ಸೇರಿದಂತೆ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿದ್ದ ಹೋರಾಟಗಳು ರಾಜಕೀಯ ಸ್ವಾತಂತ್ರ್ಯ ಪಡೆಯುವ ಸೀಮಿತ ವ್ಯಾಪ್ತಿ ಹೊಂದಿದ್ದವು. ರಷ್ಯಾ ಕ್ರಾಂತಿಯ ನಂತರ ಜಗತ್ತಿನ ರಾಷ್ಟ್ರಗಳು ರಾಜಕೀಯ ಸ್ವಾತಂತ್ರ್ಯ ಪಡೆಯುವುದರ ಜತೆಗೆ ಆರ್ಥಿಕ ಮತ್ತು ಸಾಮಾಜಿಕ ಸಂಕೋಲೆಗಳಿಂದ ಬಿಡುಗಡೆ ಹೊಂದಲು ಹೋರಾಟ ಆರಂಭಿಸಿದವು ಎಂದರು.




ಮೈಸೂರಿನ ಕಾಮ್ರೇಡ್ ವಿ.ಐ.ಲೆನಿನ್ ಅವರ ಮರಣ ಶತಾಬ್ದಿ ಅಂಗವಾಗಿ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಎನ್.ವಿಜಯಕುಮಾರ್ ಮಾತನಾಡಿದರು.

> "ಲೆನಿನ್ ರಷ್ಯಾ ಕ್ರಾಂತಿಗೆ ಮಾತ್ರ ಸೀಮಿತವಾಗಿರಲಿಲ್ಲ. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಭಗತ್ ಸಿಂಗ್, ಚಂದ್ರಶೇಖರ್ ಆಜಾದ್ ಅವರ ಮೇಲೆಯೂ ಲೆನಿನ್ ಪ್ರಭಾವ ಬೀರಿದ್ದರು. ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ರಷ್ಯಾ ಕ್ರಾಂತಿ ಹೊಸ ಬದಲಾವಣೆಗೆ ಕಾರಣವಾಗಿತ್ತು. ನಮ್ಮ ದೇಶದಲ್ಲೂ ಪ್ರೇಮಚಂದ್, ರವೀಂದ್ರನಾಥ್ ಟಾಗೋರ್, ಸತೀಶ್ಚಂದ್ರ ಚಟರ್ಜಿ ಕನ್ನಡದಲ್ಲಿ ಕುವೆಂಪು, ಬೇಂದ್ರೆ, ಜಿ.ಎಸ್.ಶಿವರುದ್ರಪ್ಪ ನಿರಂಜನ ಇನ್ನೂ ಮುಂತಾದ ಸಾಹಿತಿಗಳ ಮೇಲೂ ಲೆನಿನ್ ಪ್ರಭಾವ ಇತ್ತು. ಶ್ರಮಿಕ ವರ್ಗವನ್ನು ಕ್ರಾಂತಿಗೆ ಪ್ರೇರೇಪಿಸಿದ ಕುವೆಂಪು ಕಲ್ಕಿ ಪದ್ಯ ಮತ್ತು ಬೇಂದ್ರೆ ಅವರ ಕುರುಡು ಕಾಂಚಾಣ ಕುಣಿಯುತಿತ್ತು ಪದ್ಯಗಳ ಮೇಲೆ ರಷ್ಯಾ ಕ್ರಾಂತಿಯ ಪ್ರಭಾವವಿದೆ. –ಎನ್.ವಿಜಯಕುಮಾರ್

ಸಿಪಿಐ ರಾಜ್ಯ ನಾಯಕ ಎಚ್.ಆರ್.ಶೇಷಾದ್ರಿ ಮಾತನಾಡಿ, ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸಿದ ಸಮತಾವಾದ ಸಿದ್ಧಾಂತ ಪುಸ್ತಕದ ರೂಪದಲ್ಲಿಯೇ ಉಳಿದಿತ್ತು. ಈ ಸಮತಾವಾದ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ಪರಿಣಾಮಕಾರಿಯಾಗಿ ಜಾರಿಗೊಳಿಸಿದ ಕೀರ್ತಿ ಲೆನಿನ್‌ಗೆ ಸಲ್ಲುತ್ತದೆ. ರಷ್ಯಾದಲ್ಲಿ ಅಸಂಘಟಿತವಾಗಿ ದುಡಿಯುತ್ತಿದ್ದ ಶ್ರಮಿಕ ವರ್ಗಗಳನ್ನು ಸಂಘಟನೆ ಮಾಡಿ, ಆಳುವ ವರ್ಗವಾಗಿ ರೂಪಿಸಿದ್ದು ಜಗತ್ತಿನ ಬಹುದೊಡ್ಡ ಕ್ರಾಂತಿಯಾಗಿದೆ ಎಂದರು.

ಸಿಪಿಐಎಂಎಲ್‌ನ ರಾಜ್ಯ ಸಮಿತಿ ಸದಸ್ಯ ನಾ.ದಿವಾಕರ್, ಎಐಡಿವೈಓ ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷ ಡಾ.ಜಿ.ಶಶಿಕುಮಾರ್, ಸಿಪಿಐನ ಜಿಲ್ಲಾ ಕಾರ್ಯದರ್ಶಿ ಎಚ್.ವಿ.ರಾಮಕೃಷ್ಣ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಸಿಪಿಐಎಂಎಲ್‌ನ ಜಿಲ್ಲಾ ಕಾರ್ಯದರ್ಶಿ ಚೌಡಳ್ಳಿ ಜವರಯ್ಯ, ಎಸ್‌ಯುಸಿಐಸಿ ಜಿಲ್ಲಾ ಕಾರ್ಯದರ್ಶಿ ಬಿ.ರವಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನೀಲುಫರ್‌ಗೆ ಪಿಎಚ್.ಡಿ ಪದವಿ



ಮೈಸೂರು, ಮಾ. 11– ಡಾ. ನಾಗರಾಜನಾಯಕ್ ಅವರ ಮಾರ್ಗದರ್ಶನದಲ್ಲಿ ನೀಲುಫರ್ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ, ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸುವುದನ್ನು ಖಂಡಿಸಿ ರೈತರ ಪ್ರತಿಭಟನೆ



ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ ಎಂದು ಆರೋಪಿಸಿ ಭೂಮಿತಾಯಿ ಹೋರಾಟ ಸಮಿತಿ ಮುಖಂಡ ಕೆ.ಎಸ್.ನಂಜುಂಡೇಗೌಡ ನೇತೃತ್ವದಲ್ಲಿ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಕಚೇರಿ ಮುಂದೆ ರೈತರು ಸೋಮವಾರ ಪ್ರತಿಭಟನೆ ನಡೆಸಿದರು.

ಶ್ರೀರಂಗಪಟ್ಟಣ,ಮಾ.11–ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಅಕ್ರಮವಾಗಿ ನೀರು ಹರಿಸಲಾಗುತ್ತಿದೆ ಎಂದು ಆರೋಪಿಸಿ, ಕುಡಿಯುವ ನೀರಿಗಾಗಿ ನಾಲೆಗಳಿಗೆ ನೀರು ಹರಿಸಿ ಬೋರ್‌ವೆಲ್‌ಗಳಲ್ಲಿ ಜಲ ಉತ್ಪಾದನೆಗೆ ಅನುಕೂಲ ಮಾಡಿಕೊಡುವಂತೆ ಒತ್ತಾಯಿಸಿ ಭೂಮಿತಾಯಿ ಹೋರಾಟ ಸಮಿತಿ ಮುಖಂಡರಾದ ಕೆ.ಎಸ್ ನಂಜುಂಡೇಗೌಡರ ನೇತೃತ್ವದಲ್ಲಿ ಕೆ.ಆರ್.ಸಾಗರ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಕಚೇರಿಯ ಮುಂಭಾಗದಲ್ಲಿ ಬಾಯಿ ಬಡಿದು ಕೊಂಡು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಕೂಗಿ ಪ್ರತಿಭಟನೆ ನಡೆಸಿದರು.

ಬೆಂಗಳೂರಿಗೆ ಕುಡಿಯುವ ನೀರು ಬಿಡುತ್ತಿರುವುದಾಗಿ ತಿಳಿಸಿ, ಅಕ್ರಮವಾಗಿ ತಮಿಳುನಾಡಿಗೆ ನೀರು ಹರಿಸುವ ಮೂಲಕ ಕಾವೇರಿ ನದಿ ಪಾತ್ರದ ರೈತರಿಗೆ ಮೋಸ ಮಾಡಿದ್ದೀರಿ ಎಂದು ಸಮಿತಿ ಸದಸ್ಯರು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲೆಯ ಶಾಸಕರುಗಳ ವಿರುದ್ಧ ಘೋಷಣೆಕೂಗಿ ಬಾಯಿ ಬಡೆದುಕೊಂಡು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಭೂಮಿ ತಾಯಿ ಹೋರಾಟ ಸಮಿತಿಯ ಮುಖಂಡರಾದ ಕೆ.ಎಸ್ ನಂಜುಂಡೇಗೌಡ ಮಾತನಾಡಿ, ಜಿಲ್ಲೆಯ ನಿರ್ಲಕ್ಷ್ಯ ಮಾಡಿದ ಸಿ.ಎಂ ಬಳಿ ರೈತರ ಸಮಸ್ಯೆ ಹೇಳದೆ ಕೇವಲ ಬಹುಪರಾಕ್ ಎನ್ನುವ ಶಾಸಕರಾಗಿದ್ದು ಬೇಸರ ತರಿಸಿದೆ. ಕಾಂಗ್ರೆಸ್ ಸರ್ಕಾರ ಬಂದಾಗಲೆಲ್ಲ ಬರ ಬಂದಿದೆ, ರೈತರಿಗೆ ಬರ ಪರಿಹಾರ ಕೊಡುವ ಕೆಲಸ ರಾಜ್ಯ ಸರ್ಕಾರ ಮಾಡಬೇಕಾಗಿದೆ.

ನಮ್ಮ ತೆರಿಗೆ ನಮ್ಮ ಹಕ್ಕು ಎನ್ನುವ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳು, ನಮ್ಮ ಕಾವೇರಿ ನೀರನ್ನು ಬೆಂಗಳೂರಿಗೆ ಕುಡಿಯುವ ನೀರು ಎನ್ನುವ ನೆಪದಲ್ಲಿ ತಮಿಳುನಾಡಿಗೆ ಹರಿಸಿದ್ದೀರಿ. ನಮ್ಮ ರೈತರನ್ನು ಇಂದಿನ ಕಾಂಗ್ರೆಸ್ ಸರ್ಕಾರ ಕೆಟ್ಟ ವ್ಯವಸ್ಥೆಗೆ ದೂಡಿದ್ದು, ನಮ್ಮ ಕಾವೇರಿ ನೀರು ನಮ್ಮ ಹಕ್ಕಾಗಿದ್ದು, ನಮ್ಮ ಅಣೆಕಟ್ಟೆ ವ್ಯಾಪ್ತಿ ಜನ ಮತ್ತು ಜಾನುವಾರುಗಳು, ಸೇರಿದಂತೆ ತೆಂಗಿನ ಗಿಡಗಳು ನೀರು ಇಲ್ಲದಂತಾಗಿದೆ ಬೋರ್‌ವೆಲ್‌ಗಳಲ್ಲಿ ನೀರು ಬರುವುದು ಕಷ್ಟವಾಗುತ್ತಿದೆ, ಇಂತಹ ಸಮಯದಲ್ಲಿ ಕೆಆರ್.ಸಾಗರ ಅಣೆಕಟ್ಟೆಯಿಂದ ತಮಿಳುನಾಡಿಗೆ ನೀರು ಹರಿಸುವುದು ಎಷ್ಟು ಸರಿ, ಕದ್ದು ಮುಚ್ಚಿ ಸರ್ಕಾರ ತ.ನಾಡಿಗೆ ನೀರು ಹರಿಸುತ್ತಿದೆ. ಇದನ್ನು ಕೇಳಿದ ರೈತರ ಬಗ್ಗೆ ಮಳವಳ್ಳಿ ಶಾಸಕ ನರೇಂದ್ರಸ್ವಾಮಿ ಬೇಕಾಬಿಟ್ಟಿ ಮಾತನಾಡುತ್ತಾರೆ. ಅವರಿಗೆ ಮರ್ಯಾದೆ ಇದೆಯಾ ಎಂದರು.

ಬೆಂಗಳೂರಿಗೆ ನೀರು ಕೊಡಲಿ ನಮಗೆ ಬೇಸರವಿಲ್ಲ. ಅವರಿಗೂ ಕೊಟ್ಟಂತೆ ನಮ್ಮ ರೈತರಿಗೂ ನೀರು ಹರಿಸಬಹುದಲ್ಲವಾ, ಕಾವೇರಿ ಸಮಸ್ಯೆ ಬಂದಾಗ ಹೋರಾಟ ಮಾಡುವುದು ಮಂಡ್ಯ ಜಿಲ್ಲೆಯ ರೈತರು ಆದರೇ ಹೆಚ್ಚು ನೀರಿನ ಉಪಯೋಗ ಪಡೆಯುತ್ತಿರುವುದು ಬೆಂಗಳೂರು ಮತ್ತು ಮೈಸೂರು ಜಿಲ್ಲೆಯ ಜನರಾಗಿದ್ದು, ಆ ಜಿಲ್ಲೆ ಜನರು ಕೂಡ ನೀರಿನ ಸಮಸ್ಯೆ ತಿಳಿದುಕೊಂಡು ತಮಿಳುನಾಡಿನ ವಿರುದ್ಧ ಹೋರಾಟದಲ್ಲಿ ಭಾಗವಹಿಸಲಿ ಎಂದರು.

ಈ ಸಂದರ್ಭದಲ್ಲಿ ನಂಜುಂಡೇಗೌಡರ ಜೊತೆ ಪೋನ್ ಮೂಲಕ ಚರ್ಚಿಸಿ ರೈತ ಸಮಸ್ಯೆ ಮತ್ತು ಪ್ರತಿಭಟನೆ ಕುರಿತು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುತ್ತದೆ ಪ್ರತಿಭಟನೆ ಕೈ ಬಿಡಲು ಕೋರಿದರು ಇದಕ್ಕೆ ಸ್ಪಂದಿಸಿ ಪ್ರತಿಭಟನೆ ವಾಪಸ್ಸು ಪಡೆದರು.

ಈ ಸಂದರ್ಭದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಅಧ್ಯಕ್ಷರಾದ ಬಿ.ಸಿ. ಕೃಷ್ಣೇಗೌಡ, ರವಿಲಕ್ಷ್ಮಣ, ಸುರೇಶ್, ಕೃಷ್ಣ, ಚಾಮರಾಜು, ಕೆಂಪಣ್ಣ ಸೇರಿದಂತೆ ಇತರರು ಇದ್ದರು.

ಬೇಬಿಬೆಟ್ಟದ ದನಗಳ ಜಾತ್ರೆಯಲ್ಲಿ ಪುಟ್ಟರಾಜುರಿಂದ ಎತ್ತುಗಳ ಮೆರವಣಿಗೆ



ಬೇಬಿಬೆಟ್ಟದಲ್ಲಿ ನಡೆಯುತ್ತಿರುವ ಭಾರಿ ದನಗಳ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ರಾತ್ರಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ತಮ್ಮ ಎತ್ತುಗಳ ಜತೆ ಮೆರವಣಿಗೆ ನಡೆಸಿದರು.

ಚಿನಕುರಳಿ:ಮಾ,11–ಬೇಬಿಬೆಟ್ಟದಲ್ಲಿ ನಡೆಯುತ್ತಿರುವ ದನಗಳ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ರಾತ್ರಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ತಮ್ಮ ಎತ್ತುಗಳ ಜತೆ ಮೆರವಣಿಗೆ ನಡೆಸಿದರು.

ಜಾತ್ರೆಯಲ್ಲಿ 6 ಲಕ್ಷದ ಹೋರಿ, 3.50 ಲಕ್ಷ ಹಾಗೂ 3 ಲಕ್ಷದ ಎರಡು ಜೊತೆ ಎತ್ತುಗಳನ್ನು ಕಟ್ಟಿರುವ ಸಿ.ಎಸ್.ಪುಟ್ಟ ರಾಜು ಅವರು ಪತ್ನಿ, ನಾಗಮ್ಮ, ಮೊಮ್ಮಗ ಹಾಗೂ ಅಣ್ಣನ ಪುತ್ರ ಡೇರಿ ಅಧ್ಯಕ್ಷ ಸಿ.ಶಿವಕುಮಾರ್ ಅವರ ಜತೆಯೆ ಎತ್ತುಗಳನ್ನು ಹಿಡಿದುಕೊಂಡು ಜಾತ್ರಾ ಆವರಣದಲ್ಲಿ ಮೆರವಣಿಗೆ ನಡೆಸಿದರು.

ಜಾತ್ರೆಗೆ ಮರು ಜೀವ ನೀಡಿದ ಸಿಎಸ್ಪಿ: ಸ್ಥಗಿತಗೊಂಡಿದ್ದ ಬೇಬಿಬೆಟ್ಟದ ದನಗಳ ಜಾತ್ರೆಯನ್ನು 2006ರಲ್ಲಿ ಶಾಸಕರಾಗಿದ್ದ ಪುಟ್ಟರಾಜು ಆರಂಭಿಸುವ ಮೂಲಕ ಜಾತ್ರೆಗೆ ಮರುಜೀವನ ನೀಡಿದ್ದರು, ಜತೆಗೆ ಜಾತ್ರೆಯಲ್ಲಿ ಸರಳ ವಿವಾಹ ಮಹೋತ್ಸವ ನಡೆಸುವ ಮೂಲಕ ಮೊದಲ ಬಾರಿಗೆ ಅವರು 150ಕ್ಕೂ ಅಧಿಕ ಜೋಡಿ ಜೊತೆ ಅವರ ಮಗಳನ್ನು ಸಹ ಸರಳ ವಿವಾಹ ನಡೆಸಿ ಸರಳತೆ ಮೆರೆದಿದ್ದರು. ಇದೀಗ ಪ್ರಬುದ್ಧ ರಾಜಕಾರಣಿಯಾಗಿರುವ ಸಿ.ಎಸ್.ಪುಟ್ಟರಾಜು ಅವರು ತಾವೇ ಸ್ವತಃ ಹಳ್ಳಿಕಾರ್ ತಳಿ ಜೋಡಿ ಎತ್ತುಗಳು, ಹೋರಿಗಳನ್ನು ಸಾಕುವ ಮೂಲಕ ಬೇಬಿಬೆಟ್ಟದ ಜಾತ್ರೆಯಲ್ಲಿ ಪ್ರದರ್ಶನಕ್ಕಿಡುವ ಮೂಲಕ ರೈತರಿಗೆ ಮಾದರಿಯಾಗಿದ್ದಾರೆ.

ಸಿ.ಎಸ್.ಪುಟ್ಟರಾಜು ದಂಪತಿಯಿಂದ ಅಯೋಧ್ಯೆ ಬಾಲರಾಮನ ದರ್ಶನ



ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಸಚಿವ ಸಿಎಸ್.ಪುಟ್ಟರಾಜು ಅವರು ಹೆಸರು ಬಹುತೇಕ ಅಂತಿಮಗೊಂಡಿದೆ ಎನ್ನಲಾಗಿದ್ದು, ಅಂತಿಮ ಘೋಷಣೆಯೊಂದೆ ಬಾಕಿ ಉಳಿದಿದೆ ಎನ್ನಲಾಗಿದೆ.

ಪಾಂಡವಪುರ:ಮಾ,11–ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು, ಪತ್ನಿ ನಾಗಮ್ಮ ಅವರೊಡನೆ ಅಯೋಧ್ಯೆಗೆ ತೆರಳಿ ಬಾಲ ರಾಮನ ದರ್ಶನ ಪಡೆದರು.

ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಸಿ.ಎಸ್.ಪುಟ್ಟರಾಜು ಅವರು ಖಚಿತವಾಗುವ ಮುನ್ಸೂಚನೆ ಹಿನ್ನೆಲೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅಯೋಧ್ಯೆ ಶ್ರೀರಾಮನ ದರ್ಶನ ಪಡೆದು ಆ ಮೂಲಕ ಚುನಾವಣಾ ಪ್ರಚಾರಕ್ಕೆ ಸಿದ್ಧತೆ ನಡೆಸಿಕೊಂಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದ ಅಭ್ಯರ್ಥಿ ಅಂತಿಮಕ್ಕೆ ಸಾಕಷ್ಟು ತಿಕ್ಕಾಟಗಳು ನಡೆಯುತ್ತಿವೆ. ಈ ನಡುವೆ ಮಂಡ್ಯ ಕ್ಷೇತ್ರದಿಂದ ಜೆಡಿಎಸ್–ಬಿಜೆಪಿ

ಸಾರಂಗಿ ಡೇರಿ ನಿರ್ದೇಶಕರ ಆಯ್ಕೆ



ಕೆ.ಆರ್.ಪೇಟೆ,ಮಾ.11: ತಾಲೂಕಿನ ಸಾರಂಗಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಒಬ್ಬರು ಅವಿರೋಧ ಆಯ್ಕೆಯಾಗಿದ್ದು, ಉಳಿದ 12 ಮಂದಿ ಚುನಾವಣೆಯಲ್ಲಿ ಜಯ ಸಾಧಿಸಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಅಣ್ಣಯ್ಯ, ದಯಾನಂದ್, ರಾಜು, ನಿಂಗರಾಜು, ಎಸ್.ಜೆ.ದೇವರಾಜು, ಯೋಗೇಶ್, ರಮೇಶ್, ಬಿಸಿಎಂ.ಎ. ಮೀಸಲು ಕ್ಷೇತ್ರದಿಂದ ರಾಮಚಂದ್ರ, ಬಿಸಿಎಂ ಬಿ ಮೀಸಲು ಕ್ಷೇತ್ರದಿಂದ ಕೆ.ಜಗದೀಶ್, ಮಹಿಳಾ ಮೀಸಲು ಕ್ಷೇತ್ರದಿಂದ ಶ್ವೇತಾ, ಮಂಜುಳಾ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಪ್ರೇಮಮ್ಮ ಅವರು ಭಾನುವಾರ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ.

ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಎಸ್.ಎನ್.ಸೌಭಾಗ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮನ್‌ಮುಲ್ ಮಾಜಿ ನಿರ್ದೇಶಕ ನಂಜುಂಡೇಗೌಡ ಅವರು ನೂತನ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿದರು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಅಧಿಕಾರಿ ರವಿ ಕಾರ್ಯನಿರ್ವಹಿಸಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಕಾರ್ಯದರ್ಶಿ ಬಸವರಾಜು ಕಾರ್ಯನಿರ್ವಹಿಸಿದರು.

ನೂತನ ನಿರ್ದೇಶಕರನ್ನು ಶಾಸಕ ಹೆಚ್.ಟಿ.ಮಂಜು, ಮನ್‌ಮುಲ್ ನಿರ್ದೇಶಕ ಡಾಲು ರವಿ, ತಾ.ಪಂ. ಮಾಜಿ ಸದಸ್ಯ ಮೋಹನ್, ಗ್ರಾಪಂ.ಅಧ್ಯಕ್ಷೆ ಹೇಮಾ ಹೊನ್ನೇಗೌಡ, ಸಾರಂಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿಶ್ವನಾಥ್, ನಾಗೇಶ್, ಮಂಜು, ಜಯರಾಂ, ಮಂಜುನಾಥ್, ಡೈರಿ ಅಧ್ಯಕ್ಷ ಶಿವರಾಂ, ಗ್ರಾಪಂ. ಸದಸ್ಯ ರಮೇಶ್ ಇತರರು ಅಭಿನಂದಿಸಿದರು.

ಮೈಷುಗರ್‌ನಲ್ಲಿ ಜೂನ್ ಮೂರನೇ ವಾರದಿಂದ ಕಬ್ಬು ನುರಿಸುವಿಕೆ ಆರಂಭ



ಮಂಡ್ಯ,ಮಾ.11–ಮೈಷುಗರ್ ಕಾರ್ಖಾನೆಯಲ್ಲಿ ಪ್ರಸಕ್ತ ಸಾಲಿನ ಕಬ್ಬು ನುರಿಸುವಿಕೆ ಕಾರ್ಯವನ್ನು ಜೂನ್ ಮೂರನೇ ವಾರದಲ್ಲಿ ಪ್ರಾರಂಭಿಸಲಾಗುವುದು ಎಂದು ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಲೋಕಸಭೆ ಹಿನ್ನೆಲೆಯಲ್ಲಿ ಉಸ್ತುವಾರಿಗಳು ಹಾಗೂ ಮುಂಚೂಣಿ ಘಟಕಗಳ ಅಧ್ಯಕ್ಷರ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಈ ವಿಷಯ ತಿಳಿಸಿದರು. ಜೂನ್ 15ರಿಂದ ಪ್ರಾಯೋಗಿಕವಾಗಿ ಮೈಷುಗರ್ ಕಾರ್ಖಾನೆ ಕಾರ್ಯ ನಿರ್ವಹಿಸಲಿದ್ದು, ಪ್ರಸಕ್ತ ಸಾಲಿನಲ್ಲಿ ಬರ ಹಿನ್ನೆಲೆಯಲ್ಲಿ ನೀರಿಲ್ಲದ ಕಾರಣ ಕಬ್ಬಿಗೆ ಕೊರತೆ ಉಂಟಾಗುವ ಸಾಧ್ಯತೆಯಿಂದಾಗಿ ಜತೆಗೆ ಕಾರ್ಖಾನೆ ಪ್ರಾರಂಭಿಸ ದಿದ್ದರೆ ಬೇರೆ ಕಾರ್ಖಾನೆಗಳಿಗೆ ಜಿಲ್ಲೆಯ ಕಬ್ಬು ಹೋಗಬಾರದೆಂಬ ಕಾರಣಕ್ಕೆ ಕಬ್ಬು ನುರಿಸುವಿಕೆ ಕಾರ್ಯ ಪ್ರಾರಂಭಿ ಸುತ್ತಿದ್ದು, 2.5ಲಕ್ಷ ಟನ್ ಕಬ್ಬು ಒಪ್ಪಿಗೆ ಪಡೆದುಕೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಹೊಸ ಕಾರ್ಖಾನೆ ನಿರ್ಮಿಸಲಿದ್ದು, ಜಿಲ್ಲೆಯ ರೈತರ ಹಿತ ಕಾಪಾಡಲಿದೆ. ಜತೆಗೆ ಮೈಷುಗರ್ ಕಾರ್ಖಾನೆ ಆಸ್ತಿ ಪಾಸ್ತಿ ರಕ್ಷಣೆಗೆ ಅಗತ್ಯ ಕ್ರಮವಹಿಸಲಾಗುವುದು. ಜೆಡಿಎಸ್ ಹಾಗೂ ಬಿಜೆಪಿ ನಾಯಕರು ಮಾರಾಟಕ್ಕೆ ಮುಂದಾಗಿದ್ದ ಬೆಂಗಳೂರಿನಲ್ಲಿರುವ ಮೈಷುಗರ್ ಆಡಳಿತ ಕಚೇರಿಯ ಪಕ್ಕದ ಕಟ್ಟಡವನ್ನು ಶೀಘ್ರವೇ ಟೆಂಡರ್ ಕರೆದು ನವೀಕರಿಸಲಾಗುವುದು ಎಂದರು.

ಮೂರನೇ ಪುಟದಿಂದ

ಲಾಜಿಸ್ಟಿಕ್ ಪಾರ್ಕ್

ಹೆದ್ದಾರಿ ಪಕ್ಕ ನಿರ್ಮಾಣಗೊಂಡಿರುವ ಪಾರ್ಕ್‌ನಲ್ಲಿ ಮಂಗಳೂರು ಬಂದರಿನಂತಹ ಪ್ರಮುಖ ಬಂದರುಗಳಿಗೆ ತಡೆರಹಿತ ಸಂಪರ್ಕ ಒದಗಿಸುತ್ತದೆ. ಜೊತೆಗೆ ರೈಲು ಮತ್ತು ರಸ್ತೆ ಸಾರಿಗೆ ಸಂಪರ್ಕವನ್ನು ಬೆಸೆಯುವ ಕೊಂಡಿಯಾಗಿದೆ ಎಂದು ಹೇಳಿದರು.

ಗತಿ ಶಕ್ತಿ ಯೋಜನೆಯ ಭಾಗವಾಗಿರುವ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಕರ್ನಾಟಕದ ನೈರುತ್ಯ ಪ್ರದೇಶದಲ್ಲಿ ಲಾಜಿಸ್ಟಿಕ್ ಮೂಲಸೌಕರ್ಯದಲ್ಲಿ ಕ್ರಾಂತಿ ಉಂಟು ಮಾಡುತ್ತದೆ. ಇದರ ಮೂಲಕ ಇಲ್ಲಿನ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ ಉದ್ಯೋಗಾವಕಾಶ ಸೃಷ್ಟಿಸುತ್ತದೆ ಎಂದು ಶಿಲ್ಪಿ ಅಗರವಾಲ್ ವಿಶ್ವಾಸ ವ್ಯಕ್ತಪಡಿಸಿದರು.

ನಾಳೆ ಬೆಳಿಗ್ಗೆ 9 ಗಂಟೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ವರ್ಚುಯಲ್ ಮೂಲಕ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಕಾರ್ಯಾರಂಭಕ್ಕೆ ಹಸಿರು ನಿಶಾನೆ ತೋರುವರು ಎಂದು ಹೇಳಿದರು.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ನೂತನವಾಗಿ ತೆರೆದಿರುವ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರವನ್ನು ಕೂಡ ನರೇಂದ್ರ ಮೋದಿ ವರ್ಚುವಲ್ ಮೂಲಕ ಉದ್ಘಾಟನೆ ಮಾಡಲಿದ್ದಾರೆ ಎಂದು ಶಿಲ್ಪಿ ಅಗರವಾಲ್ ತಿಳಿಸಿದರು. ಉತ್ತಮ ಗುಣಮಟ್ಟದ ಜೆನೆರಿಕ್ ಔಷಧಗಳು, ಶಸ್ತ್ರಚಿಕಿತ್ಸಾ ಉಪಕರಣಗಳು ಸೇರಿದಂತೆ ಅಗತ್ಯವಿರುವ ಆರೋಗ್ಯ ವಸ್ತುಗಳು ಕಡಿಮೆ ಬೆಲೆಯಲ್ಲಿ ಇಲ್ಲಿ ದೊರೆಯಲಿದೆ ಎಂದರು.

ಮೈಸೂರು ರೈಲ್ವೆ ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕರಾದ ವಿನಾಯಕ್ ನಾಯಕ್, ವಿಜಯ, ಸೀನಿಯರ್ ಆಪರೇಷನಲ್ ಮ್ಯಾನೇಜರ್ ಅಂಕಿತ ವರ್ಮ, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಒಂದು ನಿಲ್ದಾಣ ಒಂದು ಉತ್ಪನ್ನ

ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ರೈಲ್ವೆ ನಿಲ್ದಾಣದಲ್ಲಿ ತೆರೆದಿರುವ ಒಂದು ನಿಲ್ದಾಣ ಒಂದು ಉತ್ಪನ್ನ ಯೋಜನೆಯನ್ನು ಕೂಡ ನರೇಂದ್ರ ಮೋದಿ ನಾಳೆ ಉದ್ಘಾಟನೆ ಮಾಡಲಿದ್ದಾರೆ ಎಂದು ಶಿಲ್ಪಿ ಅಗರವಾಲ್ ತಿಳಿಸಿದರು.

ಮೈಸೂರು ವಿಭಾಗದ ಹಾಸನ, ಅರಸೀಕೆರೆ, ಹೊಳೆನರಸೀಪುರ, ಚಿಕ್ಕಜಾಜೂರು, ಚಿತ್ರದುರ್ಗ, ಬಂಟ್ವಾಳ, ಸಕಲೇಶಪುರ, ಸುಬ್ರಹ್ಮಣ್ಯ, ದಾವಣಗೆರೆ, ಬ್ಯಾಡಗಿ, ಹರಿಹರ, ಹಾವೇರಿ, ರಾಣಿಬೆನ್ನೂರು, ಪಾಂಡವಪುರ ಸೇರಿದಂತೆ ಇತರೆಡೆ ಒಂದು ನಿಲ್ದಾಣ ಒಂದು ಉತ್ಪನ್ನ ಯೋಜನೆಯ ಮಳಿಗೆ ತೆರೆಯಲಾಗಿದೆ ಎಂದರು.

ಚಾಮರಾಜನಗರ, ಕೃಷ್ಣರಾಜನಗರ, ನಂಜನಗೂಡು, ಶಿವಮೊಗ್ಗ, ತಾಳಗುಪ್ಪ, ತಿಪಟೂರು ಮತ್ತು ಮೈಸೂರು ರೈಲ್ವೆ ನಿಲ್ದಾಣಗಳಲ್ಲಿ ಸ್ಥಳೀಯ ಉತ್ಪನ್ನಗಳನ್ನು ಪ್ರದರ್ಶಿಸಿ, ಪ್ರಚಾರ ಮಾಡುವುದು ಇದರ ಉದ್ದೇಶ ಎಂದು ಹೇಳಿದರು.

ಇದರಿಂದ ಸ್ಥಳೀಯ ಕುಶಲಕರ್ಮಿಗಳಿಗೆ ತಮ್ಮ ಪ್ರತಿಭೆ ಮತ್ತು ಉತ್ಪನ್ನಗಳನ್ನು ಪ್ರದರ್ಶಿಸಲು ವೇದಿಕೆ ಒದಗಿಸಿದಂತಾಗುತ್ತದೆ ಎಂದು ತಿಳಿಸಿದರು. ಮೈಸೂರು ಸ್ಯಾಂಡಲ್ ಸೋಪ್, ಚೆನ್ನಪಟ್ಟಣದ ಆಟಿಕೆಗಳು, ಇಳಕಲ್ ಸೀರೆ, ಸಾವಯವ ವಸ್ತುಗಳು ಸೇರಿದಂತೆ ಇತರೆ ವಸ್ತುಗಳ ತಯಾರಿಕೆಗೆ ಉತ್ತೇಜನ ನೀಡಿ ಸ್ಥಳೀಯರಿಗೆ ಹೆಚ್ಚುವರಿ ಆದಾಯ ಕಲ್ಪಿಸುವುದು ಇದರ ಉದ್ದೇಶ ಎಂದು ಶಿಲ್ಪಿ ಅಗರವಾಲ್ ವಿವರಿಸಿದರು.

ವಿಮಾನ ನಿಲ್ದಾಣ ಮಾದರಿ ಮೈಸೂರು ರೈಲ್ವೆ ನಿಲ್ದಾಣ

ಸಂಸದ ಪ್ರತಾಪ್ ಸಿಂಹ ವಿಶ್ವಾಸ





ಮೈಸೂರು, ಮಾ.11(ಬಿಎಲ್‌ಯು)– ಮೈಸೂರು ರೈಲ್ವೆ ನಿಲ್ದಾಣವನ್ನು ವಿಮಾನ ನಿಲ್ದಾಣದ ಮಾದರಿ ಅತ್ಯಾಕರ್ಷಕವಾಗಿ ನಿರ್ಮಾಣ ಮಾಡುವ ಕಾಮಗಾರಿ ಆರಂಭಗೊಂಡಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಇಂದು ಮೈಸೂರು ಹಾಗೂ ತಮಿಳುನಾಡಿನ ಮನಮಧುರೈ ನಡುವೆ ಇಂದಿನಿಂದ ಸಂಚಾರ ಆರಂಭಿಸಿರುವ ವಿಶೇಷ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿ ಮಾತನಾಡಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅವಿಸ್ಮರಣೀಯ ಕೊಡುಗೆಯ ಕಾರಣದಿಂದ ಮೈಸೂರು ರೈಲ್ವೆ ನಿಲ್ದಾಣವನ್ನು ಆಕರ್ಷಣೀಯವಾಗಿ ನಿರ್ಮಾಣ ಮಾಡಲಾಗುತ್ತಿದೆ ಎಂದರು. ಈಗಿರುವ ಮೈಸೂರು ರೈಲ್ವೆ ನಿಲ್ದಾಣದಲ್ಲೇ ಹೊಸ ಪ್ರವೇಶ ದ್ವಾರ ಸೇರಿದಂತೆ ನೂತನವಾಗಿ ಅಭಿವೃದ್ಧಿ ಮಾಡುತ್ತಿರುವ ಹಲವು ಕಾಮಗಾರಿಗಳಿಗೆ 65 ಎಕರೆ ಭೂಮಿ ಗುರುತಿಸಲಾಗಿದೆ. ಮೈಸೂರಿನಲ್ಲಿ ನಡೆದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿ 2022, ಜೂನ್ 22 ರಂದು ಇದಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಒಟ್ಟು 590 ಕೋಟಿ ರೂಪಾಯಿ ಯೋಜನೆಯ ಕಾಮಗಾರಿ ಶೀಘ್ರದಲ್ಲೇ ಆರಂಭಗೊಳ್ಳಲಿದೆ. ಈ ಮೂಲಕ ಮೈಸೂರು ರಸ್ತೆ, ರೈಲ್ವೆ ಹಾಗೂ ವಿಮಾನಯಾನ ಅಭಿವೃದ್ಧಿ ಮೂಲಕ ಪ್ರಗತಿ ಪಥದಲ್ಲಿ ಸಾಗಲಿದೆ. ಇದರಿಂದ ಟೆಕ್ ಜಾಬ್ ಕೂಡ ಅಭಿವೃದ್ಧಿಯಾಗಿ ಮೈಸೂರಿನಲ್ಲೇ ಉದ್ಯೋಗಾವಕಾಶ ದೊರೆಯಲಿದೆ ಎಂದು ಪ್ರತಾಪ್ ಸಿಂಹ ಭರವಸೆ ನೀಡಿದರು.

2014 ಕ್ಕಿಂತ ಮುಂಚೆ ಮೈಸೂರಿಗೆ ಬಹಳಷ್ಟು ರೈಲುಗಳ ಸಂಚಾರವಿರಲಿಲ್ಲ. ನಾನು ಲೋಕಸಭಾ ಸದಸ್ಯನಾದ ಮೇಲೆ ಕಳೆದ ಹತ್ತು ವರ್ಷದ ಅವಧಿಯಲ್ಲಿ 13 ರೈಲುಗಳನ್ನು ತಂದಿದ್ದೇನೆ ಎಂದು ಪ್ರತಾಪ್ ಸಿಂಹ ತಮ್ಮ ಅಧಿಕಾರಾವಧಿಯ ರಿಪೋರ್ಟ್ ಕಾರ್ಡ್ ನೀಡಿದರು.

ಬಿಜೆಪಿ ಗೆಲ್ಲುವ ಕುದುರೆ; ಇಲ್ಲಿ ಪೈಪೋಟಿ ಸಹಜ

ಮೈಸೂರು, ಮಾ.11(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಸೋಲಾಗುತ್ತದೆ ಎಂದು ತಿಳಿದಿದ್ದರೂ ಕಾಂಗ್ರೆಸ್‌ನಲ್ಲಿ ಟಿಕೆಟ್‌ಗೆ ಬಡಿದಾಟವಿದೆ. ಇನ್ನು ಬಿಜೆಪಿಗೆ ಗೆಲ್ಲುವ ಕ್ಷೇತ್ರವಾಗಿರುವ ಕಾರಣ ಟಿಕೆಟ್‌ಗಾಗಿ ಪೈಪೋಟಿ ಇರುವುದು ಸಹಜ ಎಂದು ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು. ಮೈಸೂರು ರೈಲ್ವೆ ನಿಲ್ದಾಣದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಗೆಲ್ಲುವ ಕುದುರೆ ಇದ್ದರೆ ಅದನ್ನು ಏರಲು ಪೈಪೋಟಿ ಇರುವುದು ಸರ್ವೆ ಸಾಮಾನ್ಯ. ಇದರಿಂದ ಕೆಲವರು ಟಿಕೆಟ್ ಕೇಳುತ್ತಿದ್ದಾರೆ ಎಂದು ಹೇಳಿದರು.

ಚುನಾವಣೆ ಅಂದ ಮೇಲೆ ಟಿಕೆಟ್ ಕೇಳುವ ಆಕಾಂಕ್ಷಿಗಳು ಇದ್ದೇ ಇರುತ್ತಾರೆ. ಅದರಂತೆ ಕೆಲವರು ಟಿಕೆಟ್ ಕೇಳುತ್ತಿದ್ದಾರೆ. ಆದರೆ ಟಿಕೆಟ್ ನೀಡುವ ವಿಚಾರದಲ್ಲಿ ನನ್ನ ಅಭಿವೃದ್ಧಿ ಪರಿಗಣಿಸಿ ನರೇಂದ್ರ ಮೋದಿ ನನಗೆ ಟಿಕೆಟ್ ನೀಡುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಈ ಬಾರಿಯು ನನಗೆ ಟಿಕೆಟ್ ಸಿಗುತ್ತದೆ. ಇದರಲ್ಲಿ ಯಾವುದೇ ಸಂದೇಹ ಬೇಡ. ನಾಡದೇವತೆ ತಾಯಿ ಚಾಮುಂಡೇಶ್ವರಿ, ಕಾವೇರಿ ಮಾತೆ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಕೃಪಾಕಟಾಕ್ಷ ಇರುವ ಕಾರಣ ಈ ಬಾರಿಯು ನನಗೆ ಟಿಕೆಟ್ ಸಿಗುತ್ತದೆ. ನಾನು ಗೆದ್ದು ಬರುತ್ತೇನೆ ಎಂದು ಪ್ರತಾಪ್ ಸಿಂಹ ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಕರ್ತನಾಗಿದ್ದ ನನಗೆ ಲೋಕಸಭಾ ಚುನಾವಣೆಗೆ ಟಿಕೆಟ್ ಸಿಗುತ್ತದೆ, ನಾನು ಸಂಸದನಾಗುತ್ತೇನೆ ಎಂದು ಯಾವತ್ತೂ ಕನಸು ಕೂಡ ಕಂಡಿರಲಿಲ್ಲ. ಆದರೆ ಬಿಜೆಪಿ ಹಾಗೂ ಸಂಘ ಪರಿವಾರದವರು ನನ್ನ ಆಶೀರ್ವದಿಸಿ ಈಗ ಸಂಸದರಾಗಿ ಮಾಡಿದ್ದಾರೆ. ಈಗಲೂ ಅದೇ ರೀತಿಯ ಆಶೀರ್ವಾದ ನನಗೆ ಲಭಿಸಲಿದೆ ಎಂದು ಭರವಸೆ ಇದೆ ಎಂದರು. ಟಿಕೆಟ್ ಹಂಚಿಕೆಯಲ್ಲಿ ಬಿಜೆಪಿ, ಸಂಘ ಪರಿವಾರ ಹಾಗೂ ಮೋದಿ ಅಭಿಪ್ರಾಯ ಮುಖ್ಯ. ಇದರಿಂದ ಅವರೇ ನನಗೆ ಟಿಕೆಟ್ ನೀಡಲು ಹಸಿರು ನಿಶಾನೆ ತೋರುತ್ತಾರೆ ಎಂದರು. ಎರಡು ಚುನಾವಣೆಯಲ್ಲಿಯೂ ನಾನು ನರೇಂದ್ರ ಮೋದಿ ಹೆಸರಿನಲ್ಲಿ ಗೆಲುವು ಸಾಧಿಸಿದ್ದೇನೆ. ನರೇಂದ್ರ ಮೋದಿ ಇಲ್ಲವೆಂದರೆ ಪ್ರತಾಪ್ ಸಿಂಹ ಶೂನ್ಯ. ಅವರಿಂದಲೇ ನಾನು ಈ ಮಟ್ಟಕ್ಕೆ ಬಂದಿದ್ದೇನೆ. ಈಗಲೂ ಅವರ ಶ್ರೀರಕ್ಷೆಯಿಂದ ಟಿಕೆಟ್ ಸಿಗುತ್ತದೆ ಎಂದು ಪ್ರತಾಪ್ ಸಿಂಹ ಹೇಳಿದರು.

ನನಗೆ ಟಿಕೆಟ್ ನೀಡುವ ಸಂಬಂಧ ಕೆಲವು ಒಕ್ಕಲಿಗ ಸಂಘಟನೆಗಳು ಸೋಷಿಯಲ್ ಮೀಡಿಯಾದಲ್ಲಿ ಅಭಿಯಾನ ಆರಂಭಿಸಿರುವುದು ನನ್ನ ಗಮನಕ್ಕೆ ಬಂದಿಲ್ಲ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಮೂರನೇ ಪುಟದಿಂದ

10 ಲಕ್ಷ ರೂ. ದಂಡ, 7 ವರ್ಷ ಶಿಕ್ಷೆ!

ಕಂಡುಬಂದಿವೆ ಎಂದು ಸಚಿವರು ವಿವರಿಸಿದರು. ಕಾಟನ್ ಕ್ಯಾಂಡಿಗೆ ಸಂಬಂಧಿಸಿದಂತೆ 25 ಮಾದರಿಗಳನ್ನು ಸಂಗ್ರಹಿಸಲಾಗಿದೆ. ಅದರಲ್ಲಿ 15ರಲ್ಲಿ ಕೃತಕ ಬಣ್ಣಗಳನ್ನು ಬಳಸಿರುವುದು ಪತ್ತೆಯಾಗಿದೆ. ಇದರಲ್ಲಿ ಕೂಡಾ ಟಾರ್‌ಟ್ರಾಸೈನ್ ಸನ್‌ಸೆಟ್ ಯೆಲ್ಲೋ ಮತ್ತು ವಿಶೇಷವಾಗಿ ರೋಡಮೈನ್ ಬಿ ಬಳಸಲಾಗಿದೆ. ಕೃತಕ ಬಣ್ಣ ಬಳಕೆ ಮಾಡಿ ಕ್ಯಾಂಡಿ ತಯಾರು ಮಾಡಬಹುದು. ಆದರೆ ರೊಡಮೈನ್ ಬಿ, ಟಾರ್ಟ್ರಾಜಿನ್‌ನಂತಹ ಯಾವುದೇ ಬಣ್ಣ ಬಳಸಬಾರದು. ಇದು ಆರೋಗ್ಯಕ್ಕೆ ಹಾನಿಕಾರಕ. ಇದು ಸಂಪೂರ್ಣ ಕಾನೂನುಬಾಹಿರ. ಪಿಂಕ್ ಕಲರ್ ಬರಲು ರೊಡಮೈನ್ ಬಿ ಬಳಸುತ್ತಾರೆ. ಇನ್ಮುಂದೆ ಬಳಸುವಂತಿಲ್ಲ. ಇದನ್ನು ಉಲ್ಲಂಘಿಸಿದರೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅಡಿಯಲ್ಲಿ 7 ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಜೊತೆಗೆ 10 ಲಕ್ಷ ರೂ. ವರೆಗೆ ದಂಡ ವಿಧಿಸಲಾಗುವುದು ಎಂದರು. ಗೋಬಿ ಮಂಚೂರಿಯಲ್ಲಿ ಟಾರ್ಟ್ರಾಸೈನ್ ಎಂಬ ಕೃತಕ ಬಣ್ಣಕಾರಕವನ್ನು ಬಳಸಲಾಗುತ್ತದೆ. ಹೀಗೆ ಬಣ್ಣ ಬಳಸಿದ ಗೋಬಿ ಮಂಚೂರಿಯನ್ನು ತಯಾರಿಸಬಾರದು. ಬಣ್ಣಕಾರಕಗಳನ್ನು ಬಳಸದ ಕ್ಯಾಂಡಿ ಮತ್ತು ಗೋಬಿ ಮಂಚೂರಿಗೆ ಅವಕಾಶವಿದೆ ಎಂದು ಅವರು ತಿಳಿಸಿದರು.

ಚಿಕನ್ ಕಬಾಬ್‌ಗೂ ಅಪಾಯ: ಈ ನಡುವೆ ಚಿಕನ್ ಕಬಾಬ್‌ನಲ್ಲೂ ಕೆಲವರು ಬಣ್ಣಕಾರಕಗಳನ್ನು ಬಳಸುತ್ತಾರೆ. ಇದು ಕೂಡಾ ಅಪಾಯಕಾರಿ. ಆಹಾರ ಇಲಾಖೆಯ ಕಣ್ಣು ಇದರ ಮೇಲೂ ಬಿದ್ದಿದೆ. ಕಬಾಬ್ ಮಾದರಿಗಳನ್ನು ಆಗಲೇ ಸಂಗ್ರಹಿಸಲಾಗಿದೆ ಎಂದು ತಿಳಿದುಬಂದಿದೆ.

ಡಾ.ಸಿ.ಎನ್.ಮಂಜುನಾಥ್ ಸ್ಪರ್ಧೆ

ನಾನೆಂದೂ ಗುತ್ತಿಗೆದಾರರಿಂದ ಹಣ ಕೇಳಿದವನಲ್ಲ, ಚುನಾವಣೆ ಆದ ಮೇಲೆ ನಾನು ಊರುಗಳಲ್ಲಿ ಜಗಳ ತಂದಿಡಲಿಲ್ಲ, ನಿಮ್ಮಲ್ಲಿ ಒಬ್ಬನಾಗಿ ಪಕ್ಷಕ್ಕೆ ದುಡಿಮೆ ಮಾಡಿದ್ದೇನೆ. ಬಿಜೆಪಿ ಹೈಕಮಾಂಡ್ ಹಾಗೂ ರಾಜ್ಯ ಬಿಜೆಪಿ ನಾಯಕರು ಎಲ್ಲರೂ ಡಾ.ಮಂಜುನಾಥ್ ಅವರನ್ನೇ ಒಮ್ಮತದ ಅಭ್ಯರ್ಥಿ ಮಾಡಬೇಕು ಎಂದು ಬಯಸಿದ್ದಾರೆ. ಮಿತ್ರ ಪಕ್ಷದ ವರಿಷ್ಠರು, ರಾಜ್ಯದ ಬಿಜೆಪಿ ನಾಯಕರ ಭಾವನೆಗಳನ್ನು ನಾವು ಗೌರವಿಸಬೇಕಿದೆ. ಭಾನುವಾರ ನಾನು ನಮ್ಮ ತಂದೆಯವರ ಜತೆ ಎರಡು ಗಂಟೆ ಕಾಲ ಚರ್ಚೆ ಮಾಡಿದೆ. ಡಾ.ಮಂಜುನಾಥ್ ಅವರ ಸ್ಪರ್ಧೆ ವಿಚಾರವನ್ನು ಮನವರಿಕೆ ಮಾಡಿಕೊಟ್ಟಿದ್ದೇನೆ. ನನ್ನ ತಂಗಿ ಮನೆಯಲ್ಲಿ ಕಣ್ಣೀರು ಹಾಕ್ತಾ ಇದ್ದಾಳೆ, ನಮ್ಮನ್ನು ಯಾಕೆ ರಾಜಕೀಯಕ್ಕೆ ಎಳೆಯುತ್ತೀರಿ, ನೆಮ್ಮದಿಯಿಂದ ಇದ್ದೇವೆ, ನಮಗೆ ರಾಜಕೀಯ ಬೇಡ ಅಂತ ಅಳ್ತಾ ಕೂತಿದ್ದಾಳೆ.

ಇದು ನಮ್ಮ ಮನೆಯ ಪರಿಸ್ಥಿತಿ. ನನ್ನ ನೋವು ನನಗೇ ಗೊತ್ತು. ಆದರೆ, ಆ ಕಿರಾತಕರನ್ನು ಮಣಿಸಲೇಬೇಕು. ಇದು ನನ್ನ ಗುರಿ. ಈ ಚುನಾವಣೆಯನ್ನು ಸವಾಲಾಗಿ ಸ್ವೀಕಾರ ಮಾಡಿ ಎಂದು ನಿಮಗೆ (ಕಾರ್ಯಕರ್ತರಿಗೆ) ಮನವಿ ಮಾಡುತ್ತೇನೆ. ರಾಮನಗರ ಜನರು ನಿಖಿಲ್‌ರನ್ನು ಸೋಲಿಸಿದ್ದಾರೆ ಎಂದು ನಾನು ಬೇಸರಗೊಂಡಿಲ್ಲ. ನಮ್ಮದೇ ತಪ್ಪುಗಳಿಂದ ನಿಖಿಲ್ ಸೋತಿದ್ದಾರೆ, ಆ ತಪ್ಪುಗಳನ್ನು ಸರಿ ಮಾಡೋಣ. ದೇವೇಗೌಡರು ಕಣ್ಣೀರು ಹಾಕೋದು ಅವರ ಕುಟುಂಬಕ್ಕೆ ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಾರೆ. ಅವರಿಗೆ ಆತ್ಮಸಾಕ್ಷಿ ಅನ್ನೋದು ಇದೆಯಾ? ಅವರು ಏನೆಲ್ಲಾ ಮಾಡಿದ್ದಾರೆ, ಏನೆಲ್ಲಾ ಕೆಡುಕು ಮಾಡಿದ್ದಾರೆ ಎನ್ನುವುದು ಈ ರಾಜ್ಯಕ್ಕೆ ಗೊತ್ತಿದೆ. ನಾವು ಹಾಗೆ ಮಾಡಿದ್ದೇವೆಯಾ, ಖಂಡಿತಾ ಇಲ್ಲ ಎಂದರು.

ಇಡೀ ವಿಶ್ವವೇ ಮೋದಿ ಅವರನ್ನು ಗೌರವಿಸುತ್ತದೆ, ಅಂತಹ ಮೋದಿ ಅವರು, ದೇವೇಗೌಡರು ಬಂದರೆ ಎಷ್ಟು ಗೌರವ ಕೊಡುತ್ತಾರೆ, ತಂದೆಯಂತೆ ಆದರಿಸುತ್ತಾರೆ. ಇದನ್ನು ಆ ವ್ಯಕ್ತಿ ಅರ್ಥ ಮಾಡಿಕೊಳ್ಳಬೇಕು.

ಗೌಡರ ಮನೆಯಲ್ಲಿ ಅಳಿಯನನ್ನೇ ಹರಕೆಯ ಕುರಿ ಮಾಡಲು ಹೊರಟಿದ್ದಾರೆ ಎಂದು ಹೇಳಿದ ಆ ವ್ಯಕ್ತಿಗೆ ಸತ್ಯ ಗೊತ್ತಿಲ್ಲ. ಡಾ. ಮಂಜುನಾಥ್ ಅವರು ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದಾರೆ, ಲಕ್ಷಾಂತರ ಬಡ ಜನರ ಹೃದಯ ಕಾಪಾಡಿದ್ದಾರೆ. ದೇಶದಲ್ಲಿಯೇ ಅವರ ಸೇವೆಯನ್ನು ಕೊಂಡಾಡುತ್ತಾರೆ. ಅಂತಹ ವ್ಯಕ್ತಿ ದೆಹಲಿಗೆ ಹೋದರೆ ಇಡೀ ದೇಶಕ್ಕೆ ಸೇವೆ ಮಾಡಬಹುದು. ಅವರನ್ನು ಹರಕೆಯ ಕುರಿ ಮಾಡುತ್ತಿಲ್ಲ. ನಾವು, ಎಲ್ಲರೂ ಅವರ ನಿಸ್ವಾರ್ಥ ಸೇವೆಯನ್ನು ಗುರುತಿಸಿದ್ದಾರೆ. ಚುನಾವಣೆ ಹೇಗೆ ನಡೆಸಬೇಕು, ಏನೆಲ್ಲಾ ಮಾಡಬೇಕು ಎಂಬುದಾಗಿ ಮುಖಂಡರಿಗೆ ಸಲಹೆ ಸೂಚನೆ ಕೊಟ್ಟ ಕುಮಾರಸ್ವಾಮಿ, ದುಡುಕಬೇಡಿ, ನಿಷ್ಠೆಯಿಂದ ಕೆಲಸ ಮಾಡಿ, ಎಲ್ಲವನ್ನೂ ಮರೆತು ಹೊಸ ಅಧ್ಯಾಯ ಆರಂಭ ಮಾಡೋಣ ಎಂದಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಅನಂತ್‌ಕುಮಾರ್ ಹೆಗಡೆ ಉಚ್ಚಾಟಿಸಿ



ಮೈಸೂರು,ಮಾ.11(ಪಿಎಂ)– ಸಂವಿಧಾನ ತಿದ್ದುಪಡಿ ಮಾಡಬೇಕಾದರೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 400 ಸ್ಥಾನಗಳನ್ನು ಗೆಲ್ಲಬೇಕೆಂಬ ಬಿಜೆಪಿ ಸಂಸದ ಅನಂತ್‌ಕುಮಾರ್ ಹೆಗಡೆ ಅವರ ಹೇಳಿಕೆ ಖಂಡಿಸಿರುವ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಬಿಜೆಪಿ ಪಕ್ಷಕ್ಕೆ ನಿಜಕ್ಕೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಇಂತಹವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. 5 ವರ್ಷಗಳ ಕಾಲ ಬೀದಿಗೆ ಬಾರದೆ ಚುನಾವಣೆ ಸಂದರ್ಭದಲ್ಲಿ ತಮ್ಮ ಪಕ್ಷದ ಹೈಕಮಾಂಡ್ ಗಮನ ಸೆಳೆಯುವ ಏಕೈಕ ಉದ್ದೇಶದಿಂದ ಅನಂತಕುಮಾರ್ ಹೆಗಡೆ, ಸಂವಿಧಾನ ತಿದ್ದುಪಡಿ ಎಂಬ ಮೂರ್ಖತನದ ಹೇಳಿಕೆ ನೀಡಿದ್ದಾರೆ. ಈಗಾಗಲೇ ಬಿಜೆಪಿ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಕಾಡೆ ಮಲಗಿದೆ. ದೇವರು–ಹಿಂದೂ ಎಂಬ ಭಾವನಾತ್ಮಕ ವಿಚಾರಗಳಿಂದ ಜನರನ್ನು ಮರಳು ಮಾಡಲು ಇನ್ನು ಸಾಧ್ಯವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನಪರ ಆಡಳಿತದ ಹಿನ್ನೆಲೆಯಲ್ಲಿ ಈ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಕಾಂಗ್ರೆಸ್ ಬೆಂಬಲಿಸಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಾ. 14, ಮೂತ್ರಪಿಂಡ ಆರೋಗ್ಯ ಜಾಗೃತಿ ವಾಕಥಾನ್

ಮೈಸೂರು,ಮಾ.11(ಎಂಟಿವೈ)– ಕೆ.ಆರ್. ಆಸ್ಪತ್ರೆಯಲ್ಲಿರುವ ಮೂತ್ರರೋಗ ಸಂಸ್ಥೆ ಹಾಗೂ ಶಾರದಾ ವಿಲಾಸ ಔಷಧ ವಿಜ್ಞಾನ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಮೈಸೂರಲ್ಲಿ ಮಾ. 14 ರಂದು ವಿಶ್ವ ಮೂತ್ರಪಿಂಡ ದಿನಾಚರಣೆ ಪ್ರಯುಕ್ತ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ನೆಫ್ರೋಯುರಾಲಜಿ ವಿಭಾಗದ ಮುಖ್ಯಸ್ಥ ಡಾ.ಜೆ.ಬಿ. ನರೇಂದ್ರ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.14ರಂದು ಬೆಳಗ್ಗೆ 7ಕ್ಕೆ ಅರಮನೆ ಕೋಟೆ ಆಂಜನೇಯ ದೇವಾಲಯದ ಮುಂಭಾಗದಿಂದ ಮೂತ್ರಪಿಂಡದ ಆರೋಗ್ಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ವಾಕಥಾನ್ ಆಯೋಜಿಸಲಾಗಿದೆ. ಕೆ.ಆರ್. ಆಸ್ಪತ್ರೆಯಲ್ಲಿ ಮೂತ್ರಪಿಂಡ ಕುರಿತಂತೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಅಲ್ಲದೆ, ಕಿಡ್ನಿ ಕುರಿತಂತೆ ಜನರಲ್ಲಿರುವ ತಪ್ಪು ಕಲ್ಪನೆ ಕುರಿತು ಜಾಗೃತಿ ಮೂಡುವ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಈ ವೇಳೆ ಎಚ್ಚೆತ್ತುಕೊಂಡಲ್ಲಿ ಔಷಧಗಳ ಆಧಾರದ ಮೇಲೆ ಮೂತ್ರಪಿಂಡದ ಆರೋಗ್ಯ ಕಾಯ್ದುಕೊಳ್ಳಬಹುದಾಗಿದೆ.

ಸುದ್ದಿಗೋಷ್ಠಿಯಲ್ಲಿ ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ. ಹನುಮಂತಾಚಾರ್ ಜೋಷಿ, ಮಂಜೇಶ್, ಡಾ. ಶಶಿಕಿರಣ್ ಹಾಗೂ ಇನ್ನಿತರರು ಇದ್ದರು.

ಮೈಸೂರು ಮಿತ್ರ

ಮಂಗಳವಾರ 12 ಮಾರ್ಚ್ 2024

ಪ್ರತಾಪ್ ಸಿಂಹರಿಗೆ ಈ ಬಾರಿಯೂ ಟಿಕೆಟ್ ಕಲ್ಪಿಸಲು ಒಕ್ಕಲಿಗರ ವೇದಿಕೆ ಆಗ್ರಹ

ಮೈಸೂರು,ಮಾ.11(ಎಂಟಿವೈ)– ಕಳೆದ 10 ವರ್ಷದಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿ, ಹಲವು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿರುವ ಸಂಸದ ಪ್ರತಾಪ ಸಿಂಹ ಅವರಿಗೆ ಈ ಬಾರಿಯೂ ಸ್ಪರ್ಧಿಸಲು ಅವಕಾಶ ನೀಡಬೇಕು. ಅವರಿಗೆ ಟಿಕೆಟ್ ಕೈ ತಪ್ಪುವ ಸಂಬಂಧ ಎದ್ದಿರುವ ಊಹಾಪೋಹಕ್ಕೆ ಬಿಜೆಪಿ ಮುಖಂಡರು ತೆರೆ ಎಳೆಯಬೇಕು ಎಂದು ಜಿಲ್ಲಾ ಒಕ್ಕಲಿಗರ ಯುವ ವೇದಿಕೆ ಆಗ್ರಹಿಸಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಒಕ್ಕಲಿಗರ ಯುವ ವೇದಿಕೆಯ ಅಧ್ಯಕ್ಷ ಎನ್.ರಾಜಕುಮಾರ್, ಮುಖಂಡರಾದ ಸತೀಶ್‌ಗೌಡ ಬೀಡನಹಳ್ಳಿ, ಚೇತನ್, ರವಿಕುಮಾರ್, ಅಣ್ಣೇಗೌಡ ಇನ್ನಿತರರು ಮಾತನಾಡಿ, ಒಕ್ಕಲಿಗ ಸಮುದಾಯದ ನಾಯಕರ ವಿರುದ್ಧ ಆರೋಪ ಮಾಡುತ್ತಿದ್ದ ಅಡಗೂರು ಹೆಚ್.ವಿಶ್ವನಾಥ್ ಅವರನ್ನು 2014ರ ಲೋಕಸಭಾ ಚುನಾವಣೆಯಲ್ಲಿ ಸೋಲಿಸಲು ಬಿಜೆಪಿ ಅಭ್ಯರ್ಥಿಯಾಗಿದ್ದ ಪ್ರತಾಪ ಸಿಂಹ ಅವರನ್ನು ಸಮುದಾಯ ಬೆಂಬಲಿಸಿತ್ತು. 2019ರ ಚುನಾವಣೆಯಲ್ಲಿ ಮಂಡ್ಯದಲ್ಲಿ ನಿಖಿಲ್ ಕುಮಾರಸ್ವಾಮಿ, ತುಮಕೂರಿನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಮೈತ್ರಿ ಪಕ್ಷದ ಕೈಕೊಟ್ಟ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಹೆಚ್.ವಿಜಯಶಂಕರ್ ಅವರ ವಿರುದ್ಧ ಪ್ರತಾಪ ಸಿಂಹ ಅವರಿಗೆ ಒಕ್ಕಲಿಗ ಸಮುದಾಯ ಬೆಂಬಲ ನೀಡಿ ಗೆಲ್ಲಿಸಿದೆ. ಈ ಎರಡೂ ಅವಧಿಯಲ್ಲಿ ಉತ್ತಮವಾಗಿ ಕೆಲಸ ಮಾಡಿರುವ ಪ್ರತಾಪ ಸಿಂಹ ಅವರಿಗೆ ಈ ಬಾರಿ ಟಿಕೆಟ್ ಕೈ ತಪ್ಪುತ್ತಿದೆ ಎಂಬ ವದಂತಿ ಹಬ್ಬಿದೆ. ಇದರಿಂದ ಗೊಂದಲ ಉಂಟಾಗಿದ್ದು, ಕೂಡಲೇ ಬಿಜೆಪಿ ಹೈಕಮಾಂಡ್ ಇದಕ್ಕೆ ತೆರೆ ಎಳೆಯಬೇಕು ಎಂದು ಮನವಿ ಮಾಡಿದರು.

ಬೆಂಗಳೂರು ಹೊರತುಪಡಿಸಿದರೆ ಮೈಸೂರು ನಗರ ಅಭಿವೃದ್ಧಿಯಾಗಿದೆ. ಇದಕ್ಕೆ ಸಂಸದ ಪ್ರತಾಪ ಸಿಂಹ ಅವರು ಜಾರಿಗೆ ತಂದ ಯೋಜನೆಗಳು ಕಾರಣ. ಹೀಗಾಗಿ ಈ ಬಾರಿಯೂ ಪ್ರತಾಪ ಸಿಂಹ ಅವರಿಗೆ ಬಿಜೆಪಿ ಟಿಕೆಟ್ ನೀಡಬೇಕು. ಒಂದು ವೇಳೆ ಬಿಜೆಪಿ ಟಿಕೆಟ್ ನೀಡದಿದ್ದಲ್ಲಿ ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಒಕ್ಕಲಿಗ ಸಮುದಾಯ ದಿಟ್ಟ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ವಿವಿಧ ಒಕ್ಕಲಿಗ ಸಂಘ ಸಂಸ್ಥೆ ಮುಖಂಡರಾದ ಪ್ರೇಮ ಶಂಕರೇಗೌಡ, ಜಗದೀಶ್ ಮತ್ತಿತರರು ಇದ್ದರು.

ಪ್ರತಾಪ್ ಸಿಂಹ ಬೆಂಬಲಕ್ಕೆ ನಿಂತ ಮೈಸೂರು ಕೊಡವ ಸಮಾಜ

ಮೈಸೂರು,ಮಾ.11(ಎಂಟಿವೈ)– ಅಭಿವೃದ್ಧಿ ಹಾಗೂ ಹಿಂದುತ್ವದ ವಿಚಾರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸದ ಪ್ರತಾಪ ಸಿಂಹ ಅವರಿಗೆ ಬಿಜೆಪಿ ಈ ಬಾರಿಯೂ ಟಿಕೆಟ್ ನೀಡಬೇಕು ಎಂದು ಮೈಸೂರು ಕೊಡವ ಸಮಾಜ ಒತ್ತಾಯಿಸಿದೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೂಜಂಡ ಗಣಪತಿ ಮಾತನಾಡಿ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಳೆದ ಎರಡು ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿರುವ ಸಂಸದ ಪ್ರತಾಪ ಸಿಂಹ ಅವರಿಗೆ ಬಿಜೆಪಿ ಟಿಕೆಟ್ ಕೈ ತಪ್ಪುತ್ತದೆ ಎಂಬ ಸುದ್ದಿ ಕೇಳಿ ಬಂದಿದೆ. 10 ವರ್ಷದಲ್ಲಿ ಈ ಹಿಂದೆ ಯಾರೂ ಮಾಡಿರದ ಅಭಿವೃದ್ಧಿ ಕಾರ್ಯಗಳು ಪ್ರತಾಪ ಸಿಂಹ ಅವರ ಅವಧಿಯಲ್ಲಾಗಿವೆ. ಮೈಸೂರಿಗೆ ಹೊಸದಾಗಿ 12 ರೈಲುಗಳನ್ನು ತಂದಿದ್ದಾರೆ. ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಕ್ರಮ ಕೈಗೊಂಡಿದ್ದಾರೆ. ಮೈಸೂರು–ಕೊಡಗು ಭಾಗದ ರಸ್ತೆ ಅಭಿವೃದ್ಧಿಯಾಗಿವೆ. ಮೈಸೂರು–ಬೆಂಗಳೂರು ನಡುವೆ ಎಕ್ಸ್‌ಪ್ರೆಸ್ ಹೈವೇ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ನಮ್ಮ ಒತ್ತಾಯದ ಮೇರೆಗೆ ಮೈಸೂರನ್ನು ಕೈಗಾರಿಕಾ ಹಬ್ ಹಾಗೂ ಎಲೆಕ್ಟ್ರಾನಿಕ್ ಸಿಟಿ ಮಾಡಲು ಯತ್ನಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನೀಡದಿರಲು ನಿರ್ಧರಿಸಿದೆ ಎಂದರೆ ನಂಬಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿ ಬದಲಿಸಲು ನಿರ್ಧಾರ ಮಾಡಿದ್ದರೆ, ಅದನ್ನು ಕೈಬಿಡಬೇಕು. ಈ ಬಾರಿ ಪ್ರತಾಪ ಸಿಂಹ ಅವರನ್ನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಬೇಕು ಎಂದು ಆಗ್ರಹಿಸಿದರು.

ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಅಧ್ಯಕ್ಷೆ ಲೌಲಿ ಅಪ್ಪಯ್ಯ ಮಾತನಾಡಿ, ಸಂಸದ ಪ್ರತಾಪ ಸಿಂಹ ಅಭಿವೃದ್ಧಿ ವಿಚಾರ ಮಾತ್ರವಲ್ಲದೆ, ಹಿಂದೂ ಧರ್ಮದ ವಿಚಾರದಲ್ಲೂ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಯಾವುದೇ ಅಭಿವೃದ್ಧಿ ಕಾರ್ಯ ನಡೆಸಬೇಕಾದರೆ ಕೇಂದ್ರದ ಸಂಬಂಧಪಟ್ಟ ಸಚಿವರೊಂದಿಗೆ ಸಂಪರ್ಕ ಸಾಧಿಸಿ ಕೆಲಸ ಮಾಡಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಬದಲಿಸಲು ಮುಂದಾಗಿದೆ ಎನ್ನುವುದು ಬೇಸರದ ಸಂಗತಿ. ಈ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರು ಮನಸ್ಸು ಬದಲಿಸಿ, ಈ ಬಾರಿಯೂ ಪ್ರತಾಪ ಸಿಂಹ ಅವರನ್ನು ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಸಬೇಕು ಎಂದು ಮನವಿ ಮಾಡಿದರು.

ಮುಖಂಡ ಕುಟ್ಟಿಮಾಡ ಮುತ್ತಪ್ಪ ಮಾತನಾಡಿ, ಕಳೆದೆರಡು ದಿನಗಳಿಂದ ಮಾಧ್ಯಮಗಳಲ್ಲಿ ಈ ಬಾರಿ ಪ್ರತಾಪ್‌ಸಿಂಹ ಅವರಿಗೆ ಬಿಜೆಪಿ ಟಿಕೆಟ್ ನೀಡುವುದಿಲ್ಲ ಎಂಬ ಸುದ್ದಿಗಳು ಪ್ರಸಾರವಾಗುತ್ತಿವೆ. ಬಿಜೆಪಿ ಇವರಿಗೆ ಟಿಕೆಟ್ ನಿರಾಕರಿಸಿಲ್ಲ. ಸುಳ್ಳು ವದಂತಿಗಳನ್ನು ಹಬ್ಬಿಸಲಾಗುತ್ತಿದೆ. ಒಂದು ವೇಳೆ ಇವರಿಗೆ ಟಿಕೆಟ್ ನೀಡದಿದ್ದಲ್ಲಿ ಕ್ಷೇತ್ರದಲ್ಲಿ ನಿರ್ಣಾಯಕ ಸಂಖ್ಯೆಯಲ್ಲಿರುವ ಸ್ಥಳೀಯ ಮತದಾರರು ದಿಟ್ಟ ಪರ್ಯಾಯ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ವೇದಿತ್ ಉತ್ತಯ್ಯ, ಮಾಚಿಮಾಡ ನಂಜಯ್ಯ, ಪಿ.ಸೋಮಣ್ಣ, ಲೀಲಾ ನಂಜಯ್ಯ ಇನ್ನಿತರರು ಇದ್ದರು.

ಮೈಸೂರು ನಗರ ಸೇರಿ ಜಿಲ್ಲೆಯಲ್ಲಿ 9 ಹೊಸ ಇಂದಿರಾ ಕ್ಯಾಂಟೀನ್‌ಗಳಿಗೆ ಶಂಕುಸ್ಥಾಪನೆ

ಮೈಸೂರು, ಮಾ. 11 (ಆರ್‌ಕೆ)– ಮೈಸೂರು ನಗರದ ಎರಡು ಸೇರಿದಂತೆ ಜಿಲ್ಲೆಯಾದ್ಯಂತ ಹೊಸ ಒಂಭತ್ತು ಇಂದಿರಾ ಕ್ಯಾಂಟೀನ್‌ಗಳ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗುದ್ದಲಿ ಪೂಜೆ ನೆರವೇರಿಸಿದ ಸಚಿವರು, ಮುಖ್ಯಮಂತ್ರಿಗಳ ನಗರೋತ್ಥಾನ 4ನೇ ಹಂತದಡಿ ಆಯ್ದ ಫಲಾನುಭವಿಗಳಿಗೆ ಸಹಾಯಧನದ ಚೆಕ್‌ಗಳನ್ನು ಇದೇ ವೇಳೆ ವಿತರಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ 2016ರಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಯಿತು. ಮೈಸೂರಿನ 12 ಸೇರಿ ಜಿಲ್ಲೆಯಲ್ಲಿ 17 ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿದ್ದು, 5 ರೂ.ಗೆ ತಿಂಡಿ, 10 ರೂ.ಗೆ ಊಟ ನೀಡಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯಾದ್ಯಂತ 520 ಇಂದಿರಾ ಕ್ಯಾಂಟೀನ್‌ಗಳಲ್ಲಿ ಬಡವರು, ಕೂಲಿ ಕಾರ್ಮಿಕರು ಹಸಿವು ನೀಗಿಸಿಕೊಳ್ಳುತ್ತಿದ್ದಾರೆ. ಇದೀಗ ರಾಗಿ ಮುದ್ದೆ, ಸೊಪ್ಪು ಸಾರು ಪೂರೈಸಲು ಕ್ರಮ ವಹಿಸಲಾಗಿದೆ. ಸೂರಿಲ್ಲದವರಿಗೆ ಧನ ಸಹಾಯ ನೀಡುತ್ತಿರುವುದಲ್ಲದೆ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ ಸಂವಿಧಾನದ ಆಶಯಗಳನ್ನು ಸರ್ಕಾರ ಸಾಕಾರಗೊಳಿಸುತ್ತಿದೆ ಎಂದು ಡಾ.ಮಹದೇವಪ್ಪ ನುಡಿದರು.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಬಡ ಜನರಿಗೆ ಆಹಾರ, ಮಹಿಳೆಯರಿಗೆ ಉಚಿತ ಪ್ರಯಾಣ, ವಿದ್ಯುತ್, ನಿರುದ್ಯೋಗಿ ಯುವಕರಿಗೆ ಸಹಾಯಧನ ಸಿಗುತ್ತಿರುವುದರಿಂದ ಜನರ ಜೀವನ ಮಟ್ಟ ಸುಧಾರಿಸುತ್ತಿದೆ ಎಂದು ಇದೇ ಸಂದರ್ಭ ನುಡಿದರು.



ಮೈಸೂರು ಜಿಲ್ಲೆಯಲ್ಲಿ ಹೊಸ ಒಂಭತ್ತು ಇಂದಿರಾ ಕ್ಯಾಂಟೀನ್‌ಗಳ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಶಂಕುಸ್ಥಾಪನೆ ನೆರವೇರಿಸಿದರು. ಶಾಸಕ ಕೆ.ಹರೀಶ್‌ಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಹೆಚ್ಚುವರಿ ಜಿಲ್ಲಾಧಿಕಾರಿ ಶಿವರಾಜ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಬಿ.ಶುಭ ಚಿತ್ರದಲ್ಲಿದ್ದಾರೆ.

ಶಾಸಕ ತನ್ವೀರ್ ಸೇಠ್ ಮಾತನಾಡಿ, ದುಡಿಯುವ ವರ್ಗದ ಜನರಿಗೆ ಕಡಿಮೆ ದರದಲ್ಲಿ ಊಟ ತಿಂಡಿ ಒದಗಿಸುವ ಸದುದ್ದೇಶದಿಂದ ಸರ್ಕಾರ ಜಾರಿಗೆ ತಂದಿರುವ ಇಂದಿರಾ ಕ್ಯಾಂಟೀನ್‌ಗಳಿಂದ ಹಲವರ ಹಸಿವು ನೀಗುತ್ತಿದೆ ಎಂದು ಹೇಳಿದರು. ಈ ವೇಳೆ ಶಾಸಕ ಕೆ. ಹರೀಶ್‌ಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಹೆಚ್ಚುವರಿ ಜಿಲ್ಲಾಧಿಕಾರಿ ಶಿವರಾಜ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಬಿ.ಶುಭ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಸಾಪ ಭವನದಲ್ಲಿ ಮುದ ನೀಡಿದ ವೈದ್ಯರ ಗಾಯನ ಸಂಜೆ

ಮೈಸೂರು, ಮಾ.11(ಎಸ್‌ಪಿಎನ್)– ಮನುಷ್ಯನಿಗೆ ಮರುಜೀವ ಕೊಡುವ ವೈದ್ಯರ ಸೇವೆ ಅನನ್ಯ ಎಂದು ಗೀತಾ ರಚನಾಕಾರ್ತಿ ಡಾ.ಎನ್.ಕೆ.ಲೋಲಾಕ್ಷಿ ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಕಸಾಪ ಭವನದಲ್ಲಿ ಮೈಸೂರು ಗಾನ ವೈದ್ಯ ಲೋಕದ ದ್ವಿತೀಯ ವಾರ್ಷಿಕೋತ್ಸವ ಹಾಗೂ ಗಾನ ಸಂಜೆ ಕಾರ್ಯಕ್ರಮದ ಎಂದೂ ಮರೆಯದ ಹಾಡು–8 ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ವೈದ್ಯರು ಕಲೆ, ಸಾಹಿತ್ಯ, ವಿವಿಧ ಮಾನವಿಕ ವಿಭಾಗದಲ್ಲಿ ತೊಡಗಿಸಿಕೊಂಡರೆ, ವೈದ್ಯ ಲೋಕದಲ್ಲಿ ಮಾನವೀಯತೆ ಸ್ಪರ್ಶ ನೀಡಲು ಸಾಧ್ಯವಾಗುತ್ತದೆ ಎಂದರು.

ಈ ವೇಳೆ ಗಾಯಕರಾದ ಡಾ.ವೈ.ಡಿ.ರಾಜಣ್ಣ, ಡಾ.ಟಿ.ರವಿಕುಮಾರ್, ಡಾ.ಎ.ಎಸ್.ಪೂರ್ಣಿಮಾ, ಶ್ರೀಲತಾ ಮನೋಹರ್, ಡಾ.ಮನು, ಡಾ.ಶ್ಯಾಮಪ್ರಸಾದ್, ಡಾ.ಸುರೇಂದ್ರನ್, ಸಿ.ಎಸ್.ವಾಣಿ, ಡಾ.ಚಿನ್ನನಾಗಪ್ಪ, ಡಾ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ನಂತರ ಬಾನಲ್ಲಿ ನಿನ್ನಿಂದ ಸೂರ್ಯೋದಯ, ಈ ವಿರಹ ನನ್ನ ನಿನ್ನ ಆಸೆ, ನಿಲ್ಲು ನೀ ನಲ್ಲೇ, ಬಂಗಾರಿ ನನ್ನ ವೈಯ್ಯಾರಿ, ಸೈ, ಸೈ, ಸೈ, ನಿನ್ನ ಕಂಡು ಬೆರಗಾದೆನೇ, ನಿಜವ ನುಡಿವೆನು ನನ್ನಾಣೆ, ಆಕಾಶ ನೀನಾದರೆ ಆ ತಾರೆ, ನಸುನಗುತ ಬಾ ಚಿನ್ನ, ಬಾನಿನ ಅಂಚಿಂದ ಬಂದೆ, ಆಕಾಶದ ನೀಲಿಯಲ್ಲಿ, ಕಾಲ್ಗೆಜ್ಜೆ ತಾಳಕೆ, ಓ ನಲ್ಲೆ ಸವಿ ನುಡಿಯ ಹೇಳೆ, ಈ ಕಣ್ಣಿಗೂ ಹೆಣ್ಣಿಗೂ, ಸೂರ್ಯನ ಕಾಂತಿಗೆ, ಒಂದು ಮಳೆಬಿಲ್ಲು, ನೂರೊಂದು ನೆನಪು, ಬಾನಲ್ಲೆ ಬಾನಲ್ಲೆ, ಗುಬ್ಬಚ್ಚಿ ಗೂಡಿನಲ್ಲಿ, ಮುಗಿಲ ಮಾರಿಗೆ ರಾಗ ರತಿಯ, ಓ ಪ್ರಿಯತಮ, ಓ ಮೈನಾ ಓ ಮೈನಾ, ನಾವಾಡುವ ನುಡಿಯೆ, ನೀಲಮೇಘ, ಮನಸಿನಿಂದ, ಒಲವೇ ಮೌನವೇ, ಹಾಲು ಜೇನು ಒಂದಾದ, ಅಲ್ಲಿ ಇಲ್ಲಿ ನೋಡುವೆ ಏಕೆ ಸೇರಿದಂತೆ ಇತರೆ ಕನ್ನಡ ಗೀತೆಗಳನ್ನು ಗಾಯಕರಾದ ಡಾ.ವೈ.ಡಿ.ರಾಜಣ್ಣ, ಡಾ.ಟಿ.ರವಿಕುಮಾರ್, ಡಾ. ಪೂರ್ಣಿಮಾ, ಶ್ರೀಲತಾ ಮನೋಹರ್, ಡಾ.ಮನು, ಡಾ.ಶ್ಯಾಮಪ್ರಸಾದ್, ಡಾ.ಸುರೇಂದ್ರನ್, ಸಿ.ಎಸ್.ವಾಣಿ, ಡಾ.ಚಿನ್ನನಾಗಪ್ಪ, ಡಾ.ಶಿವಕುಮಾರ್ ಮಧುರವಾಗಿ ಹಾಡಿದರು.



ಮೈಸೂರು ಗಾನ ವೈದ್ಯಲೋಕದ ದ್ವಿತೀಯ ವಾರ್ಷಿಕೋತ್ಸವ ಹಾಗೂ ಗಾನ ಸಂಜೆ ಕಾರ್ಯಕ್ರಮದ ಗಾಯಕರನ್ನು ಸನ್ಮಾನಿಸಲಾಯಿತು.

ಕೇಂದ್ರ ಸರ್ಕಾರದ ನಿವೃತ್ತ ಅಧಿಕಾರಿಗೆ 1.30 ಕೋಟಿ ವಂಚನೆ

ಮೈಸೂರು, ಮಾ. 11– ಭ್ರಷ್ಟಾಚಾರ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಬಗ್ಗೆ ಎಫ್‌ಐಆರ್ ದಾಖಲಾಗಿದೆ ಎಂದು ತಿಳಿಸಿ ಕೇಂದ್ರ ಸರ್ಕಾರದ ನಿವೃತ್ತ ಅಧಿಕಾರಿಯೊಬ್ಬರಿಗೆ ಆನ್‌ಲೈನ್ ಮೂಲಕ 1.30 ಕೋಟಿ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮೈಸೂರಿನ ನಿವೇದಿತನಗರ ನಿವಾಸಿ ಕೃಷ್ಣಮೂರ್ತಿ (ಹೆಸರು ಬದಲಿಸಲಾಗಿದೆ) ವಂಚನೆಗೊಳಗಾದವರಾಗಿದ್ದು, ಇವರ ಮೊಬೈಲ್‌ಗೆ ಫೆ. 15ರಂದು 8808051035 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತನ್ನನ್ನು ಟ್ರಾಯ್ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಲ್ಲದೇ, ಕೃಷ್ಣಮೂರ್ತಿ ಆಧಾರ್ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆ ಮೂಲಕ ಕಾನೂನು ಬಾಹಿರ ಜಾಹೀರಾತುಗಳನ್ನು ನೀಡಿ ಅಮಾಯಕರಿಗೆ ಕಿರುಕುಳ ನೀಡಲಾಗಿದೆ ಹಾಗೂ ಅಕ್ರಮ ಹಣ ವರ್ಗಾವಣೆಗೆ ಬಳಸಲಾಗಿದೆ ಎಂಬ ಆರೋಪದಡಿ ಎಫ್‌ಐಆರ್ ದಾಖಲಾಗಿರುವುದಾಗಿ ತಿಳಿಸಿದ್ದಾನೆ.

ನಂತರ 2226829783 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತನ್ನನ್ನು ಮುಂಬೈ ಪೊಲೀಸ್ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಲ್ಲದೇ, ಕೃಷ್ಣಮೂರ್ತಿ ಅವರು ಸಚಿವರುಗಳು ಮತ್ತು ಅಧಿಕಾರಿಗಳೊಂದಿಗೆ ಸೇರಿ ಭ್ರಷ್ಟಾಚಾರ ಹಾಗೂ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸಿರುವ ಆರೋಪದ ಮೇರೆಗೆ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದ್ದಲ್ಲದೇ, ಸ್ಕೈಪ್ ಐಡಿ ಮೂಲಕ ವಿಡಿಯೋ ಕಾಲ್ ಮಾಡಿ ತಾನು ಮುಂಬೈ ಪೊಲೀಸ್ ಎಂದು ಐಡಿ ಕಾರ್ಡ್ ಅನ್ನು ತೋರಿಸಿದ್ದಾನೆ. ನಂತರ ಕೃಷ್ಣಮೂರ್ತಿ ಅವರು ನರೇಶ್ ಗೋಯೆಲ್ ವಂಚನೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆತ ಆರೋಪಿಸಿದ್ದಾನೆ.

ಅಷ್ಟಕ್ಕೇ ನಿಲ್ಲದೆ ತದನಂತರ 8127654781 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ತನ್ನನ್ನು ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಲ್ಲದೇ ನ್ಯಾಷನಲ್ ಸೆಕ್ಯೂರಿಟಿಗೆ ಸಂಬಂಧಿಸಿದ ಅಧಿಕಾರಿ ತಾನು ಎಂದು ಹೇಳಿ ಬೆದರಿಕೆ ಹಾಕಿದ್ದಾನೆ. ಈ ವ್ಯಕ್ತಿಗಳು ಕೃಷ್ಣಮೂರ್ತಿ ಅವರಿಂದ ಫೆ. 15ರಿಂದ 21ರವರೆಗೆ ಹಂತ ಹಂತವಾಗಿ 1,30,20,047 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಈ ಸಂಬಂಧ ಕೃಷ್ಣಮೂರ್ತಿ ಮಾ. 6ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ನಗರ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಗೌಡತಿಯರ ಬಳಗದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಆದಿಚುಂಚನಗಿರಿಯ ಮಹಿಳಾ ಒಕ್ಕಲಿಗ ಸಮಾಜದ ಗೌಡತಿಯರ ಬಳಗ ಹಾಗೂ ಒಕ್ಕಲಿಗ ಸೇವಾ ವೇದಿಕೆಯ ಸಹಯೋಗದಲ್ಲಿ ಮೈಸೂರಿನ ಕುವೆಂಪುನಗರದ ನೇಗಿಲ ಯೋಗಿ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಮಹಿಳಾ ಸಾಧಕರಿಗೆ ಸನ್ಮಾನಿಸುವ ಮೂಲಕ ಆಚರಣೆ ಮಾಡಲಾಯಿತು. ಈ ವೇಳೆ ಕೆಎಎಸ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಇಂದಿರಮ್ಮ ಹಾಗೂ ವೈದ್ಯಾಧಿಕಾರಿ ಶ್ರೀಮತಿ ಪ್ರಮೀಳಾ ಅವರನ್ನು ಸನ್ಮಾನಿಸಲಾಯಿತು. ಬಳಗದ ಅಧ್ಯಕ್ಷೆ ಸವಿತಾಗೌಡ, ಪದಾಧಿಕಾರಿಗಳಾದ ಲತಾ ರಮೇಶ್, ರಾಜೇಶ್ವರಿ ನಾಗರಾಜ್, ಮಮತಾ ಪುರುಷೋತ್ತಮ್, ಜಾಹ್ನವಿ ದಿನೇಶ್, ವಿಜಯಮಂಜುನಾಥ್, ವನಜ, ರುಕ್ಮಿಣಿ, ಸುಧಾ ಸ್ವಾಮಿಗೌಡ, ರಾಣಿ ಮಹೇಶ್, ಇಂದಿರಾ, ಬಳಗದ ಇನ್ನಿತರೆ ಸದಸ್ಯರು, ಎಸ್‌ವಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹಿರಿಯ ಸಂಸ್ಕೃತ ವಿದ್ವಾಂಸರಿಗೆ ಶಾಸ್ತ್ರ, ವೇದ ವಿದ್ಯಾನಿಧಿ ಪ್ರಶಸ್ತಿ ಪ್ರದಾನ



ರಾಜ್ಯದ ವಿವಿಧ ಜಿಲ್ಲೆಯ ಸಂಸ್ಕೃತ ವಿದ್ವಾಂಸರಿಗೆ 'ಶಾಸ್ತ್ರ' ಮತ್ತು 'ವೇದ ವಿದ್ಯಾನಿಧಿ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಮೈಸೂರು, ಮಾ.11(ಎಸ್‌ಪಿಎನ್)– ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಮೈಸೂರಿನ ವೇದಶಾಸ್ತ್ರ ಪೋಷಿಣೀ ಸಭಾ ವತಿಯಿಂದ ಶತೋತ್ತರ ಸಂಭ್ರಮದ ಅಂಗವಾಗಿ ವಿವಿಧ ಜಿಲ್ಲೆಯ ಸಂಸ್ಕೃತ ವಿದ್ವಾಂಸರಿಗೆ 'ಶಾಸ್ತ್ರ', 'ವೇದ ವಿದ್ಯಾನಿಧಿ' ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ನವದೆಹಲಿಯ ಡಾ.ಪರಮೇಶ್ವರ ನಾರಾಯಣ ಶಾಸ್ತ್ರಿ (ಶಾಸ್ತ್ರ ವಿದ್ಯಾನಿಧಿ), ಶೃಂಗೇರಿಯ ಎಸ್.ಎನ್.ಶ್ರೀನಿವಾಸಮೂರ್ತಿ ಭಟ್ (ವೇದ ವಿದ್ಯಾನಿಧಿ), ಗೋಕರ್ಣದ ಕೃಷ್ಣ ಮಾಣೇಶ್ವರ ಜೋಗಭಟ್ಟ (ವೇದ ವಿದ್ಯಾನಿಧಿ), ಸಾಗರದ ವಿದ್ವಾನ್ ಪುಟ್ಟಯ್ಯ ನಾರಾಯಣ ಭಟ್ಟ (ವೇದವಿದ್ಯಾನಿಧಿ), ಮೈಸೂರಿನ ವಿದ್ವಾನ್ ಕೆ.ಆರ್. ಮಂಜುನಾಥ ಶ್ರೌತೀ (ವೇದವಿದ್ಯಾನಿಧಿ), ಮಂಗಳೂರಿನ ಡಾ.ಗೋಪಾಲಕೃಷ್ಣ ಭಟ್ಟ (ಶಾಸ್ತ್ರ ವಿದ್ಯಾನಿಧಿ), ಬೆಂಗಳೂರಿನ ಡಾ.ಶ್ರೀಧರ್ ಮೇಲುಕೋಟೆ (ಶಾಸ್ತ್ರ ವಿದ್ಯಾನಿಧಿ), ಉಡುಪಿಯ ವಿದ್ವಾನ್ ಡಾ.ಎನ್.ಲಕ್ಷ್ಮೀನಾರಾಯಣ ಭಟ್ಟ (ಶಾಸ್ತ್ರ ವಿದ್ಯಾನಿಧಿ), ಬೆಂಗಳೂರಿನ ಡಾ.ಎ.ರಾಮಸ್ವಾಮಿ ಅಯ್ಯಂಗಾರ್ (ಶಾಸ್ತ್ರ ವಿದ್ಯಾನಿಧಿ), ಶಿರಸಿಯ ವಿದ್ವಾನ್ ಎಚ್.ಸಿ. ಬಾಲಚಂದ್ರ ಶಾಸ್ತ್ರಿ (ಶಾಸ್ತ್ರ ವಿದ್ಯಾನಿಧಿ), ಧಾರವಾಡದ ವಿದ್ವಾನ್ ಮಧುಸೂದನ ಶಾಸ್ತ್ರಿ ಹಂಪೀಹೊಳಿ, ವಿದ್ವಾನ್ ಡಾ.ರಂಗನಾಥನ್, ರಾಜರಾಜೇಶ್ವರಿ ಜೋಶಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

> ರಾಜ್ಯ ಸರ್ಕಾರವೇ ಸಂಸ್ಕೃತ ವಿದ್ವಾಂಸರನ್ನು ಗುರುತಿಸಿ ಸನ್ಮಾನಿಸುವ ಕೆಲಸ ಮಾಡಬೇಕಾಗಿತ್ತು. ಆದರೆ, ಆ ಕೆಲಸವನ್ನು ವೇದಶಾಸ್ತ್ರ ಪೋಷಿಣಿ ಸಭಾದ ಪದಾಧಿಕಾರಿಗಳು ಮಾಡುತ್ತಿದ್ದಾರೆ. ರಾಜ್ಯದಲ್ಲಿ ಅನೇಕರು ವೇದ, ಉಪನಿಷತ್ ಹಾಗೂ ಭಾರತೀಯ ಪರಂಪರೆ ಉಳಿವಿಗಾಗಿ ಎಲೆಮರೆ ಕಾಯಿಯಂತೆ ಕೆಲಸ ಮಾಡುತ್ತಿದ್ದಾರೆ. ಇನ್ನು ಮುಂದಾದರು ಇಂತಹ ಸಾಧಕರನ್ನು ಗುರುತಿಸುವ ಕೆಲಸವಾಗಲಿ.
> –ಡಾ.ಟಿ.ವಿ.ಸತ್ಯನಾರಾಯಣ

ನಂತರ ಹಿರಿಯ ವಿದ್ವಾಂಸ ಡಾ.ಟಿ.ವಿ. ಸತ್ಯನಾರಾಯಣ ಮಾತನಾಡಿ, ವೇದ ಶಾಸ್ತ್ರ ಪೋಷಿಣೀ ಸಭಾ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಯ 10ಕ್ಕೂ ಹೆಚ್ಚು ಮಂದಿ ವಿದ್ವಾಂಸರನ್ನು ಗುರುತಿಸಿ 'ವೇದ' ಮತ್ತು 'ಶಾಸ್ತ್ರ ವಿದ್ಯಾನಿಧಿ' ಪ್ರಶಸ್ತಿ ನೀಡಿ ಗೌರವಿಸಿರುವುದು ಹೆಮ್ಮೆಯ ಸಂಗತಿ ಎಂದರು.

ಈ ವೇಳೆ ವೇದಶಾಸ್ತ್ರ ಪೋಷಿಣೀ ಸಭಾ ಅಧ್ಯಕ್ಷ ಪ್ರೊ.ಬಿ.ಎನ್.ನಾಗರಾಜ ಭಟ್, ಕಾರ್ಯದರ್ಶಿ ಎ.ಎಂ.ಚಂದ್ರಶೇಖರ್, ಡಾ.ಎನ್.ಸುಬ್ರಹ್ಮಣ್ಯ ಭಟ್ಟ, ವಿದ್ವಾನ್ ಹೇರಂಬ ಆರ್.ಭಟ್ಟ, ವಿದ್ವಾನ್ ಕೆ.ರಮೇಶ ಅಡಿಗ, ವಿದ್ವಾನ್ ವಿಶ್ವನಾಥ ಅಗ್ನಿಹೋತ್ರಿ, ವಿದ್ವಾನ್ ವೆಂಕಟರಮಣ ಭಟ್ಟ, ವಿದ್ವಾನ್ ಚಿದಂಬರ ಭಟ್ಟ, ವಿದ್ವಾನ್ ಶ್ರೀಪಾದ ಭಟ್ಟ ಉಪಸ್ಥಿತರಿದ್ದರು.

ಮೋದಿ ಘೋಷಣೆ ಕೂಗಿದರೆ ಪ್ರತಿ ಘೋಷಣೆಯ ಎಚ್ಚರಿಕೆ

ಮೈಸೂರು,ಮಾ.11– ಸರ್ಕಾರಿ ಕಾರ್ಯಕ್ರಮಗಳಲ್ಲಿ ಮೋದಿ ಪರ ಘೋಷಣೆ ಕೂಗುವ ಪ್ರವೃತ್ತಿ ನಿಲ್ಲಿಸದಿದ್ದರೆ ಬಿಜೆಪಿ ಕೇಂದ್ರ ಸಚಿವರು, ಸಂಸತ್ ಸದಸ್ಯರು, ಶಾಸಕರು ಪಾಲ್ಗೊಳ್ಳುವ ಕಾರ್ಯಕ್ರಮಗಳಲ್ಲಿ ಪ್ರತಿ ಘೋಷಣೆ ಕೂಗಬೇಕಾಗುತ್ತದೆ ಎಂದು ಕೆಪಿಸಿಸಿ ವಕ್ತಾರ ಎಚ್.ಎ. ವೆಂಕಟೇಶ್ ಎಚ್ಚರಿಕೆ ನೀಡಿದ್ದಾರೆ.



ಎಚ್.ಎ.ವೆಂಕಟೇಶ್

ಮಂಡ್ಯದಲ್ಲಿ ನಡೆದ ರೈಲ್ವೆ ಕಾರ್ಯಕ್ರಮ ಹಾಗೂ ಮೈಸೂರಿನಲ್ಲಿ ನಡೆದ ರಾಷ್ಟ್ರೀಯ ಹೆದ್ದಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರದ ಸಚಿವರು ಮಾತನಾಡುವಾಗ ಮೋದಿ ಮೋದಿ ಎನ್ನುವ ಘೋಷಣೆ ಕೂಗಿ ಮಾತನಾಡದಂತೆ ಬೆದರಿಕೆ ಹಾಕುವುದು ತೀರಾ ಖಂಡನೀಯ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಕೇಂದ್ರ ಸಚಿವ ದಿವಂಗತ ಆಸ್ಕರ್ ಫರ್ನಾಂಡಿಸ್, ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರ ಶ್ರಮದ ಫಲ ಈ ರಾಷ್ಟ್ರೀಯ ಹೆದ್ದಾರಿ ರಸ್ತೆ ನಿರ್ಮಾಣ ಸಾಧ್ಯವಾಗಿದೆ ಎಂದಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಿಸಿದ ಶಾಸಕರಾದ ಜಿಟಿಡಿ



ದೇವರಾಜ ಅರಸು ಅಭಿವೃದ್ಧಿ ನಿಗಮದ ವತಿಯಿಂದ ಅರ್ಹ 36 ಜನ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರವನ್ನು ಶಾಸಕರಾದ ಜಿ.ಟಿ.ದೇವೇಗೌಡರು ವಿತರಿಸಿದರು.

ಮೈಸೂರು, ಮಾ.11(ಎಸ್‌ಪಿಎನ್)– ಮಹಿಳೆಯರು ಹೊಲಿಗೆ ಕಾಯಕದ ಮೂಲಕ ತಮ್ಮ ಬದುಕು ಕಟ್ಟಿಕೊಳ್ಳಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಅವರು ಇಂದು ಮೈಸೂರಿನ ಶಾಸಕರ ಕಛೇರಿಯಲ್ಲಿ ದೇವರಾಜ ಅರಸು ಅಭಿವೃದ್ಧಿ ನಿಗಮದವತಿಯಿಂದ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಅರ್ಹ 36 ಜನ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರವನ್ನು ವಿತರಿಸಿ ಮಾತನಾಡಿದರು.

ಮಹಿಳೆಯರು ಯಾರನ್ನು ಅವಲಂಬಿಸಬಾರದು. ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸ್ವಾವಲಂಬಿಗಳಾಗಬೇಕು ಎಂದು ಕಿವಿಮಾತು ಹೇಳಿದರು.

ಆರ್ಥಿಕವಾಗಿ ದುರ್ಬಲವಾಗಿರುವ ಮಹಿಳೆಯರು ಹೊಲಿಗೆ ಕಾಯಕವನ್ನು ಆದಾಯದ ಮೂಲವಾಗಿಸಿಕೊಳ್ಳಬೇಕು. ಹೊಲಿಗೆ ಯಂತ್ರ ನಿಮ್ಮ ಬಳಿ ಇದ್ದರೆ ಗಳಿಕೆಗೆ ನಾನಾ ದಾರಿಯಿದೆ. ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಮನೆಯಲ್ಲಿ ಕುಳಿತು ಉದ್ಯೋಗ ಮಾಡಿ ಸ್ವಾವಲಂಬಿ ಬದುಕು ಕಂಡುಕೊಳ್ಳಲು ಮಹಿಳೆಯರು ಹೊಲಿಗೆ ತರಬೇತಿ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಜೆ.ಡಿ.ಎಸ್‌ಅಧ್ಯಕ್ಷ ಹೆಚ್.ಸಿ.ರಾಜು, ಬೆಳವಾಡಿ ಶಿವಕುಮಾರಸ್ವಾಮಿ, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಕ್ಷೇತ್ರ ಅಧಿಕಾರಿ ನಿತಿನ್ ಹಾಜರಿದ್ದರು.

ಶೇ.60ರಷ್ಟು ಕನ್ನಡ ನಾಮಫಲಕ ಕಡ್ಡಾಯ

ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚನೆ

ಮಡಿಕೇರಿ, ಮಾ.11–ಜಿಲ್ಲೆಯ ಎಲ್ಲಾ ಅಂಗಡಿ, ಹೋಟೆಲ್, ವಾಣಿಜ್ಯ ಸಂಕೀರ್ಣ, ಕೈಗಾರಿಕೋದ್ಯಮ, ಶಾಲಾ–ಕಾಲೇಜು, ಸರ್ಕಾರಿ ಕಚೇರಿಗಳು ಹಾಗೂ ಪ್ರವಾಸೋದ್ಯಮ ಕೇಂದ್ರಗಳ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆ ಬಳಕೆ ಕಡ್ಡಾಯವಾಗಿದ್ದು, ಈ ಸಂಬಂಧ ಆಯಾ ಇಲಾಖೆ ವ್ಯಾಪ್ತಿಯಲ್ಲಿ ತ್ವರಿತವಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ, ತಿದ್ದುಪಡಿ, ವಿಧೇಯಕ ಸಂಬಂಧ ಫೆ.25ರಂದು ರಾಜ್ಯಪಾಲರಿಂದ ಒಪ್ಪಿಗೆ ದೊರೆತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ವಹಿವಾಟು ಕೇಂದ್ರಗಳು, ಉದ್ಯಮಗಳ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆ ಇರಲೇಬೇಕು. ಈ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳು ಹಾಗೂ ಸಂಬಂಧಪಟ್ಟ ಇಲಾಖೆಗಳು ಅಗತ್ಯ ಕ್ರಮಕೈಗೊಳ್ಳುವಂತೆ ನಿರ್ದೇಶಿಸಿದರು.

ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ, ಮಂಜೂರಾತಿ ಪಡೆದ ಎಲ್ಲಾ ಸಂಸ್ಥೆಗಳಿಗೂ ಈ ಕಾಯ್ದೆ ಅನ್ವಯವಾಗಲಿದೆ ಖಾಸಗಿ ಶಾಲಾ–ಕಾಲೇಜು, ಆಸ್ಪತ್ರೆ ಪ್ರಯೋಗಾಲಯ, ಮನರಂಜನಾ ಕೇಂದ್ರ, ಹೋಟೆಲ್ ಸೇರಿದಂತೆ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ.60ರಷ್ಟು ಪ್ರದರ್ಶಿಸಬೇಕು ಎಂದು ಆದೇಶಿಸಿದರು.



ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕನ್ನಡ ನಾಮಫಲಕ ಕಡ್ಡಾಯ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿದರು.

ಜಿಲ್ಲೆಯ ಗಡಿಪ್ರದೇಶ, ಖಾಸಗಿ ಶಾಲೆಗಳಲ್ಲಿ ಕನ್ನಡ ಭಾಷೆಗೆ ಪ್ರಥಮ ಆದ್ಯತೆ ನೀಡಬೇಕು. ಈ ಕಾರ್ಯ ಆಗದಿದ್ದಲ್ಲಿ ಪ್ರಥಮ ಹಂತದಲ್ಲಿ 5 ಸಾವಿರ ರೂ., ಎರಡನೇ ಹಂತದಲ್ಲಿ 10 ಸಾವಿರ ರೂ. ದಂಡ ಪಾವತಿಸಬೇಕಾಗುತ್ತದೆ. ನಂತರ ಪರವಾನಗಿ ರದ್ದುಪಡಿಸಲಾಗುವುದು. ಕನ್ನಡ ನಾಮಫಲಕ ಬರೆಸಲು ಹಾಗೂ ಪ್ರದರ್ಶಿಸಲು 7 ದಿನ ಕಾಲಾವಕಾಶ ನೀಡಲಾಗಿದೆ ಎಂದರು.

ಜಿಪಂ ಸಿಇಒ ವರ್ಣಿತ್ ನೇಗಿ ಮಾತನಾಡಿ, ಕನ್ನಡ ನಾಮಫಲಕಗಳಿಗೆ ಸಂಬಂಧಿಸಿದಂತೆ ಜಿಪಂ, ತಾಪಂ ಮತ್ತು ಗ್ರಾಪಂ ಮಟ್ಟದಲ್ಲಿ ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ಸಭೆಯಲ್ಲಿ ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಬಿ.ಬಸಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಎಂ.ಚಂದ್ರಕಾಂತ್, ನಗರಸಭೆಯ ಪರಿಸರ ಇಂಜಿನಿಯರ್ ಸೌಮ್ಯ, ವಿವಿಧ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಮಾ.14ರಂದು ಗ್ಯಾರಂಟಿ ಸಮಾವೇಶ

ರಾಜ್ಯ ಸರ್ಕಾರದ ಪ್ರಮುಖ ಯೋಜನೆಗಳ ಸಂಬಂಧ 'ಗ್ಯಾರಂಟಿ ಸಮಾವೇಶ' ಮಾ.14ರಂದು ಮಡಿಕೇರಿಯ ಗಾಂಧಿ ಮೈದಾನದಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದರು.

ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಜೊತೆ ಚರ್ಚಿಸಿದ ಜಿಲ್ಲಾಧಿಕಾರಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಗ್ಯಾರಂಟಿ ಯೋಜನೆಗಳ ಸಮಾವೇಶ ನಡೆಯಲಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಶಕ್ತಿ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಸೇರಿದಂತೆ ಹಲವು ಯೋಜನೆಗಳ ಫಲಾನುಭವಿಗಳ ಸಮಾವೇಶ ನಗರದಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಸೆಸ್ಕ್ ಕಾರ್ಯಪಾಲಕ ಇಂಜಿನಿಯರ್ ಅನಿತಾ ಬಾಯಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನಟರಾಜು, ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕಿ ರೇಖಾ ಗಣಪತಿ, ಆಹಾರ ಇಲಾಖೆ ಶಿರಸ್ತೆದಾರರಾದ ವೀಣಾ, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ಮೆಹಬೂಬ್ ಅಲಿ ಇತರರು ಇದ್ದರು.

'ಕಂದೀಲು' ಚಿತ್ರಕ್ಕೆ ಅತ್ಯುತ್ತಮ ಪ್ರಶಸ್ತಿ



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಕಂದೀಲು' ಚಿತ್ರ ನಿರ್ದೇಶಕಿ ಕೊಟ್ಟುಕತ್ತೀರ ಯಶೋಧಾ ಪ್ರಕಾಶ್ ಅವರಿಗೆ ಡಾಲಿ ಧನಂಜಯ ಪ್ರಶಸ್ತಿ ಪ್ರದಾನ ಮಾಡಿದರು. ಸಾಧು ಕೋಕಿಲ, ಉಮಾಶ್ರೀ, ಪ್ರಕಾಶ್ ಕಾರ್ಯಪ್ಪ ಇದ್ದರು.

ಮಡಿಕೇರಿ, ಮಾ.11–ಸ್ವಸ್ತಿಕ್ ಎಂಟರ್ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ಕೊಟ್ಟುಕತ್ತೀರ ಯಶೋಧಾ ಪ್ರಕಾಶ್ ನಿರ್ಮಾಣ ಮತ್ತು ನಿರ್ದೇಶನದ ಕನ್ನಡ ಚಲನಚಿತ್ರ 'ಕಂದೀಲು' 2ನೇ ಅತ್ಯುತ್ತಮ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ 15ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡ ಸಿನಿಮಾ ಸ್ಪರ್ಧಾತ್ಮಕ ವಿಭಾಗದಲ್ಲಿ ಆಯ್ಕೆಗೊಂಡ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಲನಚಿತ್ರೋತ್ಸವದ ರಾಯಭಾರಿ ಡಾಲಿ ಧನಂಜಯ, ಕನ್ನಡ ಚಲನಚಿತ್ರ ಅಕಾಡೆಮಿ ನೂತನ ಅಧ್ಯಕ್ಷ ಸಾಧು ಕೋಕಿಲ ಮತ್ತು ಮಾಜಿ ಸಚಿವೆ ಉಮಾಶ್ರೀ ಅವರಿಂದ 'ಕಂದೀಲು' ಚಿತ್ರ ನಿರ್ದೇಶಕಿ ಕೊಟ್ಟುಕತ್ತೀರ ಯಶೋಧಾ ಪ್ರಕಾಶ್, ಪತಿ ಪ್ರಕಾಶ್ ಕಾರ್ಯಪ್ಪ ಹಾಗೂ ಕ್ಯಾಮರಾಮನ್ ಪಿ.ವಿ.ಆರ್. ಸ್ವಾಮಿ ಅವರು ಪ್ರಶಸ್ತಿ ಸ್ವೀಕರಿಸಿದರು.

ಚಿತ್ರೋತ್ಸವ ಸಮಿತಿ ಅಧ್ಯಕ್ಷ ಡಾ. ತ್ರಿಲೋಕ್ ಚಂದ್ರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ.ಸುರೇಶ್, ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಎನ್. ವಿದ್ಯಾಶಂಕರ್, ನಟ ಜೈ ಜಗದೀಶ್, ನಟಿಯರಾದ ಭಾವನಾ, ಪೂಜಾ ಗಾಂಧಿ, ಭವ್ಯ, ಚಿತ್ರದ ನಾಯಕ ಪ್ರಭಾಕರ್ ಬಿ.ಕುಂದರ್, ನಟಿ ಈರಮಂಡ ಹರಿಣಿ ವಿಜಯ್ ಉತ್ತಯ್ಯ, ಕಥೆ–ಸಂಕಲನಕಾರ ನಾಗೇಶ್ ಹಾಗೂ ವಿಜಯ್ ಉತ್ತಯ್ಯ ಹಾಜರಿದ್ದರು.



ಸುಂಟಿಕೊಪ್ಪದ ವಾಹನ ಚಾಲಕ ಮತ್ತು ಮಾಲೀಕರ ಸಂಘದ ಕಚೇರಿ ಮುಂಭಾಗ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಭಾರತ್ ರೈಸ್ ವಿತರಿಸಲಾಯಿತು. ಗ್ರಾಪಂ ಅಧ್ಯಕ್ಷ ಪಿ.ಆರ್.ಸುನೀಲ್ ಕುಮಾರ್, ಸೋಮವಾರಪೇಟೆ ಮಂಡಲ ಬಿಜೆಪಿ ಮುಖಂಡರಾದ ಗೌತಮ್ ರೈ, ಗ್ರಾಪಂ ಸದಸ್ಯ ಬಿ.ಎಂ.ಸುರೇಶ್, ಶಾಂತಿ ಶಕ್ತಿ ಕೇಂದ್ರ ಪ್ರಮುಖ್ ವಾಸು, ಬಿ.ಕೆ.ಪ್ರಶಾಂತ್, ಸುಂಟಿಕೊಪ್ಪ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ವಿಘ್ನೇಶ್, ಮಾಜಿ ಅಧ್ಯಕ್ಷ ಬಿ.ಕೆ.ಮೋಹನ್ ಮತ್ತಿತರರಿದ್ದರು.

ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ

ವಿರಾಜಪೇಟೆ, ಮಾ.11–ರಾಜ್ಯ ಸರ್ಕಾರ ಕಾನೂನು ದುರ್ಬಳಕೆ ಮಾಡಿಕೊಂಡು ಜಿಲ್ಲೆಯ ಹಿಂದೂಪರ ಸಂಘಟನೆಗಳಲ್ಲಿ ಗುರುತಿಸಿಕೊಂಡಿರುವ ವ್ಯಕ್ತಿಗಳು ಹಾಗೂ ಕಾಫಿ ಬೆಳೆಗಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸುತ್ತಿದೆ ಎಂದು ಆರೋಪಿಸಿ ಕಾನೂನು ದುರ್ಬಳಕೆ ವಿರೋಧಿ ಹೋರಾಟ ಸಮಿತಿಯ ಕಾರ್ಯಕರ್ತರು ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ವಿರಾಜಪೇಟೆಯ ಪೊಲೀಸ್ ಉಪ ಅಧೀಕ್ಷಕರ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ. ಇಲ್ಲಸಲ್ಲದ ಆರೋಪಗಳನ್ನು ಹೊರಿಸಿ ಬಿಜೆಪಿ, ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಮತ್ತು ಬಿಜೆಪಿ ಬೆಂಬಲಿತ ಕಾಫಿ ಬೆಳೆಗಾರರ ಮೇಲೆ ಉದ್ದೇಶ ಪೂರ್ವಕವಾಗಿ ಕೇಸ್ ದಾಖಲಿಸುತ್ತಿದೆ. ಇದಕ್ಕೆ ಸ್ಥಳೀಯ ಜನಪ್ರತಿನಿಧಿಗಳು ಕೈಜೋಡಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ನೆಲ್ಲಿರ ಚಲನ್, ವಿರಾಜಪೇಟೆ ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಸುವಿನ್ ಗಣಪತಿ, ಪಕ್ಷದ ರಾಜ್ಯ ಪ್ರಮುಖರಾದ ರೀನಾ ಪ್ರಕಾಶ್ ಮತ್ತಿತರು ಪಾಲ್ಗೊಂಡಿದ್ದರು.



ವಿರಾಜಪೇಟೆಯ ಪೊಲೀಸ್ ಉಪಅಧೀಕ್ಷಕರ ಕಚೇರಿ ಎದುರು ರಾಜ್ಯ ಸರ್ಕಾರದ ವಿರುದ್ಧ ಕಾನೂನು ದುರ್ಬಳಕೆ ವಿರೋಧಿ ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕಂದಾಯ ಇಲಾಖೆಯಿಂದ ನಿರಾಶ್ರಿತರ ಗುಡಿಸಲುಗಳು ತೆರವು

ಮಡಿಕೇರಿ: ನಾಪೋಕ್ಲುವಿನ ಚೆರಿಯಪರಂಬುವಿನ ನಿರಾಶ್ರಿತರ ಗುಡಿಸಲುಗಳನ್ನು ಕಂದಾಯ ಇಲಾಖೆ ತೆರವುಗೊಳಿಸುವ ಮೂಲಕ ಬಡವರಿಗೆ ಅನ್ಯಾಯ ಮಾಡಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ನಿರಾಶ್ರಿತರಿಗೆ ಆಗಿರುವ ನಷ್ಟವನ್ನು ಭರಿಸಬೇಕು ಎಂದು ಸಿಐಟಿಯು ಸಂಘಟನೆ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ಒತ್ತಾಯಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿರಾಶ್ರಿತರಿಗೆ ಬದಲಿ ವ್ಯವಸ್ಥೆ ಕಲ್ಪಿಸಿಕೊಡಬೇಕಾದ ಅಧಿಕಾರಿಗಳು, ಮಾನವೀಯತೆ ಮರೆತು ಗುಡಿಸಲುಗಳನ್ನು ನಾಶಪಡಿಸಿದ್ದಾರೆ. ಗುಡಿಸಲು ಕಳೆದುಕೊಂಡ ನಿರಾಶ್ರಿತರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸದೆ ನಿರ್ಲಕ್ಷ್ಯ ವಹಿಸಿರುವುದರಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಎಚ್ಚರಿಸಿದರು.

ಚೆರಿಯಪರಂಬುವಿನಲ್ಲಿ ಕೆಲ ವರ್ಷಗಳಿಂದ ಸುಮಾರು 18 ಕುಟುಂಬಗಳು ಗುಡಿಸಲು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದವು. ನಿವಾಸಿಗಳಿಗೆ ಯಾವುದೇ ಮುನ್ನೆಚ್ಚರಿಕೆ ಅಥವಾ ನೋಟಿಸ್ ನೀಡದೆ ಮನೆಯಲ್ಲಿ ಯಾರೂ ಇಲ್ಲದ ಸಂದರ್ಭದಲ್ಲಿ ನಾಪೋಕ್ಲುವಿನ ಕಂದಾಯ ಅಧಿಕಾರಿಗಳು ಏಕಾಏಕಿ ಗುಡಿಸಲನ್ನು ಕಿತ್ತು ಹಾಕಿದ್ದಾರೆ ಎಂದು ಆರೋಪಿಸಿದರು. ಕೊಡಗಿನಲ್ಲೇ ಹುಟ್ಟಿ ಬೆಳೆದ ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತರು ಸೇರಿದಂತೆ ಇನ್ನಿತರ ಕಡುಬಡತನದಲ್ಲಿರುವ ನಿರಾಶ್ರಿತರು ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಅದೇ ವಿಳಾಸದ ಆಧಾರ್, ರೇಷನ್ ಕಾರ್ಡ್, ಮತದಾರರ ಚೀಟಿ, ಎಲ್ಲಾ ಗುಡಿಸಲುಗಳಿಗೆ ನೀರಿನ ಪೈಪ್‌ಲೈನ್‌ಗಳನ್ನು ಕೂಡ ಅಳವಡಿಸಿಕೊಡಲಾಗಿದೆ ಅಧಿಕಾರಿಕಾರಿಗಳು ಬಡವರ ಮೇಲೆ ದರ್ಪ ತೋರಿಸುವುದು ಸರಿಯಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಚೆರಿಯಪರಂಬು ನಿವಾಸಿಗಳಾದ ಎಸ್.ಶಾಂತರಾಜು, ವೈ.ಎಸ್.ಪಾರ್ವತಿ, ವೈ.ಆರ್.ಸುನಿತಾ, ಬಿ.ಹೆಚ್.ಶಂಕರ್ ಉಪಸ್ಥಿತರಿದ್ದರು.




ಸುದ್ದಿಗೋಷ್ಠಿಯಲ್ಲಿ ಸಿಐಟಿಯು ಸಂಘಟನೆ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ಮಾತನಾಡಿದರು.

ಇಂದು ಕೆದಕಲ್‌ನ ಶ್ರೀ ಭದ್ರಕಾಳೇಶ್ವರಿ ದೇವಾಲಯ ವಾರ್ಷಿಕೋತ್ಸವ

ಮಡಿಕೇರಿ, ಮಾ.11– ಕೆದಕಲ್‌ನ ಶ್ರೀ ಭದ್ರಕಾಳೇಶ್ವರಿ ದೇವಾಲಯದ ವಾರ್ಷಿಕೋತ್ಸವ ಮಾ.12ರಂದು ನಡೆಯಲಿದೆ.

ಅಂದು ಬೆಳಗ್ಗೆ 10 ಗಂಟೆಗೆ ಗಣಪತಿ ಹೋಮ, 11 ಗಂಟೆಗೆ ಕುಂಭಾಭಿಷೇಕ, ಕಳಸ ಪೂಜೆ, ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿತರಣೆ ಹಾಗೂ 1 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ.

ಹೆಚ್ಚಿನ ಭಕ್ತರು ಪಾಲ್ಗೊಳ್ಳುವಂತೆ ಕೆದಕಲ್‌ನ ಶ್ರೀ ಭದ್ರಕಾಳೇಶ್ವರಿ ದೇವಾಲಯದ ಆಡಳಿತ ಮಂಡಳಿ ಪದಾಧಿಕಾರಿಗಳು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.



ಮ.ಬೆಟ್ಟದಲ್ಲಿ ವಿಜೃಂಭಣೆಯ ಶಿವರಾತ್ರಿ ರಥೋತ್ಸವ

ಲಕ್ಷಾಂತರ ಭಕ್ತರಿಂದ 'ಉಘೇ ಮಾದಪ್ಪ ಉಘೇ' ಜಯಘೋಷ



ಮಹದೇಶ್ವರಬೆಟ್ಟದಲ್ಲಿ ಮಹಾಶಿವರಾತ್ರಿ ರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ಹನೂರು, ಮಾ.11–ಪ್ರಸಿದ್ಧ ಯಾತ್ರಾ ಸ್ಥಳ ಮಲೆಮಹದೇಶ್ವರಬೆಟ್ಟದಲ್ಲಿ ಮಹಾ ಶಿವರಾತ್ರಿಯ ರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ತೇರನ್ನು ವಿವಿಧ ಪುಷ್ಪ, ತಳಿರು–ತೋರಣ ಹಾಗೂ ಬಣ್ಣ ಬಣ್ಣದ ಬಟ್ಟೆಗಳಿಂದ ಸಿಂಗರಿಸಲಾಗಿತ್ತು. ಬೇಡಗಂಪಣ ಅರ್ಚಕರು ದೇಗುಲದ ಗರ್ಭಗುಡಿಯಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಬಿಳಿ ಆನೆ ಉತ್ಸವ ನೆರವೇರಿಸಲಾಯಿತು. ನಂತರ ತೇರಿನ ಬಳಿ ತೆರಳಿ ಧಾರ್ಮಿಕ ಪೂಜಾ ಕೈಂಕರ್ಯ ನಡೆಸಿ, ಬೆಳಗ್ಗೆ 10.05ರ ಸುಮಾರಿಗೆ ಸ್ವಾಮಿಯ ವಿಗ್ರಹವನ್ನು ರಥದಲ್ಲಿ ಕುಳ್ಳರಿಸಿ ಬೂದು ಕುಂಬಳ ಕಾಯಿಯಿಂದ ದೃಷ್ಟಿ ತೆಗೆಯಲಾಯಿತು. ಬಳಿಕ ಮಹಾಮಂಗಳಾರತಿ ಹಾಗೂ ಬೇಡಗಂಪಣರ 108 ಹೆಣ್ಣು ಮಕ್ಕಳು ಬೆಲ್ಲದ ಆರತಿ ಬೆಳಗಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಪೊಲೀಸ್ ಬಂದೋಬಸ್ತ್‌ನೊಂದಿಗೆ ದೇಗುಲದ ಮುಖ್ಯದ್ವಾರದ ಆವರಣದಿಂದ ಸತ್ತಿಗೆ, ಸೂರಿಪಾನಿ, ಛತ್ರಿ, ಚಾಮರ, ನಂದಿಧ್ವಜ ಹಾಗೂ ಮಂಗಳವಾದ್ಯದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ಇದೇ ವೇಳೆ ಹುಲಿ ವಾಹನ, ಬಸವ ವಾಹನ ಹಾಗೂ ರುದ್ರಾಕ್ಷಿ ವಾಹನದ ಉತ್ಸವ ನೆರವೇರಿಸಲಾಯಿತು.

ಈ ವೇಳೆ ವೀರಗಾಸೆ ಕುಣಿತ ಭಕ್ತರ ಗಮನ ಸೆಳೆಯಿತು. ರಥೋತ್ಸವದಲ್ಲಿ ನೆರೆದಿದ್ದ ಭಕ್ತರು ತೇರಿಗೆ ಹಣ್ಣು, ದವನ, ಧನ, ಧಾನ್ಯ ಎಸೆದು ನಮಿಸುವ ಮೂಲಕ ಮಾದಪ್ಪನ ಕೃಪೆಗೆ ಪಾತ್ರರಾದರು. ರಥೋತ್ಸವದಲ್ಲಿ ತಮಿಳುನಾಡು, ಚಾಮರಾಜನಗರ, ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ, ಕನಕಪುರ, ಚನ್ನಪಟ್ಟಣ, ಮದ್ದೂರು, ದೊಡ್ಡಬಳ್ಳಾಪುರ, ಮಳವಳ್ಳಿ, ನಂಜನಗೂಡು, ತಿ.ನರಸೀಪುರ, ಹೆಚ್.ಡಿ.ಕೋಟೆ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಭಕ್ತರು ಭಾಗವಹಿಸಿದ್ದರು.

ರಥವನ್ನು ಎಳೆಯುವಾಗ ಭಕ್ತರು 'ಉಘೇ ಮಾದಪ್ಪ ಉಘೇ' ಜಯಘೋಷಗಳು ಮುಗಿಲು ಮುಟ್ಟಿದವು. ರಥೋತ್ಸವ ಬಳಿಕ ಭಕ್ತರು ರಥವನ್ನು ಸ್ಪರ್ಶಿಸಿ ನಮಸ್ಕರಿಸುವ ಮೂಲಕ ಮಾದಪ್ಪನನ್ನು ನೆನೆದರು.

ಪೊಲೀಸ್ ಬಂದೋಬಸ್ತ್: ಮಹಾರಥೋತ್ಸವ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟದ ದೇಗುಲ ಆವರಣದಲ್ಲಿ ಬೆಳಗ್ಗೆ 9 ರಿಂದಲೇ ಲಕ್ಷಾಂತರ ಭಕ್ತರು ಕಿಕ್ಕಿರಿದು ತುಂಬಿದ್ದರು. ಈ ಹಿನ್ನೆಲೆಯಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ರಥದ ಪೂಜಾ ಕೈಂಕರ್ಯ ವೇಳೆ ಪೊಲೀಸರು ಭಕ್ತರನ್ನು ರಥ ಸಂಚರಿಸುವ ಮಾರ್ಗದಿಂದ ದೂರ ಸರಿಯುವಂತೆ ಸೂಚನೆ ನೀಡುತ್ತಿದ್ದರು. ರಥೋತ್ಸವ ಪ್ರಾರಂಭ ಬಳಿಕ ಬದಿಯಲ್ಲಿ ನಿಂತಿದ್ದ ಭಕ್ತರು ತೇರನ್ನು ಎಳೆಯಲು ಜಯಘೋಷ ಕೂಗುತ್ತಾ ನಾ ಮುಂದು ತಾ ಮುಂದು ಎಂದು ಮುಂದೆ ಬಂದಾಗ ಪೊಲೀಸರು ಭಕ್ತರನ್ನು ದೂರ ಸರಿಸಲು ಹರಸಾಹಸ ಪಡಬೇಕಾಯಿತು.

ರಥೋತ್ಸವದಲ್ಲಿ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ರಘು, ಪ್ರಾಧಿಕಾರದ ನೌಕರರು, ದೇಗುಲದ ಅರ್ಚಕರು ಹಾಗೂ ಸಿಬ್ಬಂದಿ ಇದ್ದರು.

ಪ್ರಧಾನಿ ಮೋದಿ ಯೋಜನೆಗಳು ಪ್ರತಿ ಮನೆಗೂ ತಲುಪಲಿ

ಚಾಮರಾಜನಗರ : ಹತ್ತು ವರ್ಷಗಳ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಜಾರಿಗೊಳಿಸಿರುವ ಯೋಜನೆಗಳು ಪ್ರತಿ ಮನೆಗೂ ತಲುಪಬೇಕು. ಈ ಬಗ್ಗೆ ಜನರಿಗೆ ಜಾಗೃತಿ ಮೂಡಿಸಿ, ಬಿಜೆಪಿ ಸಾಧನೆಯನ್ನು ತಿಳಿಸುವ ಕೆಲಸವನ್ನು ನಾವೆಲ್ಲರೂ ಒಗ್ಗಟ್ಟಿನಿಂದ ಮಾಡೋಣ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ತಿಳಿಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಚಾ.ನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಡಿಜಿಟಲ್ ಪ್ರಚಾರ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳ ಅವಧಿಯ ಬಿಜೆಪಿಯ ಕೇಂದ್ರ ಸರ್ಕಾರದ ಯೋಜನೆಗಳನ್ನು ಜನರು ಬಹಳ ಸೂಕ್ಷ್ಮವಾಗಿ ಗಮನಿಸಿದ್ದಾರೆ.



ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ತುಷ್ಟೀಕರಣ ರಾಜಕಾರಣ, ಹಗರಣಗಳ ಸರಮಾಲೆಯನ್ನು ನೋಡಿ ಜನರು ಬೇಸತ್ತು ಬಿಜೆಪಿಗೆ ಅಧಿಕಾರ ನೀಡಿದ್ದಾರೆ. ಇದನ್ನು ಸಮರ್ಥವಾಗಿ ನಿರ್ವಹಣೆ ಮಾಡಿದ ಮೋದಿ ವಿಶ್ವವೇ ಮೆಚ್ಚುವಂತಹ ಆಡಳಿತ ನೀಡುತ್ತಿದ್ದಾರೆ. ಪ್ರತಿ ಹಳ್ಳಿ ಹಾಗೂ ಕುಗ್ರಾಮಗಳ ಮಹಿಳೆಯರು ಹಾಗೂ ರೈತರಿಗೆ ತಲುಪುವಂತಹ ಯೋಜನೆಗಳನ್ನು ಜಾರಿ ಮಾಡಿದ್ದಾರೆ ಎಂದರು.

ಜಿಲ್ಲಾ ಪ್ರಭಾರಿ ವಿ.ಫಣೀಶ್, ಚಾ.ನಗರ ಲೋಕಸಭಾ ಕ್ಷೇತ್ರದ ಸಂಚಾಲಕ ಪ್ರೊ. ಕೆ.ಆರ್.ಮಲ್ಲಿಕಾರ್ಜುನಪ್ಪ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನೂರೊಂದುಶೆಟ್ಟಿ ಪಿ.ವೃಷಬೇಂದ್ರಪ್ಪ ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ ಇದ್ದರು.

ಹೆಚ್ಚು ಬಾರಿ ಚಾ.ನಗರಕ್ಕೆ ಸಿದ್ದರಾಮಯ್ಯ ಭೇಟಿ

• ಮೌಢ್ಯಕ್ಕೆ ತಿಲಾಂಜಲಿ ಹಾಡಿದ ಮುಖ್ಯಮಂತ್ರಿಗಳು • ಜಿಲ್ಲೆಯ ಜನತೆ ಪ್ರಶಂಸೆ

ಚಾಮರಾಜನಗರ, ಮಾ.11–ಜಿಲ್ಲಾ ಕೇಂದ್ರ ಚಾಮರಾಜನಗರಕ್ಕೆ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡುತ್ತಿದ್ದು, ಅತಿ ಹೆಚ್ಚು ಬಾರಿ ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಸಿದ್ದರಾಮಯ್ಯ ಪಾತ್ರರಾಗುತ್ತಿದ್ದಾರೆ.

ಚಾಮರಾಜನಗರಕ್ಕೆ ಭೇಟಿ ನೀಡಿದರೆ ಸಿಎಂ ಸ್ಥಾನ ಕಳೆದುಕೊಳ್ಳುತ್ತಾರೆ ಎಂಬ ಮೌಢ್ಯಕ್ಕೆ ತಿಲಾಂಜಲಿ ಹಾಡಿರುವ ಸಿದ್ದರಾಮಯ್ಯ ಅವರು, ಮೊದಲು 2013–18ನೇ ಸಾಲಿನಲ್ಲಿ ಜಿಲ್ಲಾ ಕೇಂದ್ರಕ್ಕೆ 17 ಬಾರಿ ಹಾಗೂ ಜಿಲ್ಲೆಗೆ ಒಟ್ಟು 25ಕ್ಕೂ ಹೆಚ್ಚು ಬಾರಿ ಭೇಟಿ ನೀಡಿದ್ದರು. ಪ್ರಸ್ತುತ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ 10 ತಿಂಗಳ ಅವಧಿಯಲ್ಲಿ 2ನೇ ಬಾರಿಗೆ ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡುತ್ತಿರುವುದರಿಂದ ಅವರು ಜಿಲ್ಲೆಯ ಜನತೆಯ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಯೋಜನೆ ಘೋಷಣೆ ಸಾಧ್ಯತೆ: ಮಂಗಳವಾರ ನಗರದಲ್ಲಿ ನಡೆಯುವ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲೆಗೆ ವಿಶೇಷ ಯೋಜನೆ ಘೋಷಿಸುವ ಸಾಧ್ಯತೆ ಇದೆ ಎನ್ನಲಾಗಿದ್ದು, ಕುಡಿಯುವ ನೀರಿನ 2ನೇ ಹಂತದ ಯೋಜನೆ ಹಾಗೂ ಜಿಲ್ಲಾ ಕೇಂದ್ರದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣಕ್ಕೆ ಅನುದಾನ ಘೋಷಣೆ ಮಾಡುವ ಜೊತೆಗೆ ಜಿಲ್ಲೆಗೆ ವಿಶೇಷ ಪ್ಯಾಕೇಜ್ ನೀಡಲಿದ್ದಾರೆ ಎಂದು ಹೇಳಲಾಗುತ್ತಿದೆ.



ಚಾ.ನಗರದ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿರುವ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶಕ್ಕೆ ವೇದಿಕೆ ಸಿದ್ಧಪಡಿಸಿರುವುದು.

ಡಿಸಿಎಂ ಸೇರಿ ಗಣ್ಯರು ಭಾಗಿ: ನಗರದ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ವೆಂಕಟೇಶ್, ಕೆ.ಎಚ್.ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ, ಜಾರಕಿಹೋಳಿ, ಕೃಷ್ಣಬೈರೇಗೌಡ, ಕೆ.ಜೆ.ಜಾರ್ಜ್, ಲಕ್ಷ್ಮೀ ಆರ್.ಹೆಬ್ಬಾಳ್ಕರ್, ರಾಮಲಿಂಗಾರೆಡ್ಡಿ, ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲ್ ಭಾಗವಹಿಸಲಿದ್ದಾರೆ.

ನಗರಸಭೆಯಿಂದ ಸ್ವಚ್ಛತೆ: ಜಿಲ್ಲಾ ಕೇಂದ್ರಕ್ಕೆ ಮುಖ್ಯಮಂತ್ರಿ ಸಿದ್ದರಾಯ್ಯ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಸೋಮವಾರ ನಗರದ ಪ್ರಮುಖ ರಸ್ತೆಗಳಲ್ಲಿನ್ನು ಸ್ವಚ್ಛಗೊಳಿಸುವ ಕೆಲಸ ಬರದಿಂದ ಸಾಗಿತು.

ಹೆಗ್ಗವಾಡಿ ಗ್ರಾಮದಿಂದ ಚಾಮರಾಜನಗರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಸ್ತೆ ಮೂಲಕ ಆಗಮಿಸುತ್ತಿರುವುದರಿಂದ ಈ ಮಾರ್ಗದ ಅಲ್ಲಲ್ಲಿ ಬಿದ್ದಿದ್ದ ಗುಂಡಿಗಳನ್ನು ಮುಚ್ಚಲಾಗಿದೆ. ಅಲ್ಲದೇ, ರಸ್ತೆ ಎರಡು ಬದಿಯಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ತೆರವುಗೊಳಿಸಲಾಯಿತು.

ನಗರದ ಡಿವಿಯೇಷನ್ ರಸ್ತೆ, ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಮಣ್ಣು ತೆರವು, ಸ್ವಚ್ಛಗೊಳಿಸುವ ಕಾರ್ಯವನ್ನು ತರಾತುರಿಯಲ್ಲಿ ಮಾಡಲಾಯಿತು. ಅಧಿಕಾರಿಗಳು ಈ ಕೆಲಸ ಮಾಡಲು ಮುಖ್ಯಮಂತ್ರಿಗಳೇ ಬರಬೇಕಾಯಿತೇ ಎಂಬ ಪ್ರಶ್ನೆಗಳು ನಾಗರಿಕರಲ್ಲಿ ಮೂಡಿದೆ. ಇಲ್ಲಿಯವರೆಗೆ ಇದ್ಯಾವುದೇ ಕೆಲಸಗಳ ಬಗ್ಗೆ ಮೌನ ವಹಿಸಿದ್ದ ಅಧಿಕಾರಿಗಳು ಈಗ ಮುಖ್ಯಮಂತ್ರಿಗಳು ಬರುತ್ತಾರೆ ಎಂಬ ಕಾರಣಕ್ಕೆ ಸ್ವಚ್ಛತೆಗೆ ಮುಂದಾಗಿರುವುದು ಎಷ್ಟು ಸರಿ? ಇದುವರೆಗೂ ಈ ಕೆಲಸ ಮಾಡಲು ಇಲ್ಲದ ಹಣ, ಈಗ ಎಲ್ಲಿಂದ ಬಂತು ಎಂಬ ಪ್ರಶ್ನೆ ನಾಗರಿಕರದ್ದಾಗಿದೆ.

ಸ್ವಚ್ಛತಾ ಕಾರ್ಯದಲ್ಲಿ ಪರಿಸರ ಇಂಜಿನಿಯರ್ ಗಿರಿಜಾ, ಆರೋಗ್ಯಾಧಿಕಾರಿ ಮಂಜುನಾಥ್ ಹಾಗೂ ವಿವಿಧ ಇಲಾಖೆ ನೌಕರರು ಭಾಗವಹಿಸಿದ್ದರು.

ಇಂದು ನಗರಕ್ಕೆ ಸಿಎಂ ಭೇಟಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಮಾ.12ರಂದು ಚಾಮರಾಜನಗರ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಬೆಳಗ್ಗೆ 11.50ಕ್ಕೆ ಹೆಲಿಕಾಪ್ಟರ್ ಮೂಲಕ ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದ ಹೆಲಿಪ್ಯಾಡ್‌ಗೆ ಆಗಮಿಸಲಿದ್ದು, ಮಧ್ಯಾಹ್ನ 12.10ಕ್ಕೆ ಹೆಗ್ಗವಾಡಿ ಗ್ರಾಮಕ್ಕೆ ರಸ್ತೆ ಮೂಲಕ ಆಗಮಿಸಿ ದಿವಂಗತ ಆರ್.ಧ್ರುವನಾರಾಯಣ್ ಅವರ ಮೊದಲನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 1.15ಕ್ಕೆ ಚಾಮರಾಜನಗರಕ್ಕೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ಆಯೋಜಿಸಿರುವ ವಿವಿಧ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಭಾಗವಹಿಸಿ, ಸಂಜೆ 4.30ಕ್ಕೆ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಾ.ನಗರ ಜಿಲ್ಲೆಗೆ ಧ್ರುವನಾರಾಯಣ್ ಕೊಡುಗೆ ಅಪಾರ

ಚಾಮರಾಜನಗರ, ಮಾ.11– ಜಿಲ್ಲೆಯ ಅಭಿವೃದ್ಧಿಗೆ ಮಾಜಿ ಸಂಸದ ದಿವಂಗತ ಆರ್. ಧ್ರುವನಾರಾಯಣ್ ಕೊಡುಗೆ ಅಪಾರ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಪಿ. ಸದಾಶಿವಮೂರ್ತಿ ಸ್ಮರಿಸಿದರು.

ತಾಲೂಕಿನ ಕಾಗಲವಾಡಿ ಗ್ರಾಮದ ಬಸ್ ನಿಲ್ದಾಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಧ್ರುವನಾರಾಯಣ್ ಅಭಿಮಾನಿಗಳು ಆಯೋಜಿಸಿದ್ದ ಧ್ರುವನಾರಾಯಣ್ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಪ್ರಥಮವಾಗಿ ಶಾಸಕರಾಗಿದ್ದಾಗ ವಿಶೇಷ ಕಾಳಜಿ ವಹಿಸಿ ಸುವರ್ಣ ಗ್ರಾಮ ಯೋಜನೆಯಡಿ ಕಾಗಲವಾಡಿ ಗ್ರಾಮದ ಅಭಿವೃದ್ಧಿಗೆ ಒತ್ತು ನೀಡಿದ್ದರು ಎಂದರು.

ಧ್ರುವನಾರಾಯಣ್ ಅವರು ಕಾರ್ಯಕರ್ತರ ಬಗ್ಗೆ ಅಪಾರ ಕಾಳಜಿಯಿಟ್ಟುಕೊಂಡು ತಳಮಟ್ಟದಿಂದ ಕಾಂಗ್ರೆಸ್ ಅನ್ನು ಸಂಘಟಿಸಿದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಕಾಗಲವಾಡಿ ಚಂದ್ರು, ಗ್ರಾಪಂ ಮಾಜಿ ಉಪಾಧ್ಯಕ್ಷ ಮರಿಸ್ವಾಮಿ, ಪಿಎಲ್‌ಡಿ ಬ್ಯಾಂಕ್ ಬಾಬು, ಪೋಸ್ಟ್ ಮಹದೇವಸ್ವಾಮಿ, ಗ್ರಾಪಂ ಸದಸ್ಯ ಫಾಜಿಲ್ ಪಾಷ, ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ದಿನೇಶ್, ಸುರೇಶ್, ಜಯಶಂಕರ ಮೂರ್ತಿ, ಗುಂಡಣ್ಣ, ಮಹದೇವಸ್ವಾಮಿ, ರವಿ ಬಂಗಾರು, ಲಿಂಗರಾಜು ಇತರರು ಹಾಜರಿದ್ದರು.



ಚಾಮರಾಜನಗರ ತಾಲೂಕಿನ ಕಾಗಲವಾಡಿ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಧ್ರುವನಾರಾಯಣ್ ಅಭಿಮಾನಿಗಳು ಧ್ರುವನಾರಾಯಣ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಮೈಸೂರು ಮಿತ್ರ

ಮಂಗಳವಾರ 12 ಮಾರ್ಚ್ 2024

ಮೂರನೇ ಪುಟದಿಂದ

ಸಿಎಎ ಜಾರಿ

ಸಂಸದೀಯ ಕಾರ್ಯದ ಕೈಪಿಡಿ ಪ್ರಕಾರ ರಾಷ್ಟ್ರಪತಿಗಳ ಒಪ್ಪಿಗೆ ದೊರೆತ ಆರು ತಿಂಗಳಲ್ಲಿ ಶಾಸನ ನಿಯಮಗಳನ್ನು ರಚಿಸಬೇಕು ಅಥವಾ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅಧೀನ ಸಂಸದೀಯ ಸಮಿತಿಯಿಂದ ನಿಯಮಿತ ವಿಸ್ತರಣೆ ಪಡೆಯಬೇಕು. ಹಾಗೆಯೇ 2020ರಿಂದ ಗೃಹ ಸಚಿವಾಲಯ ನಿಯಮಗಳನ್ನು ರೂಪಿಸಲು ಸಂಸದೀಯ ಸಮಿತಿಯಿಂದ ನಿಯಮಿತ ವಿಸ್ತರಣೆ ಪಡೆದಿತ್ತು. ಅರ್ಜಿದಾರರ ಅನುಕೂಲಕ್ಕಾಗಿ ಆನ್‌ಲೈನ್ ಪೋರ್ಟಲ್ ಅಭಿವೃದ್ಧಿಪಡಿಸಿದ್ದು, ಸಂಪೂರ್ಣ ಪ್ರಕ್ರಿಯೆಯನ್ನು ಡಿಜಿಟಲ್‌ನಲ್ಲಿ ನಡೆಸಲಾಗುತ್ತದೆ. ಹಾಗೆಯೇ ಪೌರತ್ವ ಕೋರುವ ಅರ್ಜಿಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅರ್ಜಿದಾರರು ಪ್ರಯಾಣ ದಾಖಲೆಗಳಿಲ್ಲದೆ ಭಾರತಕ್ಕೆ ಪ್ರವೇಶಿಸಿದ ವರ್ಷವನ್ನು ಘೋಷಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನದಲ್ಲಿ ಧರ್ಮದ ಕಾರಣಕ್ಕಾಗಿ ದೌರ್ಜನ್ಯಕ್ಕೆ ಗುರಿಯಾದ ಅಲ್ಪಸಂಖ್ಯಾತರಿಗೆ ನಮ್ಮ ದೇಶದ ಪೌರತ್ವ ಪಡೆದುಕೊಳ್ಳಲು ಈ ನಿಯಮಗಳು ನೆರವಾಗಲಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಭಾರತದಲ್ಲಿ ಇರುವ ಪಾಕಿಸ್ತಾನದ ಹಿಂದೂ ನಿರಾಶ್ರಿತರು ಕೇಂದ್ರದ ನಡೆಯನ್ನು ಸ್ವಾಗತಿಸಿದ್ದಾರೆ. ಸಮುದಾಯದ ಸುಮಾರು ಐದು ಸಾವಿರ ಮಂದಿ ಈಗ ಪೌರತ್ವ ಪಡೆಯಲಿದ್ದಾರೆ ಎಂದು ದೆಹಲಿಯಲ್ಲಿ ನೆಲೆಸಿರುವ ಪಾಕಿಸ್ತಾನದ ಹಿಂದೂ ಕುಟುಂಬಗಳ ನಾಯಕ ಧರ್ಮವೀರ ಸೋಲಂಕಿ ಹರ್ಷ ವ್ಯಕ್ತಪಡಿಸಿದ್ದಾರೆ.

ಸಿಎಎ ಈಗ ದೇಶದ ಕಾನೂನಾಗಿದೆ. ಅದು ಅನುಷ್ಠಾನಕ್ಕೆ ಬರುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸಿಎಎ ಜಾರಿಗೆ ತರುವುದು ಬಿಜೆಪಿಯ ಬದ್ಧತೆಗಳಲ್ಲಿ ಒಂದು ಎಂದು ಅಮಿತ್ ಶಾ ಅವರು 2023ರ ಡಿಸೆಂಬರ್ 27ರಂದು ಹೇಳಿದ್ದರು. ಸಿಎಎ ವಿಚಾರದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಜನರ ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದ್ದರು. ಈಗಲೂ ಮಮತಾ ಅವರ ನೇತೃತ್ವದಲ್ಲಿ ಟಿಎಂಸಿ ಪಕ್ಷವು ಸಿಎಎ ಜಾರಿಗೆ ವಿರೋಧ ವ್ಯಕ್ತಪಡಿಸಿದೆ. ಪಶ್ಚಿಮ ಬಂಗಾಳದಲ್ಲಿ ಕಳೆದ ಲೋಕಸಭಾ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಸಿಎಎ ಜಾರಿಗೆ ತರಲಾಗುತ್ತದೆ ಎಂಬ ಆಶ್ವಾಸನೆಯೂ ಕೂಡ ಬಿಜೆಪಿಯ ಪ್ರಮುಖ ಚುನಾವಣಾ ಅಸ್ತ್ರವಾಗಿತ್ತು ಎಂಬ ಮಾತುಗಳೂ ಕೇಳಿಬಂದಿದ್ದವು. ಶ್ರೀಲಂಕಾ ಮೊದಲಾದ ನೆರೆಯ ದೇಶಗಳಲ್ಲಿ ಮುಸ್ಲಿಮರು ಅಲ್ಪಸಂಖ್ಯಾತರು. ಆದರೆ ಸಿಎಎ ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಮುಸ್ಲಿಮರಿಲ್ಲ. ಇದು ಧಾರ್ಮಿಕ ತಾರತಮ್ಯ ಎಂಬುದು ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರಮುಖ ಅಂಶಗಳು

- 1955ರಲ್ಲಿ ಜಾರಿಗೆ ಬಂದ ಪೌರತ್ವ ಕಾಯ್ದೆಯು ಜನನ, ಸಂತತಿ, ನೋಂದಣಿ, ನ್ಯಾಚುರಲೈಜೇಷನ್ ಅಥವಾ ಭೂಪ್ರದೇಶದ ಸಂಯೋಜನೆಯಂತಹ ವಿವಿಧ ವಿಧಾನಗಳ ಮೂಲಕ ಭಾರತೀಯ ಪೌರತ್ವದ ಸ್ವಾಧೀನ, ನಿರ್ಣಯ ಮತ್ತು ಕೊನೆ ಮಾಡುವ ಫ್ರೇಮ್‌ವರ್ಕ್ ಒದಗಿಸುತ್ತದೆ.
- 2019ರಲ್ಲಿ ಅಂಗೀಕರಿಸಲ್ಪಟ್ಟ ಪೌರತ್ವ(ತಿದ್ದುಪಡಿ) ಕಾಯ್ದೆ ಧಾರ್ಮಿಕ ಕಿರುಕುಳವನ್ನು ಎದುರಿಸುತ್ತಿರುವ ನೆರೆಯ ದೇಶಗಳಲ್ಲಿನ ಆರು ಅಲ್ಪಸಂಖ್ಯಾತ ಸಮುದಾಯಗಳ ವಲಸಿಗರಿಗೆ ಭಾರತೀಯ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡುತ್ತದೆ.
- ಧಾರ್ಮಿಕ ಕಿರುಕುಳದ ಕಾರಣದಿಂದ 2014ರ ಡಿಸೆಂಬರ್ 31ರ ಮೊದಲು ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಿಂದ ಭಾರತಕ್ಕೆ ವಲಸೆ ಬಂದ ಹಿಂದೂ, ಸಿಖ್, ಜೈನ್, ಬೌದ್ಧ ಪಾರ್ಸಿ ಮತ್ತು ಕ್ರಿಶ್ಚಿಯನ್ನರಿಗೆ ಸಿಎಎ ಅನ್ವಯಿಸುತ್ತದೆ.
- ಸಿಎಎ ಮುಸ್ಲಿಮರು ಸೇರಿದಂತೆ ಯಾವುದೇ ಭಾರತೀಯ ನಾಗರಿಕರ ಮೇಲೆ ಪರಿಣಾಮ ಬೀರುವುದಿಲ್ಲ.
- ಸಿಎಎ ಹಿಂದೂ, ಸಿಖ್, ಜೈನ್, ಬೌದ್ಧ, ಪಾರ್ಸಿ ಮತ್ತು ಕ್ರಿಶ್ಚಿಯನ್ ವಿದೇಶಿಯರಿಗೆ ಭಾರತೀಯ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಲು ಕಾನೂನು ಹಕ್ಕನ್ನು ನೀಡುತ್ತದೆ. ಆರು ವರ್ಷಗಳ ರೆಸಿಡೆನ್ಸಿ ಅವಧಿಯ ನಂತರ ತ್ವರಿತ ನ್ಯಾಚುರಲೈಜೇಷನ್ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ.
- ಸಿಎಎ ಪ್ರತ್ಯೇಕವಾಗಿ ಮೂರು ನೆರೆಯ ದೇಶಗಳ ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯಗಳಿಗೆ ಮಾತ್ರವೇ ಅನ್ವಯಿಸುತ್ತದೆ.
- ಈ ಮೂರು ದೇಶಗಳನ್ನು ಹೊರತುಪಡಿಸಿ ಇತರ ದೇಶಗಳಲ್ಲಿ ಧಾರ್ಮಿಕ ಕಿರುಕುಳವನ್ನು ಎದುರಿಸುತ್ತಿರುವ ಅಲ್ಪಸಂಖ್ಯಾತರು ಭಾರತೀಯ ಪೌರತ್ವಕ್ಕಾಗಿ ಪ್ರಮಾಣಿತ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ಅವರಿಗೆ ಸಿಎಎ ಮೂಲಕ ಪ್ರಕ್ರಿಯೆ ಮಾಡಲಾಗುವುದಿಲ್ಲ.
- ಈ ಮೂರು ದೇಶಗಳಲ್ಲಿ ಇತರ ಧರ್ಮಗಳ ಅನುಯಾಯಿಗಳು ಕಿರುಕುಳವನ್ನು ಎದುರಿಸುತ್ತಿರುವ ಕಾರಣ, ಅವರಿಗೆ ನಮ್ಮ ರಾಷ್ಟ್ರದಲ್ಲಿ ಪೌರತ್ವ ನೀಡುವ ಸಲುವಾಗಿ ಸಿಎಎ ಅವಕಾಶ ನೀಡುತ್ತದೆ.
- ಭಾರತವು ಈ ಹಿಂದೆ ಶ್ರೀಲಂಕಾದ ತಮಿಳರು, ಬರ್ಮಾದ ವ್ಯಕ್ತಿಗಳು ಮತ್ತು 1970ರ ದಶಕದಲ್ಲಿ ದಂಗೆಯ ನಂತರ ಉಗಾಂಡಾದಿಂದ ಬಂದವರು ಸೇರಿದಂತೆ ವಿವಿಧ ಗುಂಪುಗಳಿಗೆ ಪೌರತ್ವ ಮತ್ತು ಪುನರ್ವಸತಿ ಕೊಡುಗೆಗಳನ್ನು ನೀಡಿದೆ.

ಸಿಎಎ ಎಂದರೇನು?

1955ರ ಭಾರತೀಯ ಪೌರತ್ವ ಕಾಯ್ದೆಗೆ 2019ರಲ್ಲಿ ಕೇಂದ್ರ ಸರ್ಕಾರ ತಿದ್ದುಪಡಿ ತಂದಿರುವುದನ್ನು ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ) ಎನ್ನಲಾಗಿದೆ. ಈ ಮೂಲಕ ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶಗಳಲ್ಲಿ ಧರ್ಮದ ಆಧಾರದಲ್ಲಿ ದಬ್ಬಾಳಿಕೆಗೆ ಒಳಗಾಗಿ ಭಾರತಕ್ಕೆ ನಿರಾಶ್ರಿತರಾಗಿ ಬರುವ ಹಿಂದೂ, ಸಿಖ್ಖರು, ಜೈನರು, ಬೌದ್ಧರು, ಪಾರ್ಸಿ ಹಾಗೂ ಕ್ರೈಸ್ತರಿಗೆ ಭಾರತೀಯ ಪೌರತ್ವ ನೀಡಲಾಗುತ್ತದೆ. ಅಲ್ಲದೆ, 1955ರ ಪೌರತ್ವ ಕಾಯ್ದೆ ಪ್ರಕಾರ ಭಾರತೀಯ ಸಂಜಾತರನ್ನು ಮದುವೆಯಾಗುವ ಮೂಲಕ ಭಾರತೀಯ ಪೌರತ್ವ ಪಡೆಯುವ ಅನ್ಯ ದೇಶದ ವ್ಯಕ್ತಿಗಳು ಭಾರತದ ನಿಯಮಗಳಿಗೆ ಬದ್ಧರಾಗಿ ನಡೆದುಕೊಳ್ಳದಿದ್ದರೆ ಅಂಥವರಿಗೆ ನೀಡಲಾಗುವ ಸಾಗರೋತ್ತರ ಅನಿವಾಸಿ ಭಾರತೀಯರ ಗುರುತಿನ ಕಾರ್ಡ್ ಅನ್ನು ರದ್ದುಗೊಳಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಬರಲಿದೆ.

'ನಂಬಿಕೆ ನಕ್ಷೆ'

ಮಾರ್ಪಾಟು ಮಾಡಲಾಗಿದೆ ಎಂದರು. ರಾಜಧಾನಿಯಲ್ಲಿರುವ ದಂಡದ ಸಮಸ್ಯೆಯನ್ನು ಬಗೆಹರಿಸಿದ್ದು, ಜುಲೈ ಅಂತ್ಯದವರೆಗೆ ತೆರಿಗೆ ಕಟ್ಟಿದವರಿಗೆ ದಂಡ ಹಾಗೂ ಬಡ್ಡಿ ಮನ್ನಾ ಮಾಡುವ ತೀರ್ಮಾನ ಮಾಡಿದ್ದೇವೆ. ದಂಡವನ್ನು ಶೇಕಡ 200 ರಿಂದ ಶೇಕಡ 100ಕ್ಕೆ ಇಳಿಸಿ, ಇದರ ಬಡ್ಡಿ ಮತ್ತು ಚಕ್ರ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ ಎಂದರು. ನಾಗರಿಕರಿಗೆ ಅನುಕೂಲ ಮಾಡಿಕೊಡಲು ಸರ್ಕಾರ "ನಂಬಿಕೆ ನಕ್ಷೆ" ಪಾರದರ್ಶಕ ಕಾರ್ಯಕ್ರಮ ರೂಪಿಸಿದೆ. ಅನುಮತಿ ನೀಡುವ ವಾಸ್ತುಶಿಲ್ಪಿಗಳು ಹಾಗೂ ಇಂಜಿನಿಯರ್‌ಗಳು ಸರ್ಕಾರದ ಪಟ್ಟಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಂಡಿರಬೇಕು. ಕಟ್ಟಡದ ನಕ್ಷೆ ನಿಯಮಾನುಸಾರವಾಗಿ ತಂತ್ರಜ್ಞಾನದ ಮೂಲಕ ಪರಿಶೀಲನೆ ಮಾಡಲಾಗುವುದು. ಆನ್‌ಲೈನ್‌ನಲ್ಲೇ ಶುಲ್ಕ ಪಡೆಯಲು ಅವಕಾಶ ಕಲ್ಪಿಸಲಾಗಿದೆ, ಕಳೆದ ವರ್ಷ 9 ಸಾವಿರ ಕಟ್ಟಡ ನಕ್ಷೆ ಅನುಮತಿ ನೀಡಲಾಗಿದೆ. ಈ ಬಾರಿ 10 ಸಾವಿರ ನಕ್ಷೆ ಅನುಮತಿ ನೀಡಲು ಎಂದು ಅಂದಾಜು ಮಾಡಲಾಗಿದೆ. ಪ್ರಸ್ತುತ ಇದ್ದ ಯುನಿಟ್ ವಿಸ್ತೀರ್ಣ ಮೌಲ್ಯ ಆಸ್ತಿ ತೆರಿಗೆ ಪದ್ಧತಿಯನ್ನು 2008ರಲ್ಲಿ ಜಾರಿಗೊಳಿಸಲಾಗಿತ್ತು. ಆಗ ಆಸ್ತಿಗಳನ್ನು 18 ವರ್ಗೀಕರಣ ಮಾಡಲಾಗಿತ್ತು. ಇದರಿಂದ ತೆರಿಗೆ ಪಾವತಿಯಲ್ಲಿ ಗೊಂದಲ ಸೃಷ್ಟಿಯಾಗಿತ್ತು.

ಮಾರ್ಗಸೂಚಿ ದರವನ್ನು ಬೆಂಗಳೂರಿನ ವ್ಯಾಪ್ತಿಯಲ್ಲಿ ಏಕರೂಪ ಆಸ್ತಿ ತೆರಿಗೆ ನಿಗದಿ ಮಾಡಲಾಗಿದೆ. ಈ ವ್ಯವಸ್ಥೆಯಿಂದ ತೆರಿಗೆ ಪದ್ಧತಿ ಸರಳೀಕರಣ ಮಾಡಲಾಗಿದೆ.

ಈಗ 6 ವರ್ಗೀಕರಣಗಳನ್ನು ಮಾಡಿದ್ದು, ವಸತಿ (ಸ್ವಂತ ಬಳಕೆ ಹಾಗೂ ಬಾಡಿಗೆದಾರರ ಬಳಕೆ), ವಾಣಿಜ್ಯ, ಕೈಗಾರಿಕಾ, ಸ್ಟಾರ್ ಹೋಟೇಲ್, ವಿನಾಯಿತಿ ನೀಡಲಾದ ಹಾಗೂ ಸಂಪೂರ್ಣ ಖಾಲಿ ಜಮೀನುಗಳು ಎಂಬ ವರ್ಗೀಕರಣ ಮಾಡಲಾಗಿದೆ. ಯಾರೆಲ್ಲಾ ಆಸ್ತಿ ತೆರಿಗೆ ಪಾವತಿಗೆ ಸ್ವಯಂ ಘೋಷಣೆ ಮಾಡಿಕೊಂಡಿಲ್ಲವೋ ಅವರಿಗೆ ಒಂದು ಅವಕಾಶ ನೀಡಲಾಗುತ್ತಿದೆ, ಈ ಮೂಲಕ ನಾಗರಿಕರು ತಮ್ಮ ಆಸ್ತಿಯನ್ನು ಸ್ವಯಂ ಘೋಷಣೆ ಮಾಡಿಕೊಂಡು ಆಸ್ತಿ ತೆರಿಗೆ ಸಂಖ್ಯೆ ಖಾತಾ ನೀಡಲಾಗುವುದು. ದಾಖಲೆ ಸರಿಯಾಗಿ ಇರುವವರಿಗೆ 'ಎ' ಖಾತಾ ನೀಡುತ್ತೇವೆ, ಕನ್ವರ್ಷನ್ ಮಾಡಿಕೊಳ್ಳದೇ, ಯೋಜನೆ ಇಲ್ಲದವರಿಗೆ 'ಬಿ' ಖಾತಾ ನೀಡಲಾಗುವುದು ಎಂದರು.

600 ಇಂದಿರಾ ಕ್ಯಾಂಟೀನ್ ಆರಂಭ

ಆರಂಭಿಸಲಾಗುತ್ತಿದೆ. ಬೆಂಗಳೂರಿನಲ್ಲಿ 188 ಹೊಸ ಇಂದಿರಾ ಕ್ಯಾಂಟೀನ್‌ಗಳ ಪೈಕಿ ಈಗಾಗಲೇ 40 ಪೂರ್ಣಗೊಂಡಿದ್ದು, ಉಳಿದವು ಪ್ರಗತಿಯಲ್ಲಿವೆ ಎಂದು ಸಿಎಂ ತಿಳಿಸಿದರು. ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಇಂದಿರಾ ಕ್ಯಾಂಟೀನ್ ಅಗತ್ಯವಿದೆ. ಈಗಾಗಲೇ ಒಂದು ಉದ್ಘಾಟನೆಗೊಂಡಿದ್ದು, ಇನ್ನೊಂದು ಇಂದಿರಾ ಕ್ಯಾಂಟೀನ್ ಶೀಘ್ರದಲ್ಲೇ ಬರಲಿದೆ. ಬಡವರಿಗೆ ಕಡಿಮೆ ದರದಲ್ಲಿ ಊಟ ಮತ್ತು ಉಪಹಾರ ನೀಡುವುದು ಇದರ ಉದ್ದೇಶವಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಆಹಾರದ ಮೆನು ಕೂಡ ಬದಲಾವಣೆ ಮಾಡಲಾಗಿದ್ದು, ಊಟದ ಹಾಲ್ ವ್ಯವಸ್ಥೆ ಮಾಡಲಾಗಿದೆ ಎಂದರು. ಬೆಂಗಳೂರಿನ ಪ್ರತಿ ವಾರ್ಡ್‌ಗಳಲ್ಲಿ ಹಾಗೂ ರಾಜ್ಯದ ಇತರ ಭಾಗಗಳಲ್ಲಿಯೂ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಗುವುದು. ಹಿಂದಿನ ಸರ್ಕಾರ ಊಟ ನೀಡದೆ ಕೆಲವನ್ನು ಮುಚ್ಚಲಾಗಿದೆ. ಬಡವರು ಹೊಟ್ಟೆ ತುಂಬ ಊಟ ಮಾಡಬೇಕು ಎಂಬ ಕಾರಣಕ್ಕೆ ನಾವು ಈ ಕಾರ್ಯಕ್ರಮವನ್ನು ಪುನರಾರಂಭಿಸಿದ್ದೇವೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಜಲಮೂಲಗಳನ್ನು ಕುಡಿಯುವ ನೀರಿಗೆ ಮಾತ್ರ ಬಳಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕಟ್ಟುನಿಟ್ಟಿನ ಸೂಚನೆ

ಮೈಸೂರು,ಮಾ.11(ಎಂಟಿವೈ)– ಬರದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟೆಚ್ಚರ ವಹಿಸುವುದರೊಂದಿಗೆ ಕುಡಿಯುವ ನೀರಿಗೆ ಮಾತ್ರ ಜಲಮೂಲಗಳನ್ನು ಬಳಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸೂಚನೆ ನೀಡಿದರು.



ಮೈಸೂರು ಜಿ.ಪಂ.ಸಭಾಂಗಣದಲ್ಲಿ ಬರ ಪರಿಹಾರ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಭೆ ನಡೆಸಿದರು.

ಜಿ.ಪಂ ಸಭಾಂಗಣದಲ್ಲಿ ಬರ ನಿರ್ವಹಣೆ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬರದ ಪರಿಸ್ಥಿತಿ ತೀವ್ರಗೊಳ್ಳುವ ಮುನ್ಸೂಚನೆ ಇದೆ. ಈಗಾಗಲೇ ರಾಜ್ಯ ಸರ್ಕಾರ ಬರಪೀಡಿತ ತಾಲೂಕುಗಳ ಘೋಷಣೆ ಮಾಡಿದ್ದು, ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಬರದಿಂದಾಗಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕಟ್ಟೆಚ್ಚರ ವಹಿಸಬೇಕು. ಜಲ ಮೂಲಗಳಿಂದ ಕುಡಿಯುವ ನೀರು ಸರಬರಾಜು ಮಾಡುವುದಕ್ಕೆ ಮಾತ್ರ ನೀರು ಬಳಸಬೇಕು. ಬೇರೆ ಉದ್ದೇಶಕ್ಕೆ ಜಲ ಮೂಲದಿಂದ ನೀರು ಬಳಸಬಾರದು. ಕುಡಿಯುವ ನೀರಿನ ಸಮಸ್ಯೆ ಕಂಡು ಬರುವ ಗ್ರಾಮ, ಬಡಾವಣೆಯನ್ನು ಗುರುತಿಸಬೇಕು. ನೀರಿನ ಸಮಸ್ಯೆ ಉಲ್ಬಣಗೊಳ್ಳುವ ಮುನ್ನವೇ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದರೆ ಕೂಡಲೆ ಸ್ಪಂದಿಸಬೇಕು. ಜಿಲ್ಲಾ ಹಾಗೂ ತಾಲೂಕು ಆಡಳಿತ ಬರದ ಪರಿಸ್ಥಿತಿ ಎದುರಿಸಲು ಸಿದ್ಧವಾಗಿರಬೇಕು ಎಂದು ಸಲಹೆ ನೀಡಿದರು.

ಬರದ ಹಿನ್ನೆಲೆಯಲ್ಲಿ ನೀರು ಪೂರೈಕೆಗೆ ಹೊಸದಾಗಿ ಕೊಳವೆ ಬಾವಿ ತೋಡಿಸುವುದಕ್ಕಿಂತ ಇರುವ ಕೊಳವೆ ಬಾವಿಗಳನ್ನು ದುರಸ್ತಿಪಡಿಸಿ ಮೋಟಾರ್, ಪಂಪ್ ಅಳವಡಿಸಿ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಬೇಕು. ಎಲ್ಲೆಡೆ ನೀರಿನ ಸಮಸ್ಯೆ ಕಂಡು ಬರುತ್ತಿದೆ. ಇಂತಹ ಸಂದರ್ಭದಲ್ಲಿ ಒಂದು ಹನಿ ನೀರು ಪೋಲಾಗದಂತೆ ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ. ನೀರಿನ ಬಳಕೆ ಕುರಿತಂತೆ ಜನರಿಗೆ ಮನವರಿಕೆ ಮಾಡಿಕೊಡಬೇಕು. ತುರ್ತು ಸಂದರ್ಭ ಹಾಗೂ ಅವಶ್ಯ ಬಿದ್ದರೆ ಖಾಸಗಿ ಬೋರ್‌ವೆಲ್‌ಗಳನ್ನು ಉಪಯೋಗಿಸಿಕೊಳ್ಳುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಡಾ.ರಾಜೇಂದ್ರ ಮಾತನಾಡಿ, ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಅಲ್ಲದೆ, ಹಿಂದೆ ಯಾವ ಯಾವ ಬಡಾವಣೆ ಹಾಗೂ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿತ್ತು ಎಂದು ಮಾಹಿತಿ ಕಲೆ ಹಾಕಿ, ಈ ಬಾರಿ ಸಮಸ್ಯೆ ಉಲ್ಬಣಿಸದಂತೆ ಕ್ರಮ ಕೈಗೊಳ್ಳಲು ಸಲಹೆ ನೀಡಲಾಗಿದೆ. ನದಿಪಾತ್ರದಲ್ಲಿ ಅಳವಡಿಸಿದ್ದ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಲಾಗಿದೆ. ಕುಡಿಯುವ ನೀರನ್ನು ಕೃಷಿಗೆ ಬಳಸದಂತೆ ಜಾಗೃತಿ ಮೂಡಿಸಲಾಗಿದೆ. ಅಗತ್ಯಬಿದ್ದರೆ ಹಾರಂಗಿ, ಹೇಮಾವತಿ ಜಲಾಶಯದಿಂದಲೂ ನೀರು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು.

ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರ ರಂಜಿತ್ ಮಾಹಿತಿ ನೀಡಿ, ಪ್ರಸ್ತುತ 2 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಇದ್ದು, ಖಾಸಗಿ ಬೋರ್‌ವೆಲ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ 134 ಗ್ರಾಮಗಳಲ್ಲಿ ನೀರಿನ ಅಭಾವ ಉಂಟಾಗುವ ಸಂಭವವಿದೆ. ಈ ಗ್ರಾಮಗಳಲ್ಲಿ 36 ಗ್ರಾಮಗಳಿಗೆ ಪ್ರತಿನಿತ್ಯ ನೀರು ಪೂರೈಸಲಾಗುತ್ತಿದೆ ಎಂದರು

ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಾ.ಪು. ಪೂರ್ಣಾನಂದ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಜಾನುವಾರುಗಳಿಗೆ ಇನ್ನು 34 ವಾರಗಳಿಗಾಗುವಷ್ಟು ಮೇವು ಲಭ್ಯವಿದ್ದು, ರೈತರಿಗೆ ಮೇವಿನ ಪೊಟ್ಟಣಗಳನ್ನೂ ಕೊಡಲಾಗುವುದು. ಈಗಾಗಲೇ 72,113 ಮೇವಿನ ಕಿಟ್‌ಗಳನ್ನು ನೀಡಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಗೋಶಾಲೆ ಹಾಗೂ ಮೇವಿನ ಬ್ಯಾಂಕ್ ತೆರೆಯುವ ಅವಶ್ಯಕತೆ ಇಲ್ಲ. ಆದರೆ ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದೆ. ಈಗಾಗಲೇ ಅಂತಾರಾಜ್ಯ ಮೇವು ಸಾಗಣೆ ನಿರ್ಬಂಧ ಜಾರಿಯಲ್ಲಿದೆ ಎಂದು ತಿಳಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಚಂದ್ರಶೇಖರ್ ಮಾಹಿತಿ ನೀಡಿ ಪೂರ್ವ ಮುಂಗಾರಿನಲ್ಲಿ ಹತ್ತಿ ಬೀಜಗಳ ಕೊರತೆ ಉಂಟಾಗಿದ್ದು, ಗುಣಮಟ್ಟ ಕಡಿಮೆ ಇದೆ ಸದ್ಯ ರೈತ ಸಂಪರ್ಕ ಕೇಂದ್ರಗಳಲ್ಲಿ 1.20ಲಕ್ಷ ಪಾಕೆಟ್ ಹತ್ತಿ ಬೀಜ ದೊರೆಯಲಿವೆ. ಈಗಾಗಲೇ ಬರ ಪರಿಹಾರದಡಿ ತಲಾ 2 ಸಾವಿರ ರೂಗಳಂತೆ ಜಿಲ್ಲೆಯ 88,620 ರೈತರಿಗೆ 15 ಕೋಟಿ 83 ಲಕ್ಷ ಪರಿಹಾರ ಖಾತೆಗಳಿಗೆ ಜಮೆಯಾಗಿದೆ ಎಂದು ವಿವರಿಸಿದರು.

ಸಭೆಯಲ್ಲಿ ಜಿ.ಪಂ.ಸಿಇಓ ಕೆ.ಎಂ.ಗಾಯತ್ರಿ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಮೈಸೂರಿನ ವಾಣಿಜ್ಯ ಮಳಿಗೆಗಳ ಫಲಕಗಳಲ್ಲೂ ಶೇ.60 ಕನ್ನಡವಿರಲಿ

ವಾಟಾಳ್ ನಾಗರಾಜ್ ಎಚ್ಚರಿಕೆ



ಕನ್ನಡ ನಾಮಫಲಕ ಜಾಗೃತಿ ಸಪ್ತಾಹ ಅಂಗವಾಗಿ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಮೈಸೂರಿನ ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ಜಾಗೃತಿ ಮೂಡಿಸಲಾಯಿತು.

ಮೈಸೂರು, ಮಾ.11(ಎಸ್‌ಬಿಡಿ)– ಕನ್ನಡ ನಾಮಫಲಕ ಜಾಗೃತಿ ಸಪ್ತಾಹ ಅಂಗವಾಗಿ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್, ಮೈಸೂರಿನ ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ಸಂಚರಿಸಿ ಪ್ರಧಾನವಾಗಿ ಶೇ.60ರಷ್ಟು ಕನ್ನಡದಲ್ಲಿರುವ ನಾಮಫಲಕಗಳನ್ನು ಅಳವಡಿಸುವಂತೆ ತಿಳಿಸಿದರು.

ನಗರದ ಹಾರ್ಡಿಂಜ್ ಸರ್ಕಲ್‌ನಿಂದ ಹೊರಟು ಚಾಮರಾಜ ವೃತ್ತ, ದೊಡ್ಡ ಗಡಿಯಾರ, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆಯಲ್ಲಿ ಸಂಚರಿಸಿ, ಪ್ರಧಾನವಾಗಿ ಕನ್ನಡ ಬಳಕೆ ಮಾಡಿರದ ಮಳಿಗೆಗಳ ಬಳಿ ತೆರಳಿ ಇನ್ನೊಂದು ವಾರದಲ್ಲಿ ಕಡ್ಡಾಯವಾಗಿ ಶೇ.60ರಷ್ಟು ಕನ್ನಡದಲ್ಲಿರುವ ನಾಮಫಲಕಗಳನ್ನು ಹಾಕಲೇಬೇಕು ಎಂದು ಗಡುವು ನೀಡಿದರು.

ಕರ್ನಾಟಕದಲ್ಲಿ ಜೀವನ ನಡೆಸುತ್ತಿರುವ ಎಲ್ಲರೂ ಕನ್ನಡ ಕಲಿಯುವುದು ಪ್ರಮುಖ ಕರ್ತವ್ಯ. ಕನ್ನಡಿಗರ ಔದಾರ್ಯವನ್ನು ದುರುಪಯೋಗಪಡಿಸಿಕೊಳ್ಳಬಾರದು. ಸಂಸ್ಥೆಗಳು, ಅಂಗಡಿ ಮುಂಗಟ್ಟುಗಳಲ್ಲಿ ಕನ್ನಡ ಪ್ರಧಾನವಾದ ನಾಮಫಲಕ ಅಳವಡಿಸುವಂತೆ ಕೇಳಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಷಾದನೀಯ. ಸಂಬಂಧಪಟ್ಟವರು ಸ್ವಯಂ ಪ್ರೇರಣೆಯಿಂದ ನಿಯಮಾನುಸಾರ ನಾಮಫಲಕ ಹಾಕಬೇಕು ಎಂದು ತಿಳಿಹೇಳಿದರು.

ಸಪ್ತಾಹ ಕಾರ್ಯಕ್ರಮದಲ್ಲಿ ಕರುನಾಡ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಸವರಾಜು, ಕನ್ನಡ ಚಳುವಳಿಗಾರ ಬಿ.ಎ.ಶಿವಶಂಕರ್, ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕರ್ನಾಟಕ ಪ್ರತಿಧ್ವನಿ ವೇದಿಕೆ ಜಿಲ್ಲಾಧ್ಯಕ್ಷ ಮಧುವನ ಚಂದು, ಆನಂದ್, ತಾಯೂರು ವಿಠಲ ಮೂರ್ತಿ, ಹನುಮಂತಯ್ಯ, ಪ್ರಭಾಕರ್ ಮತ್ತಿತರರು ಭಾಗವಹಿಸಿದ್ದರು.

ಗಂಭೀರವಾಗಿ ಪರಿಗಣಿಸಿಲ್ಲ: ಶೇ.60ರಷ್ಟು ಪ್ರಧಾನವಾಗಿ ಕನ್ನಡದಲ್ಲಿರುವ ನಾಮಫಲಕಗಳನ್ನು ಅಳವಡಿಸಬೇಕೆಂಬುದು ಹಲವು ವರ್ಷಗಳ ಆಗ್ರಹ. ಮಳಿಗೆಗಳು, ಕಂಪನಿಗಳು, ಖಾಸಗಿ ಶಾಲೆಗಳು ಸೇರಿದಂತೆ ಎಲ್ಲೆಡೆ ಈ ಮಾದರಿಯ ನಾಮಫಲಕಗಳನ್ನೇ ಹಾಕಬೇಕು. ನಗರಪಾಲಿಕೆ ಉದ್ದಿಮೆ ಪರವಾನಗಿ ನೀಡುವಾಗ ಸ್ಥಳ ಪರಿಶೀಲನೆ ಮಾಡಬೇಕು. ಕನ್ನಡ ನಾಮಫಲಕ ಪ್ರಧಾನವಾಗಿ ದೊಡ್ಡ ಅಕ್ಷರಗಳಲ್ಲಿ ಇಲ್ಲದಿದ್ದರೆ ಉದ್ದಿಮೆ ಪರವಾನಗಿ ರದ್ದು ಮಾಡಬೇಕು ಎಂದು ಹಲವು ವರ್ಷಗಳಿಂದ ಪ್ರತಿಭಟನೆ ನಡೆದಿವೆ. ಆದರೆ ಇದನ್ನು ಪಾಲಿಕೆಯಾಗಲೀ ಅಥವಾ ವ್ಯಾಪಾರಿಗಳಾಗಲೀ ಗಂಭೀರವಾಗಿ ಪರಿಗಣಿಸಿದಂತಿಲ್ಲ.



ಬೆಂಗಳೂರು ದುರ್ಗಾ ಫೌಂಡೇಶನ್ ವತಿಯಿಂದ 2024ರ ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿಯನ್ನು ಚಾಮುಂಡಿಬೆಟ್ಟದ ಎನ್.ಎಸ್. ಮಂಜುಳಾ (ಎಂ.ಡಿ.ಸೋಮಣ್ಣ ಅವರ ಪತ್ನಿ) ಅವರಿಗೆ ಪ್ರದಾನ ಮಾಡಲಾಯಿತು.

ಇತ್ತೀಚಿನ ದಿನಗಳಲ್ಲಿ ಹಿರಿಯರ ಅಲಕ್ಷಿಸಲಾಗುತ್ತಿದೆ

ಯುವ ಪೀಳಿಗೆಯ ಮನೋಧೋರಣೆಗೆ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ವಿಷಾದ



ಮೈಸೂರು, ಮಾ.11(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆ, ಹಿರಿಯರನ್ನು ಅಲಕ್ಷಿಸುತ್ತಿದ್ದಾರೆ ಎಂಬ ವಾತಾವರಣ ಸಮಾಜದಲ್ಲಿ ನಿರ್ಮಾಣವಾಗುತ್ತಿದೆ. ಈ ಮನಸ್ಥಿತಿ ಯುವಕರಲ್ಲಿ ಮುಂದುವರೆಯಬಾರದು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸಲಹೆ ನೀಡಿದರು.

ಮೈಸೂರಿನ ಕಾಳಿದಾಸ ರಸ್ತೆಯ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ವಾಸುದೇವ್ ಮಹಾರಾಜ್‌ರ 86ನೇ ಜಯಂತ್ಯುತ್ಸವ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಶ್ರೀ ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ ವಿತರಿಸಿ ಮಾತನಾಡಿದರು.

ತಂತ್ರಜ್ಞಾನ ಬೆಳೆದಂತೆ ಯುವಕರಲ್ಲಿ ಭಾರತೀಯ ಪರಂಪರೆ ಬಗ್ಗೆ ತಾತ್ಸಾರ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾರೆ. ಇದರ ಪರಿಣಾಮ ನೇರ ಸಮಾಜದ ಮೇಲೆ ಬೀಳುತ್ತಿದೆ ಯುವಕರು, ಮನೆಗಳಲ್ಲಿ ಹಿರಿಯರಿಗೆ ಗೌರವ ನೀಡುತ್ತಿಲ್ಲ. ಅವರ ಯೋಗಕ್ಷೇಮ ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಆರೋಪ ಇತ್ತೀಚೆಗೆ ಸಾಮಾನ್ಯವಾಗಿಬಿಟ್ಟಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ನಮ್ಮ ಹಿರಿಯರು ಭಾರತೀಯ ಪರಂಪರೆ ಉಳಿವಿಗೆ ಶ್ರಮಿಸಿ, ನಮ್ಮ ಪೀಳಿಗೆ ಪರಿಚಯಿಸಿದ್ದಾರೆ. ಈ ಸಾಲಿನಲ್ಲಿ ಶ್ರೀ ವಾಸುದೇವ ಮಹಾರಾಜ್ ಕೂಡ ಒಬ್ಬರು. ಪ್ರಸ್ತುತ ತಂದೆ–ತಾಯಿಯರನ್ನು ಅಲಕ್ಷಿಸುತ್ತಿರುವ ವೇಳೆಯಲ್ಲಿ ತಂದೆಯ ಹೆಸರಿನಲ್ಲಿ ಫೌಂಡೇಶನ್ ಸ್ಥಾಪಿಸಿ ಆ ಮೂಲಕ ಸಾಧಕರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ನಾನು 1982ರಿಂದಲೂ ಶ್ರೀ ವಾಸುದೇವ್ ಮಹಾರಾಜರ ಒಡನಾಡಿಯಾಗಿದ್ದು, ಅವರ ಆದರ್ಶಗಳಿಂದ ಪ್ರಭಾವಿತನಾಗಿದ್ದೇನೆ. ಅವರ ಪುತ್ಥಳಿಯನ್ನು ಮನೆಯ ಆವರಣದಲ್ಲಿ ಸ್ಥಾಪಿಸಿ ಈ ಮೂಲಕ ಸಮಾಜಕ್ಕೆ ಹಿರಿಯ ವ್ಯಂಗ್ಯ ಚಿತ್ರಕಾರ ಎಂ.ವಿ. ನಾಗೇಂದ್ರ ಬಾಬು ಒಳ್ಳೆಯ ಸಂದೇಶ ನೀಡುತ್ತಿದ್ದಾರೆ ಎಂದರು.

ಈ ವೇಳೆ ಹರಿ ಭಕ್ತ (ಗೀತಾ ಸಾಹಿತ್ಯ), ನಂದಿನಿ ಮೂರ್ತಿ (ಯೋಗ ಚಿಕಿತ್ಸೆ), ಚೆಲುವರಾಜು ಹೆಚ್.ಎಲ್.ಚಲುವರಾಜು (ವೈದ್ಯಕೀಯ ಸಾಹಿತ್ಯ) ಹಾಗೂ ಕೆ.ಬಿ. ಯೋಗ ಪ್ರಿಯ (ಶಿಕ್ಷಣ) ಅವರಿಗೆ ಶ್ರೀ ವಾಸುದೇವ್ ಮಹಾರಾಜ್ ಸದ್ಭಾವನಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ನಂತರ ಹಿರಿಯ ಸಾಹಿತಿ ಡಾ.ಕೆ.ಅನಂತರಾಮ ಅವರು 'ಜೀವನದಲ್ಲಿ ಆಧ್ಯಾತ್ಮಕತೆ' ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ವಿಪ್ರ ಮುಖಂಡ ಕೆರಘುರಾಂ ವಾಜಪೇಯಿ, ದತ್ತ ಕ್ರಿಯಾಯೋಗ ಶಿಕ್ಷಕ ಎಂ ಮೋಹನ್, ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನ ಸಿಇಓ ಕೆ.ಆರ್.ಯೋಗಾ ನರಸಿಂಹನ್, ದೇವಸ್ಥಾನದ ಅರ್ಚಕರಾದ ವೀರರಾಘವನ್ ಹಾಗೂ ಬಾಲಾಜಿ, ಸಂಸ್ಥೆಯ ಅಧ್ಯಕ್ಷ ಎಂ.ವಿ. ನಾಗೇಂದ್ರ ಬಾಬು, ಸಂಚಾಲಕ ಎನ್.ಅನಂತ ಉಪಸ್ಥಿತರಿದ್ದರು.

ಇಂದಿನಿಂದ ರಂಜಾನ್ ಉಪವಾಸ



ಮೈಸೂರಿನ ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಸೋಮವಾರ ಸಂಜೆ ಜಿಲ್ಲಾ ಮೂನ್ ಕಮಿಟಿ ಸಭೆ ನಡೆಯಿತು.

ಮೈಸೂರು,ಮಾ.11(ಪಿಎಂ)– ಮುಸ್ಲಿಮರ ಪವಿತ್ರ ಹಬ್ಬ ರಂಜಾನ್ ಮಾಸದ ಉಪವಾಸ ನಾಳೆಯಿಂದ (ಮಾ.12) ಆರಂಭವಾಗಲಿದೆ.

ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಸೋಮವಾರ ಸಂಜೆ ನಡೆದ ಜಿಲ್ಲಾ ಮೂನ್ ಕಮಿಟಿ (ಚಂದ್ರನ ದರ್ಶನ ಸಮಿತಿ) ಸಭೆ ಬಳಿಕ ರಂಜಾನ್ ಮಾಸದ ಉಪವಾಸವು ನಾಳೆಯಿಂದ ಆರಂಭವಾಗಲಿದೆ ಎಂದು ಘೋಷಣೆ ಮಾಡಲಾಯಿತು.


ಮೈಸೂರಿನ ಸರ್ ಖಾಝಿ ಹಜರತ್ ಮೌಲಾನಾ ಮಹಮ್ಮದ್ ಉಸ್ಮಾನ್ ಷರೀಫ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮೈಸೂರಿನ ಜಿಲ್ಲೆಯ ವಿವಿದೆಡೆ ಚಂದ್ರನ ದರ್ಶನಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲಾಯಿತಲ್ಲದೆ, ಮೈಸೂರು ನಗರವೂ ಸೇರಿದಂತೆ ಎಲ್ಲಾ ಸ್ಥಳಗಳಲ್ಲಿ ಚಂದ್ರನ ದರ್ಶನ ಆಗಿರುವುದನ್ನು ಖಾತ್ರಿಪಡಿಸಿಕೊಳ್ಳಲಾಯಿತು.

ನಂತರ ಸರ್ ಖಾಝಿ ಅವರು ಬೆಂಗಳೂರಿನ ಕೇಂದ್ರ ಚಂದ್ರ ದರ್ಶನ ಸಮಿತಿ ಸಭೆಯನ್ನು ಸಂಪರ್ಕಿಸಿದರು. ಬಳಿಕ ಚಂದ್ರನ ದರ್ಶನ, ಪವಿತ್ರ ರಂಜಾನ್ ತಿಂಗಳ ಪ್ರಾರಂಭ ಹಾಗೂ ಮಂಗಳವಾರದಿಂದ (ಮಾ.12) ಉಪವಾಸದ ಆರಂಭವನ್ನು ಘೋಷಣೆ ಮಾಡಿದರು. ನಂತರ ಘೋಷಣೆ ಸಂಬಂಧ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯವನ್ನು ಮೌಲಾನಾ ಝುಕಾ ಉಲ್ಲಾ ಅವರು ಮಂಡಿಸಿ, ಮುಸಲ್ಮಾನ ಬಾಂಧವರಿಗೆ ಶುಭಾಶಯ ಕೋರಿದರು.

ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಫಯಾಜ್ ಅಹ್ಮದ್ ಅಕ್ರಂ, ಮೌಲಾನಾ ಮುಫ್ತಿ ಸೈಯದ್ ತಾಜುದ್ದೀನ್ ಸಾಹೇಬ್, ಮೌಲಾನಾ ಇಬ್ರಾಹಿಂ ಸಾಹೇಬ್, ಮೌಲಾನಾ ಸೈಯದ್ ಶಾವಲಿ ಉಲ್ಲಾ, ನಗರ ಪಾಲಿಕೆ ಮಾಜಿ ಸದಸ್ಯ ಸುಹೇಲ್‌ಬೇಗ್, ಸಮಾಜ ಸೇವಕ ಮೊಹಮ್ಮದ್ ಮುಮ್ತಾಜ್ ಅಹಮ್ಮದ್, ಮುಖಂಡರಾದ ಜಮೀಲ್ ಅಹಮ್ಮದ್ ಅಶ್ರಫಿ, ಮಿರ್ಜಾ ಜಮ್ಶೀದ್‌ಬೇಗ್ ಅಶ್ರಫಿ, ಮಜೀದ್ ಖಾನ್, ಎಸ್.ಕೆ.ಮುದಾಸ್ಸಿರ್, ಮುಸ್ಲಿಂ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮಾಜಿ ನಿರ್ದೇಶಕ ಮೊಹಮ್ಮದ್ ಅಬ್ದುಸ್ ಸಲಾಂ, ವಕ್ಫ್ ಅಧಿಕಾರಿ ಮುಷ್ತಾಕ್ ಅಹಮ್ಮದ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಪರೂಪದ ರಾಜಕಾರಣಿ ದಿವಂಗತ ಆರ್.ಧ್ರುವನಾರಾಯಣ್





ನಂಜನಗೂಡು, ಮಾ.11– ಸರಳ, ಸಜ್ಜನಿಕೆ ರಾಜಕಾರಣಿಯಾಗಿ ಗುರುತಿಸಿಕೊಂಡಿದ್ದ ದಿ.ಆರ್.ಧ್ರುವನಾರಾಯಣ್ ತಮ್ಮ ಅಭಿವೃದ್ಧಿ ಕಾರ್ಯ ಹಾಗೂ ಜನರ ಸಂಕಷ್ಟಗಳಿಗೆ ನಗುಮುಖದಿಂದಲೇ ಸ್ಪಂದಿಸುವ ಗುಣಗಳಿಂದ ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಜನರ ಮನಸ್ಸನ್ನು ಗೆದ್ದಿದ್ದ ಅಪರೂಪದ ರಾಜಕಾರಣಿ.

ಸಾಮಾನ್ಯವಾಗಿ ಅಧಿಕಾರ ಇದ್ದಾಗ ಜನಾನುರಾಗಿ ಎನಿಸಿಕೊಂಡರೂ ಅಧಿಕಾರ ಹೋದ ನಂತರ ತೆರೆಮರೆಗೆ ಸರಿದು ಮೂಲೆ ಗುಂಪಾಗುವ ರಾಜಕಾರಣಿಗಳ ಮಧ್ಯೆ ದಿ.ಆರ್.ಧ್ರುವನಾರಾಯಣ್ ತಮ್ಮ ಸರಳ ವ್ಯಕ್ತಿತ್ವದಿಂದ ಎರಡು ಜಿಲ್ಲೆಗಳಲ್ಲಿ ಪಕ್ಷಾತೀತವಾಗಿ ಜನಮನ್ನಣೆ ಉಳಿಸಿಕೊಂಡು ಶತ್ರುಗಳೇ ಇಲ್ಲದ ಅಜಾತ ಶತ್ರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಅಲ್ಲದೇ ಕಾಯಕದಿಂದಲೇ ಧ್ರುವತಾರೆ ಎಂಬ ಹೆಸರು ಸಂಪಾದಿಸಿ ಜನರ ಮನಸ್ಸಿನಲ್ಲಿ ಅಜರಾಮರರಾಗಿ ಉಳಿದ ಅಪರೂಪದ ರಾಜಕಾರಣಿ. ಅವರು ಎಂದೂ ಯಾರ ವಿರುದ್ಧವೂ ಕೀಳು ಭಾಷೆ ಬಳಸಿದವರಲ್ಲ. ಬದಲಿಗೆ ಜನರ ಸಂಕಷ್ಟಗಳಿಗೆ ಕಿವಿಯಾಗಿದ್ದರು. ಧ್ರುವನಾರಾಯಣ್ ಅವರು ವರ್ಷದ ಹಿಂದೆ ಅಕಾಲಿಕವಾಗಿ ನಮ್ಮಿಂದ ದೂರವಾಗಿದ್ದರಿಂದ ಎರಡೂ ಜಿಲ್ಲೆಗಳ ಅವರ ಅಪಾರ ಅಭಿಮಾನಿಗಳು ಮತ್ತು ಕಾರ್ಯಕರ್ತರು ನಮ್ಮ ಸಂಕಷ್ಟ ಕೇಳುವ ಮತ್ತೋರ್ವ ರಾಜಕಾರಣಿ ಇಲ್ಲ ಎಂಬ ಕೊರಗಿನೊಂದಿಗೆ ತಮ್ಮ ರಾಜಕೀಯ ಭವಿಷ್ಯ ಕಾಣದೆ ಅಲೆಯುವಂತಾಗಿದೆ. ಪ್ರಸ್ತುತ ಅವರ ಸ್ಥಾನವನ್ನು ಇಂದಿಗೂ ಯಾರೂ ತುಂಬಲು ಸಾಧ್ಯವಾಗಿಲ್ಲ. ಈ ನೋವು ಎಲ್ಲಾ ಕಾರ್ಯಕರ್ತರಲ್ಲಿ ಇನ್ನೂ ಕಾಡುತ್ತಿರುವುದು ದುರಂತವೇ ಸರಿ.

ಸಂತೆ ಮರಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ಕೇವಲ 1 ಮತದಿಂದ ಜಯ ಸಾಧಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಮತದ ಮಹತ್ವವನ್ನು ಲೋಕಕ್ಕೆ ಸಾರಿದ ಕೀರ್ತಿ ಧ್ರುವನಾರಾಯಣ್ ಅವರಿಗೆ ಸಲ್ಲುತ್ತದೆ. ತಮ್ಮನ್ನು ಗೆಲ್ಲಿಸಿದ ಜನತೆಯ ಕುಡಿಯುವ ನೀರಿನ ಬವಣೆ ನೀಗಿಸಲು ರಾಜ್ಯದಲ್ಲೇ ಪ್ರಥಮ ಬಾರಿಗೆ 53 ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಜಾರಿಗೆ ಆಧುನಿಕ ಭಗೀರಥ ಧ್ರುವನಾರಾಯಣ್.

ಚಾಮರಾಜನಗರಕ್ಕಿರುವ ಅತ್ಯಂತ ಹಿಂದುಳಿದ ಜಿಲ್ಲೆ ಎಂಬ ಅಪಖ್ಯಾತಿಯನ್ನು ಅಳಿಸಿ ಹಾಕಲು ಸಂಸದರಾಗಿ ಕೈಗಾರಿಕಾ ಕೇಂದ್ರ, ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಕೇಂದ್ರಿಯ ವಿದ್ಯಾಲಯ ತಂದ ಕೀರ್ತಿ ಧ್ರುವನಾರಾಯಣ್ ಅವರಿಗೆ ಸಲ್ಲುತ್ತದೆ. ಜನಸಾಮಾನ್ಯರ ಬವಣೆಗಳ ಕುರಿತು ಸಂಸತ್‌ನಲ್ಲಿ ಅತೀ ಹೆಚ್ಚು ಪ್ರಶ್ನೆ ಕೇಳುವ ಮೂಲಕ ಅವುಗಳ ನಿವಾರಣೆಗೆ ಶ್ರಮಿಸಿದರು. ಸ್ವಪಕ್ಷೀಯರಿಂದ ಹೊಗಳಿಸಿಕೊಳ್ಳುವುದು ಸಾಮಾನ್ಯ. ಆದರೆ ವಿರೋಧ ಪಕ್ಷದಲ್ಲಿದ್ದುಕೊಂಡು ಆಡಳಿತ ಪಕ್ಷದವರಿಂದ ತಮ್ಮ ಅಭಿವೃದ್ಧಿಗಳಿಂದ ಹೊಗಳಿಸಿಕೊಂಡ ಅವರು ಸ್ವಾಭಿಮಾನಿ, ಪ್ರಾಮಾಣಿಕ, ಅನುಭವಿ ರಾಜಕಾರಣಿ ಎಂದೇ ಪ್ರಸಿದ್ಧಿಯಾಗಿರುವ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಂದ ರಾಜಕೀಯದ ಎಲ್ಲಾ ಪಟ್ಟುಗಳನ್ನು ಕಲಿತು ಪ್ರಸಾದರ ಬಾಯಲ್ಲೇ ತಮ್ಮ ಉತ್ತರಾಧಿಕಾರಿ ಎಂದು ಕರೆಸಿಕೊಂಡ ಏಕೈಕ ರಾಜಕಾರಣಿ ಧ್ರುವನಾರಾಯಣ್.

ಕೊರೊನಾ ವೇಳೆ ಕಾಂಗ್ರೆಸ್ ಹಮ್ಮಿಕೊಂಡಿದ್ದ ಆರೋಗ್ಯ ಹಸ್ತ ಮತ್ತು ಆಹಾರ ಕಿಟ್ ವಿತರಣೆ ಕಾರ್ಯಕ್ರಮದ ನೇತೃತ್ವ ವಹಿಸಿಕೊಂಡು ತಮ್ಮ ಆರೋಗ್ಯ ಲೆಕ್ಕಿಸದೇ ಸಂತ್ರಸ್ಥರಿಗೆ ನೆರವು ನೀಡಿದ ಧ್ರುವನಾರಾಯಣ್ ಅವರು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ 9 ಜಿಲ್ಲೆಗಳ ಸಂಘಟನೆ, ಚುನಾವಣೆ ಹೊಣೆ ಹೊತ್ತು ಪಕ್ಷದ ಕಟ್ಟಾಳಿನಂತೆ ಕಾರ್ಯ ನಿರ್ವಹಿಸಿದರು.

ತಂದೆ ಹಾದಿಯಲ್ಲೇ ಮಗ: 2 ಜಿಲ್ಲೆಯ ಕಾರ್ಯಕರ್ತರು, ಅಭಿಮಾನಿಗಳು ಕೂಡ ದರ್ಶನ್ ಅವರಲ್ಲಿ ಆರ್.ಧ್ರುವನಾರಾಯಣ್ ಅವರನ್ನು ಕಾಣುವಂತಹ ಹಂಬಲ ಹೊತ್ತಿದ್ದಾರೆ ಶಾಸಕ ದರ್ಶನ್ ಧ್ರುವನಾರಾಯಣ್ ಅವರು ತಮ್ಮ ತಂದೆಯ ಅಭಿಮಾನಿಗಳ ಸಂಕಷ್ಟಕ್ಕೆ ಸ್ಪಂದಿಸಿ ಅವರ ಬೆಂಬಲಕ್ಕೆ ನಿಲ್ಲುವುದೂ ಕೂಡ ತಮ್ಮ ಜವಾಬ್ದಾರಿ ಎಂದು ಅರಿತುಕೊಂಡಿದ್ದು, 2 ಜಿಲ್ಲೆಯಲ್ಲಿ ಪ್ರವಾಸ ಮಾಡುವ ಮೂಲಕ ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ತಂದೆ ಹಾದಿಯಲ್ಲೇ ಮುನ್ನಡೆಯುತ್ತಿದ್ದಾರೆ.

ಮೈಸೂರು ಮಿತ್ರ

ನಾಟಕ, ನೃತ್ಯ, ಸಂಗೀತ ಸವಿಗಾನದೊಂದಿಗೆ ಬಹುರೂಪಿಗೆ ತೆರೆ



ಕಿಂದರಿಜೋಗಿ ವೇದಿಕೆಯಲ್ಲಿ 'ಕರಗ ಕೋಲಾಟ' ಜಾನಪದ ನೃತ್ಯ ಪ್ರದರ್ಶನ

ಮನರಂಜನೆ ರಸದೌತಣದೊಂದಿಗೆ ಪಾಕ ಪ್ರಿಯರನ್ನು ತಣಿಸಿದ ಉತ್ಸವ



ರಂಗಸಂಗೀತ ನಡೆಸಿಕೊಟ್ಟ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು



ಕಿರುರಂಗಮಂದಿರದಲ್ಲಿ ಪ್ರದರ್ಶನಗೊಂಡ 'ಪಾರ್ಶ್ವ ಸಂಗೀತ' ನಾಟಕದ ದೃಶ್ಯ

ಮೈಸೂರು, ಮಾ.11(ಎಂಕೆ)– ಜಾನಪದ ಕಲಾ ವೈಭವ... ಸುಪ್ರಸಿದ್ಧ ನಾಟಕಗಳ ಹೂರಣ... ಸುಶ್ರಾವ್ಯ ಸಂಗೀತ ಸವಿಗಾನ ಲಹರಿಯೊಂದಿಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಯಶಸ್ವಿಯಾಗಿ ತೆರೆಕಂಡಿತು.

ಮೈಸೂರು ರಂಗಾಯಣದಲ್ಲಿ ಕಳೆದ 6 ದಿನಗಳಿಂದ ರಂಗಾಸಕ್ತರಿಗೆ ಮನರಂಜನೆಯ ರಸದೌತಣ, ಸಾಮಾಜಿಕ ಕಳಕಳಿ, ಬಹುತ್ವದ ಭಾವನೆ ಮೂಡಿಸುವ ಮೂಲಕ ಉರಿ ಬಿಸಿಲ ಬೇಸಿಗೆಯಲ್ಲೂ ಪಾಕ ಪ್ರಿಯರ ಮನವನ್ನೂ ತಣಿಸಿದ 24ನೇ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ತೆರೆಬಿತ್ತು.

ಕಡೆ ದಿನವಾದ ಸೋಮವಾರ ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು 'ಎಳೆಕೊರಳು ಉಳಿದಾವೆ ಕೇಳಿ' ಶೀರ್ಷಿಕೆಯಲ್ಲಿ ನಡೆಸಿ ಕೊಟ್ಟ ರಂಗಸಂಗೀತ, ಬಹುರೂಪಿಯ ಯಶಸ್ಸಿನ ಸಾರ್ಥಕತೆಯನ್ನು ಪ್ರತಿಬಿಂಬಿಸಿತು. ಹಿರಿಯ ಕಲಾವಿದ ಚಂದ್ರಶೇಖರಾಚಾರ್ ಹೆಗ್ಗೋಠಾರ ಅವರ ಮಾರ್ಗದರ್ಶನ ಹಾಗೂ ಕೃಷ್ಣ ಚೈತನ್ಯ ಸಾಂಗತ್ಯದಲ್ಲಿ ಹತ್ತು ಹಲವು ರಂಗಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ರಂಗಾಯಣ ಆವರಣದಲ್ಲಿ ಸಂಗೀತ ಸಂಚಲನ ಸೃಷ್ಟಿಸಿದರು.

'ಗಜಾನನ' ಸ್ಮರಣೆಯೊಂದಿಗೆ ಆರಂಭಿಸಿ 'ಇಡೇ ತೊಟ್ಟಿಲಿಲ್ಲ', 'ಸಂಗ್ಯಾ–ಬಾಳ್ಯ', 'ದೇವಿ ಭುವನ ಮನೋಹರೆ', 'ಬಾರಮ್ಮ ಬಾ ಸುಂದರಿ', 'ರತಿ ಸುಖ ಸಾರೇ', 'ಎನಿತು ದೂರಕೆ' ಸೇರಿದಂತೆ ಹಲವು ಹಾಡು ಗಳನ್ನು ಹಾಡಿದ 18ಕ್ಕೂ ಹೆಚ್ಚು ವಿದ್ಯಾರ್ಥಿ ಗಳು ನೆರೆದಿದ್ದವರ ಮನಗೆದ್ದರು.

ಜಾನಪದ ಕಲಾ ವೈಭವ: ನಂತರ ಕಿಂದರಿಜೋಗಿ ವೇದಿಕೆಯಲ್ಲಿ ಜಾನಪದ ಕಲಾ ವೈಭವ ಮೇಳೈಸಿತು. ಉಡುಪಿ ಉದ್ಯಾವರದ ಪುನೀತ್ ಮತ್ತು ತಂಡ 'ಕರಗ ಕೋಲಾಟ' ಸಾಂಪ್ರದಾಯಿಕ ನೃತ್ಯ ಅಪಾರ ಮೆಚ್ಚುಗೆ ಪಡೆಯಿತು. ನಾದಸ್ವರಕ್ಕೆ ಅನುಗುಣವಾಗಿ ತಲೆಯಮೇಲೆ ಕಳಸಹೊತ್ತು ಕೋಲಾಟ ಪ್ರದರ್ಶನ ನೀಡಿದ ಕಲಾವಿದರು ಶಿಳ್ಳೆ–ಚಪ್ಪಾಳೆ ಸುರಿಮಳೆ ಪಡೆದರು. ಹಾಗೆಯೇ ಸುಳ್ಯ ಬಂಗ್ಲೆ ಗುಡ್ಡೆಯ ಸುಗಿಪು ಜಾನಪದ ಕಲಾತಂಡದ 'ಕಂಗೀಲು' ನೃತ್ಯ ಸುಗ್ಗಿಯ ಸಂಭ್ರಮ ತೆರೆದಿಟ್ಟಿತು. ತುಳುನಾಡಿನ ಸಾಂಸ್ಕೃತಿಕ ನೃತ್ಯಗಳಲ್ಲಿ ಒಂದಾದ ಕಂಗೀಲು ನೃತ್ಯ ಕಿಕ್ಕಿರಿದು ನೆರೆದಿದ್ದ ಜಾನಪದ ಪ್ರಿಯರ ಮನ ಸೆಳೆಯಿತು. ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಸಂಚಾಲಕ ಪ್ರೊ.ಹೆಚ್.ಎಸ್.ಉಮೇಶ್, ಜಾನಪದ ವಿಭಾಗದ ಸಂಚಾಲಕಿ ಗೀತಾ ಮೋಂಟಡ್ಕ ಯುವ ಕಲಾವಿದೆ ಭಾಗ್ಯ ಉಪಸ್ಥಿತರಿದ್ದರು.

ಸುಪ್ರಸಿದ್ಧ ನಾಟಕಗಳ ಹೂರಣ: 70ರ ದಶಕದಿಂದ ಇಂದಿನವರೆಗಿನ ಚಲನಚಿತ್ರ ಗೀತೆಗಳ ಗೀಳು ಹಚ್ಚಿಕೊಳ್ಳುವವನ ಕುಟುಂಬ ದಲ್ಲಾಗುವ ಹಾಸ್ಯ, ಸರಸ–ವಿರಸಗಳ ರಸಘಳಿಗೆಗಳೊಂದಿಗೆ ಕಾರ್ಪೋರೇಟ್ ಸಮೂಹ ವಿರುದ್ಧ ಮೂಲ ನಿವಾಸಿಗಳ ಹೋರಾಟ, ಮಹಿಳೆಯ ಮೌನ ಹಾಗೂ ಏಕಲವ್ಯ ಸಾಹಸಗಾಥೆಯನ್ನು ತಿಳಿಸುವ ಸುಪ್ರಸಿದ್ಧ ನಾಟಕಗಳು ಪ್ರದರ್ಶನಗೊಂಡವು.

ಕಿರುರಂಗಮಂದಿರದಲ್ಲಿ ಪ್ರಶಾಂತ್ ಹಿರೇಮಠ್ ನಿರ್ದೇಶನ, ಸಂಗೀತ ಮತ್ತು ಪರಿಕಲ್ಪನೆಯಲ್ಲಿ ಮೈಸೂರಿನ ರಂಗವಲ್ಲಿ ತಂಡದ ಕಲಾವಿದರ ಅಭಿನಯ ಪ್ರಶಂಸೆ ಪಡೆಯಿತು. ಸಿನಿಮಾ ಗೀತೆಗಳಿಗಾಗಿ ಮನೆಯವರೊಡನೆ ಜಗಳವಾಡುತ್ತಾ ಓದೆಂದರೆ ಸಂಕಟಪಡುವ ಕುಟುಂಬದಲ್ಲಿ ಎದುರಾಗುವ ಸರಸ–ವಿರಸದ ಜೊತೆಗೆ ಖ್ಯಾತ ಹಾಡುಗಾರರನ್ನು ಸ್ಮರಿಸುವ 'ಪಾರ್ಶ್ವ ಸಂಗೀತ' ಕನ್ನಡ ನಾಟಕ ಮನರಂಜನೆಯ ರಸದೌತಣ ನೀಡಿತು.

ಹಾಗೆಯೇ ಭೂಮಿಗೀತ ವೇದಿಕೆಯಲ್ಲಿ ಕಾರ್ಪೊರೇಟ್ ಸಮೂಹ ವಿರುದ್ಧ ಮೂಲ ನಿವಾಸಿಗಳ ಹೋರಾಟದ ಕತೆಯುಳ್ಳ ಸಂಭಾಷಣೆ ರಹಿತ 'ಅಬೊರಿಜಿನಲ್ ಕ್ರೈ' ನಾಟಕ ಪ್ರದರ್ಶನ ಪ್ರದರ್ಶನಗೊಂಡರೆ, ಕಲಾಮಂದಿರದಲ್ಲಿ ಮಹಿಳೆಗೆ ಸಾರ್ವಜನಿಕವಾಗಿ ಆದ ಮಾನಹಾನಿಯನ್ನು ಪ್ರತಿರೋಧಿಸುವ ಶಕ್ತಿ ಇದ್ದರೂ ಪರಿಸ್ಥಿತಿಯ ಕೈಗೊಂಬೆಯಾಗಿ ಮೌನಿಯಾದಾಗ ಎದುರಾಗುವ ಸನ್ನಿವೇಶಗಳನ್ನು ನಿಭಾಯಿಸುವ ರೀತಿಯ ಕಥಾವಸ್ತುವುಳ್ಳ 'ಕಥೆ ಎಡ್ಡೆಂಡು' ತುಳು ನಾಟಕ ಪ್ರದರ್ಶನಗೊಂಡಿತು.

ಏಕಲವ್ಯನ ಸಾಹಸಗಾಥೆ: ರಾಷ್ಟ್ರಕವಿ ಕುವೆಂಪು ರಚನೆ, ದಿನೇಶ್ ಚಮ್ಮಾಳಿಗೆ ನಿರ್ದೇಶನ, ಮೈಸೂರಿನ ನಾಲ್ವಡಿ ಸೋಶಿಯಲ್, ಕಲ್ಚರಲ್ ಎಜುಕೇಷನಲ್ ಟ್ರಸ್ಟ್‌ನ ಕಲಾವಿದರ ಅಭಿನಯದಲ್ಲಿ ಏಕಲವ್ಯನ ಸಾಹಸಗಾಥೆಯ 'ಬೆರಳ್‌ಗೆ ಕೊರಳ್' ನಾಟಕ ಅಪಾರ ಜನಮನ್ನಣೆ ಪಡೆಯಿತು. ಮಹಾಭಾರತ ಕಾವ್ಯದಲ್ಲಿ ದ್ರೋಣರ ಶಿಷ್ಯನಾಗಲು ತಿರಸ್ಕೃತನಾದರೂ ದ್ರೋಣರ ಪ್ರತಿಮೆ ಎದುರು ಗುರುಸೇವೆ ಸಲ್ಲಿಸುವ ಅಪ್ರತಿಮ ಬಿಲ್ಲುಗಾರನಾಗಿ ಬೆಳೆಯುವ ಏಕಲವ್ಯನ ತ್ಯಾಗ, ಶೌರ್ಯ, ವಿನಯ ಮತ್ತು ಗುರುಭಕ್ತಿಯನ್ನು ಪ್ರಸ್ತುತಪಡಿಸಲಾಯಿತು.

ಅಬ್ಬರದ ಜನಸಮೂಹವಿಲ್ಲದಿದ್ದರೂ ಮೆಚ್ಚುಗೆ ಪಡೆದ ಬಹುರೂಪಿ...!

ಕಳೆದ ವರ್ಷದ ಬಹುರೂಪಿ ರಾಷ್ಟ್ರೀಯ ರಂಗೋತ್ಸವಕ್ಕೆ ಹೋಲಿಕೆ ಮಾಡಿದರೆ ಅಬ್ಬರದ ಜನ ಸಮೂಹವಿಲ್ಲದಿದ್ದರೂ ನಾಟಕಗಳ ಆಯ್ಕೆ, ಜಾನಪದ ಕಲಾ ತಂಡಗಳ ನೃತ್ಯ ಪ್ರದರ್ಶನ, ರಾಷ್ಟ್ರೀಯ ವಿಚಾರ ಸಂಕಿರಣದ ಪರಿಕಲ್ಪನೆ, ಎಲ್ಲರನ್ನೊಳಗೊಂಡ ಶೀರ್ಷಿಕೆಯಡಿ ಈ ವರ್ಷದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಯಶಸ್ವಿಯಾಯಿತು. ಲೋಕಸಭಾ ಚುನಾವಣೆ, ಶಾಲಾ ಪರೀಕ್ಷೆ, ನಿರ್ದೇಶಕರ ಅನುಪಸ್ಥಿತಿಯಲ್ಲಿ 6 ದಿನಗಳ ಕಾಲ ನಡೆದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಆಕರ್ಷಣೆಯಿಂದ ಕೂಡಿತ್ತು. ಕರಕುಶಲ ವಸ್ತುಗಳ ಮೇಳ, ಕಲಾವಿದರ ಕೈಚಳಕದ ಕಾಯಕ ಕುಟೀರ, ವಿವಿಧ ಬಗೆ ಖಾದ್ಯಗಳ ಆಹಾರ ಮೇಳದ ಅಚ್ಚುಕಟ್ಟಿನ ವ್ಯವಸ್ಥೆ ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ವ್ಯವಸ್ಥಿತವಾಗಿತ್ತು. ವನರಂಗ, ಭೂಮಿಗೀತ, ಕಿರುರಂಗಮಂದಿರದಲ್ಲಿ ಪ್ರದರ್ಶನಗೊಂಡ ನಾಟಕಗಳು ಬಹುತೇಕ ಭರ್ತಿ ಪ್ರದರ್ಶನಗೊಂಡವು. ಯಾವುದೇ ವಿವಾದಗಳಿಲ್ಲದೆ 'ಇವ ನಮ್ಮವ... ಇವ ನಮ್ಮವ...' ಪರಿಕಲ್ಪನೆಯ ಬಹುರೂಪಿ ರಂಗಾಸಕ್ತರ ಮೆಚ್ಚುಗೆ ಪಡೆಯಿತು.

ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಿ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಸೂಚನೆ



ಮೈಸೂರು,ಮಾ.11(ಆರ್‌ಕೆ)–ಮಕ್ಕಳ ಮೇಲೆ ಯಾವುದೇ ರೀತಿಯ ದೌರ್ಜನ್ಯ ನಡೆದರೂ ತಡಮಾಡದೇ ಎಫ್‌ಐಆರ್ ದಾಖಲಿಸಿ ಆರೋಪಿಗಳ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಅವರು, ಪೊಲೀಸ್ ಹಾಗೂ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪೊಲೀಸ್ ಇಲಾಖೆ ಜಿಲ್ಲಾ ಪಂಚಾಯ್ತಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ರಕ್ಷಣಾ ನಿರ್ದೇಶನಾಲಯಗಳ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಬಾಲನ್ಯಾಯ ಕಾಯ್ದೆ, ಮಿಷನ್ ವಾತ್ಸಲ್ಯ, ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ಭಿಕ್ಷಾಟನೆ, ಲೈಂಗಿಕ ದೌರ್ಜನ್ಯ, ಮಕ್ಕಳ ಮೇಲೆ ಹಲ್ಲೆಯಂತಹ ಪ್ರಕರಣಗಳು ಸಾಂವಿಧಾನಿಕ ಮಕ್ಕಳ ಹಕ್ಕುಗಳ ಸ್ಪಷ್ಟವಾಗುತ್ತದೆ. ಇಂತಹ ಯಾವುದೇ ಬಗೆಯ ಮಕ್ಕಳ ಮೇಲಿನ ದೌರ್ಜನ್ಯ ನಡೆದ ತಕ್ಷಣವೇ ಪೊಲೀಸರು ಹಾಗೂ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಎಫ್‌ಐಆರ್ ದಾಖಲಿಸಿ ಆರೋಪಿಗಳ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಬೇಕು, ಪ್ರಕರಣ ದಾಖಲಿಸಲು ವ್ಯಾಪ್ತಿಯ ಪರಿಮಿತಿ ಏನಿಲ್ಲ, ನಿಮ್ಮ ಗಮನಕ್ಕೆ ಬಂದ ತಕ್ಷಣ ವಿಚಾರಣೆ ನಡೆಸಿ ಎಫ್‌ಐಆರ್ ದಾಖಲಿಸಿದ ಬಳಿಕ ಕೃತ್ಯ ನಡೆದ ಸ್ಥಳದ ಸುಪರ್ದಿಗೆ ಬರುವ ಪೊಲೀಸ್ ಠಾಣೆಗೆ ಪ್ರಕರಣದ ತನಿಖೆಯನ್ನು ವರ್ಗಾಯಿಸಬೇಕೆಂಬ ನಿಯಮವಿದೆ ಎಂದು ದಿನೇಶ್ ತಿಳಿಸಿದರು.

ಮಕ್ಕಳೊಂದಿಗೆ ಸಂವೇದನಾಶೀಲತೆಯಿಂದ ವರ್ತಿಸಬೇಕು. ಆ ಸೂಕ್ಷ್ಮತೆ ಅರಿತುಕೊಳ್ಳದಿದ್ದರೆ ಮಕ್ಕಳ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಹಲವು ಕಾಯ್ದೆಗಳಿವೆ. ಸುಪ್ರೀಂಕೋರ್ಟ್ ತೀರ್ಪುಗಳಿಗನ್ವಯ ಪ್ರಕರಣ ದಾಖಲಿಸಿ ಆರೋಪಿಗಳ ವಿರುದ್ಧ ಕಾನೂನು ರೀತಿಯ ಕ್ರಮವಹಿಸಲು ಅವಕಾಶವಿದ್ದಾಗ್ಯೂ ಸಹ ನಾವು ಕೆಲವೊಮ್ಮೆ ಎಡವುತ್ತೇವೆ ಎಂದು ನುಡಿದರು.

ಇತ್ತೀಚೆಗೆ ಪಿರಿಯಾಪಟ್ಟಣ ತಾಲೂಕಿನ ದೇವಸ್ಥಾನವೊಂದರಲ್ಲಿ ನಡೆದಿದ್ದ ಬಾಲ್ಯ ವಿವಾಹ ಸಂಬಂಧ ಪ್ರಕರಣ ದಾಖಲಿಸಲು ಪೊಲೀಸರು, ಅದು ನಮ್ಮ ವ್ಯಾಪ್ತಿಯದಲ್ಲ ಎಂಬ ಕಾರಣಕ್ಕೆ 15 ರಿಂದ 20 ದಿನಗಳವರೆಗೆ ಎಫ್‌ಐಆರ್ ದಾಖಲಿಸಿರಲಿಲ್ಲ. ಅಧಿಕಾರಿಗಳು ಮಕ್ಕಳಿಗೆ ಸಂಬಂಧಿಸಿದ ಯಾವುದೇ ಪ್ರಕರಣವಿರಲಿ ಮೊದಲು ಎಫ್‌ಐಆರ್ ದಾಖಲಿಸಬೇಕು ತಪ್ಪಿದ್ದಲ್ಲಿ ಐಪಿಸಿ ಸೆಕ್ಷನ್ 166ಎ ಪ್ರಕಾರ ಅಂತಹ ಅಧಿಕಾರಿ ವಿರುದ್ಧವೂ ಪ್ರಕರಣ ದಾಖಲಿಸಬಹುದಾಗಿದೆ ಎಂದು ದಿನೇಶ್ ತಿಳಿಸಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಸ್.ಮಂಜು, ಅಡಿಷನಲ್ ಎಸ್ಪಿ ಡಾ.ಬಿ.ಎಸ್.ನಂದಿನಿ, ಡಿಸಿಪಿ ಎಸ್.ಜಾಹ್ನವಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ಈ ಧನಂಜಯ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

ಮೈಸೂರು ನಾರಾಯಣ ಆಸ್ಪತ್ರೆಯಲ್ಲಿ ಲೇಸರ್ ಸರ್ಜರಿ ಚಿಕಿತ್ಸಾ ಸೇವೆ



ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ನೂತನವಾಗಿ ಆರಂಭಿಸಿರುವ ಸುಧಾರಿತ ಲೇಸರ್ ಚಿಕಿತ್ಸಾ ಘಟಕವನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು. ಈ ವೇಳೆ ಆಸ್ಪತ್ರೆಯ ಅಧಿಕಾರಿಗಳು ಹಾಗೂ ವೈದ್ಯರು ಉಪಸ್ಥಿತರಿದ್ದರು.

ಮೈಸೂರು, ಮಾ11(ಎಸ್‌ಬಿಡಿ)– ಮೈಸೂರಿನ ನಾರಾಯಣ ಆಸ್ಪತ್ರೆಯು ಅತ್ಯಾಧುನಿಕ ಲೇಸರ್ ಸರ್ಜರಿ ಚಿಕಿತ್ಸಾ ಸೇವೆಯನ್ನು ಆರಂಭಿಸಿದೆ.

ಮೈಸೂರಿನ ರಿಂಗ್ ರಸ್ತೆಯಲ್ಲಿರುವ ನಾರಾಯಣ ಆಸ್ಪತ್ರೆ ಹಾಗೂ ವಿಜಯನಗರದ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಪ್ರಾರಂಭಿಸಿರುವ ಸುಧಾರಿತ ಲೇಸರ್ ಚಿಕಿತ್ಸಾ ಘಟಕವನ್ನು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ವಿದ್ಯುಕ್ತವಾಗಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ನಾರಾಯಣ ಆಸ್ಪತ್ರೆ ಮೈಸೂರಿನಲ್ಲಿ ಸೇವೆ ಆರಂಭಿಸಿದ ದಿನದಿಂದ ಜನರಿಗೆ ಅತ್ಯುತ್ತಮ ಆರೋಗ್ಯ ಸೇವೆ ನೀಡುತ್ತಿದೆ. ಇದೀಗ ಅತ್ಯಾಧುನಿಕ ಲೇಸರ್ ಚಿಕಿತ್ಸಾ ಸೌಲಭ್ಯ ಕಲ್ಪಿಸಿರುವುದು ಶ್ಲಾಘನೀಯ. ಜನರಿಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಹಂತ ಹಂತವಾಗಿ ಕಲ್ಪಿಸುತ್ತಿರುವ ಆಸ್ಪತ್ರೆಯ ಆಡಳಿತ ಮಂಡಳಿ ಹಾಗೂ ಇಲ್ಲಿನ ವೈದ್ಯರ ತಂಡಕ್ಕೆ ಅಭಿನಂದನೆ ತಿಳಿಸುತ್ತೇನೆ ಎಂದರು.

ಆಸ್ಪತ್ರೆಯ ಫೆಸಿಲಿಟಿ ಡೈರೆಕ್ಟರ್ ಪವನ್ ಕುಮಾರ್ ಮಾತನಾಡಿ, ನಾರಾಯಣ ಆಸ್ಪತ್ರೆಯಲ್ಲಿ ಸಹಾನುಭೂತಿಯೊಂದಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ನೀಡಲಾಗುತ್ತದೆ. ಸುಧಾರಿತ ಲೇಸರ್ ಚಿಕಿತ್ಸಾ ಸೇವೆ ಆರಂಭಿಸಿದ್ದು ಮಹತ್ವದ ಮೈಲುಗಲ್ಲಾಗಿದೆ. ಮೈಸೂರು ಪ್ರದೇಶದ ಜನರಿಗೆ ಗುಣಮಟ್ಟದ ಚಿಕಿತ್ಸೆ ಒದಗಿಸಲು ನಮ್ಮ ಆಸ್ಪತ್ರೆ ಸದಾ ಬದ್ಧವಾಗಿದೆ ಎಂದು ತಿಳಿಸಿದರು.

ವಿವಿಧ ಆರೋಗ್ಯ ಕಾಳಜಿ: ಹೊಸ ಲೇಸರ್ ಸರ್ಜರಿ ಚಿಕಿತ್ಸಾ ಸೇವೆ ಘಟಕವನ್ನು ವಿವಿಧ ಆರೋಗ್ಯ ಕಾಳಜಿಯೊಂದಿಗೆ ವಿನ್ಯಾಸಗೊಳಿಸಲಾಗಿದ್ದು, ಇದು ಕಡಿಮೆ ಆಕ್ರಮಣಕಾರಿ ಚಿಕಿತ್ಸಾ ವಿಧಾನವಾಗಿದೆ. ಈ ಘಟಕದಲ್ಲಿ ಮೂಲವ್ಯಾಧಿ, ಫಿಸ್ತುಲಾ, ಬಿರುಕುಗಳು, ಪಿಲೋನಿಡಲ್ ಸೈನಸ್, ಲೇಸರ್ ಲಿಪೊಸಕ್ಷನ್, ಉಬ್ಬಿರುವ ರಕ್ತನಾಳಗಳಿಗೆ ಎಂಡೋವೆನಸ್ ಲೇಸರ್ ಅಬ್ಲೇಶನ್(ಇವಿಎಲ್‌ಎ), ಜನನಾಂಗದ ನರಹುಲಿ ನಿವಾರಣೆ, ಲೇಸರ್ ಹಿಸ್ಟರೊಸ್ಕೋಪಿ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಇಲ್ಲಿ ಉತ್ತಮ ಚಿಕಿತ್ಸೆ ದೊರಕಲಿದೆ



ಸೋಮವಾರ ಮೈಸೂರಿಗೆ ಭೇಟಿ ನೀಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟಾ ಶ್ರೀನಿವಾಸ ಪೂಜಾರಿ ಅವರನ್ನು ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮೈಸೂರು ನಗರ ಉಪಾಧ್ಯಕ್ಷ ಜೋಗಿ ಮಂಜು, ಕೋಟೆ ಕೃಷ್ಣನಾಯಕ, ಹಿನಕಲ್ ಪಾಪಣ್ಣ ಉಪಸ್ಥಿತರಿದ್ದರು.

ವರ್ಷಾಂತ್ಯಕ್ಕೆ ಮೈಸೂರಿನ ಪ್ಲಾನೆಟೇರಿಯಂ ಸೇವೆಗೆ ಸಿದ್ಧ

ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರ ಮೇಲುಸ್ತುವಾರಿ; ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ನಿರ್ವಹಣೆಯಲ್ಲಿ 81 ಕೋಟಿ ವೆಚ್ಚದಲ್ಲಿ ಯೋಜನೆ ಜಾರಿ



ಮೈಸೂರು,ಮಾ.11(ಆರ್‌ಕೆ)ವರ್ಷಾಂತ್ಯಕ್ಕೆ ಮೈಸೂರಿನ ಪ್ಲಾನೆಟೇರಿಯಂ ಸೇವೆಗೆ ಸಿದ್ಧವಾಗಲಿದೆ. ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ 3 ಎಕರೆ ಪ್ರದೇಶದಲ್ಲಿ ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಪ್ರಿನ್ಸಿಪಾಲ್ ಸೈಂಟಿಫಿಕ್ ಅಡ್ವೈಸರ್ ಗವರ್ನಮೆಂಟ್ ಆಫ್ ಇಂಡಿಯಾ ಸಹಯೋಗದೊಂದಿಗೆ ಕಾಸ್ಮೋಲಜಿ ಎಜುಕೇಷನ್ ಆಂಡ್ ರಿಸರ್ಚ್ ಟ್ರೈನಿಂಗ್ ಸೆಂಟರ್(COSMOS) ಸಂಸ್ಥೆಯು 81ಕೋಟಿ ರೂ ವೆಚ್ಚದಲ್ಲಿ ನಿರ್ಮಿಸುತ್ತಿರುವ ಪ್ಲಾನೆಟೇರಿಯಂ ಕಾಮಗಾರಿ ತೀವ್ರಗತಿಯಲ್ಲಿ ನಡೆಯುತ್ತಿದ್ದು, 2024ರ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳಬಹುದೆಂದು ನಿರೀಕ್ಷಿಸಲಾಗಿದೆ.

ಅಡಿಪಾಯ, ಬೇಸ್‌ಮೆಂಟ್ ಕೆಲಸ ಮುಗಿದು ಅದರ ಮೇಲೆ ಕಬ್ಬಿಣ ಅಳವಡಿಸಿ ಕಂಬಗಳಿಗೆ ಕಾಂಕ್ರೀಟ್ ಮಿಕ್ಸರ್ ಹಾಕಲಾಗುತ್ತಿದ್ದು, ನೆಲಮಹಡಿಯ ತಾರಸಿ ಮಟ್ಟಕ್ಕೆ ಕಾಮಗಾರಿ ತಲುಪಿದೆ. ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯತ್ತ ಸಂಸ್ಥೆಯಿಂದ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಸ್ಟ್ರೋಫಿಸಿಕ್ಸ್(IIA) ನಿರ್ವಹಣೆಯಲ್ಲಿ ಭಾರತ ಸರ್ಕಾರದ ಪ್ರದಾನ ವೈಜ್ಞಾನಿಕ ಸಲಹೆಗಾರರ ಮೇಲ್ವಿಚಾರಣೆಯಲ್ಲಿ ಯೋಜನೆ ಕಾಮಗಾರಿ ನಡೆಯುತ್ತಿದೆ. ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಅಟೋಮಿಕ್ ಎನರ್ಜಿ ಇಲಾಖೆಯ ಕಾಸ್ಮೋಲಜಿ ಎಜುಕೇಷನ್ ಅಂಡ್ ರಿಸರ್ಚ್ ಟ್ರೈನಿಂಗ್ ಸೆಂಟರ್ ಯೋಜನೆಯಡಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಎಂಪಿಲಾಡ್ ಅನುದಾನದಡಿ 81 ಕೋಟಿ ರೂ ಅಂದಾಜು ವೆಚ್ಚದಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

2022ರ ಮೇ 6 ರಂದು ನಿರ್ಮಲಾ ಸೀತರಾಮನ್ ಅವರು ಯೋಜನೆಯ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಸ್ಟ್ರೋಫಿಸಿಕ್ಸ್ ನಿರ್ದೇಶಕಿ ಪ್ರೊ. ಅನ್ನಪೂರ್ಣಿ ಸುಬ್ರಹ್ಮಣ್ಯಂ ಅವರು, ಕಾಮಗಾರಿ ಪ್ರಗತಿಯಲ್ಲಿದ್ದು, ವರ್ಷಾಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದರು.

130 ರಿಂದ 150 ಮಂದಿ ಸಾಮರ್ಥ್ಯದ 15–ಡಿಗ್ರಿ ಇನ್‌ಕ್ಲೈನೇಷನ್‌ನೊಂದಿಗೆ 15 ಮೀಟರ್ ಎಲ್‌ಇಡಿ ಡೋಮ್ ಪ್ಲಾನೆಟೇರಿಯಂ ಸೌಲಭ್ಯ ಹೊಂದಿರುವ ಈ ಕಟ್ಟಡದ ಎಲ್‌ಇಡಿ ಲೈಟ್‌ಗಳಿಂದ ಗೋಪುರದ ಇಂಟಿರಿಯರ್ ಮೂಲಕ ವೀಕ್ಷಣೆಗೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಅವರು ತಿಳಿಸಿದರು.

ಲಿಂಗ ತಾರತಮ್ಯವಿಲ್ಲದೆ ಮುನ್ನಡೆದರೆ ಸಮಾಜದ ಸಮೃದ್ಧಿ

ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ ; 35 ಮಹಿಳೆಯರಿಗೆ ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ ಪ್ರದಾನ

ಮೈಸೂರು,ಮಾ.11(ಪಿಎಂ)–ಲಿಂಗ ತಾರತಮ್ಯವಿಲ್ಲದೇ ಗಂಡು ಮತ್ತು ಹೆಣ್ಣು ಸಮಾನವಾಗಿ ಮುನ್ನಡೆದಾಗ ಮಾತ್ರ ಸಮಾಜದ ಸಮೃದ್ಧಿ ಸಾಧ್ಯ ಎಂದು ಮುಕ್ತ ವಿವಿ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ ಹೇಳಿದರು.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶ್ರೀದುರ್ಗಾ ಫೌಂಡೇಶನ್ ಹಾಗೂ ಶ್ರೀಮಾತೃ ಮಹಿಳಾ ಮಂಡಳಿ ಜಂಟಿ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಸೋಮವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ 'ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ (2024)' ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆ ಇಂದು ಸಾಧನೆ ತೋರಿದ್ದು, ಶಕ್ತಿ ಇಲ್ಲದ ಶಿವ ಶೂನ್ಯ ಎನ್ನುತ್ತಾರೆ. ಶಕ್ತಿ ಅಂದರೆ ಹೆಣ್ಣು. ಅವಳಿಲ್ಲದ ಶಿವ, ಅಂದರೆ ಪುರುಷ ಶೂನ್ಯ. ಹಾಗಾಗಿ ಪ್ರತಿಯೊಬ್ಬ ಪುರುಷನ ಹಿಂದೆ ಮಹಿಳೆ ಇದ್ದೇ ಇರುತ್ತಾಳೆ. ಅಲ್ಲದೆ, ಮಹಿಳೆಯ ಸಾಧನೆಗೆ ಅವರ ಕುಟುಂಬದ ಪುರುಷರು ಪ್ರೇರಣೆಯಾಗಿ ನಿಲ್ಲುತ್ತಾರೆ. ಸ್ವಾಮಿ ವಿವೇಕಾನಂದರು 'ಒಂದು ಪಕ್ಷಿಗೆ ಹಾರಾಡಲು ಎರಡು ರೆಕ್ಕೆಗಳು ಹೇಗೆ ಅಗತ್ಯವೋ ಹಾಗೆ ಗಂಡು ಮತ್ತು ಹೆಣ್ಣು ಸಮಾನವಾಗಿ ಸಮಾಜದಲ್ಲಿ ಮುನ್ನಡೆದಾಗ ಸಮಾಜ ಏಳಿಗೆ ಸಾಧ್ಯ' ಎಂದು ಹೇಳಿದ್ದು, ಅದರಂತೆ ಲಿಂಗ ತಾರತಮ್ಯವಿಲ್ಲದೇ ಸಮಾನವಾಗಿ ಮುನ್ನಡೆಯಬೇಕು ಎಂದು ತಿಳಿಸಿದರು.

ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ನಗರ ಪೊಲೀಸ್ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಮಾತನಾಡಿ, ಮಹಿಳೆ ನಿಜಕ್ಕೂ ಪ್ರಕೃತಿಯ ಅದ್ಭುತ ಸೃಷ್ಟಿ. ಇಂದೇನಾದರೂ ಸಮಾಜ ಸರಿದಾರಿಯಲ್ಲಿ ಸಾಗುತ್ತಿದ್ದರೆ ಅದಕ್ಕೆ ಮಹಿಳಾ ಶಕ್ತಿ ಕಾರಣ. ರಾಜಕೀಯ, ಶೈಕ್ಷಣಿಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಇಂದಿಗೂ ದೊರೆತಿಲ್ಲ. ಆದ್ದರಿಂದ ಈ ರೀತಿಯಲ್ಲಿ ಪ್ರಶಸ್ತಿಗಳನ್ನು ನೀಡಿ ಮಹಿಳೆಯರಿಗೆ ಪ್ರೋತ್ಸಾಹ ನೀಡುವ ಜೊತೆಗೆ ಮಹಿಳಾ ಸಮುದಾಯಕ್ಕೆ ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ನಮ್ಮ ಸಮಾಜ ಹೆಜ್ಜೆ ಹಾಕಬೇಕಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ನಾನಾ ಕ್ಷೇತ್ರಗಳಲ್ಲಿ ಸಾಧನೆಗೈದ ರಾಜ್ಯದ ವಿವಿಧ ಭಾಗಗಳ 35 ಮಂದಿ ಮಹಿಳೆಯರಿಗೆ 'ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಆರ್.ವಿಜಯಾ, ವಂದನಾ ರೈ, ಶಾಂತ ರಾಮಕೃಷ್ಣ, ಉಮಾ ಮಹೇಶ್ವರಿ, ನಿವೇದಿತಾ ಮಂಜುನಾಥ್, ಎಲ್.ರೇವತಿ, ರಮ್ಯ ರಾಘವೇಂದ್ರ, ಶಕುಂತಲಾ, ಸೌಭಾಗ್ಯ, ದೇವಿಕಾ ಕೆ.ಜೋಗಿ, ಶಾಂತ ಕರಿಬಸಯ್ಯ, ಮಹಾದೇವಮ್ಮ, ಆರ್.ವಾತ್ಸಲ್ಯ, ಕೆ.ಸುಗುಣ, ಶ್ರುತಿ ಪ್ರಹ್ಲಾದ್, ಡಾ.ಜಿ.ಗಂಗಲಕ್ಷ್ಮಮ್ಮ, ಪವಿತ್ರಮ್ಮ, ಪಿ.ವಿ.ಸುವರ್ಣಮ್ಮ, ಮಹಾಲಕ್ಷ್ಮೀ, ಡಾ.ಮಧುಗಿರಿ, ಹರ್ಷಿತಾ ಸಂತೋಷ್ ಕುಮಾರ್, ಡಿ.ಪವಿತ್ರಾ, ರೂಪಾ, ಎಸ್.ಸವಿತಾ, ವಿ.ತೇಜಸ್ವಿನಿ, ಜಯಲಕ್ಷ್ಮಮ್ಮ, ಡಾ.ಸಿ.ಕೆ.ವನಮಾಲಾ, ಎ.ಕುಸುಮಾ, ಜಿ.ಶ್ವೇತಾ, ವಿದೂಷಿ ಡಿ.ವಿ.ಶ್ರೀವಾಣಿ, ವಿದೂಷಿ ಎಸ್.ಎನ್.ಮೇಘನಾರಾವ್, ಎಂ.ವೀಣಾ, ಪ್ರಮೀಳಾ ವಿಶ್ವನಾಥ್, ಶೈಲಜಾ ಸಪ್ತಗಿರಿ, ಡಾ.ಡಿ.ಪ್ರೇಮ ಜ್ಯೋತಿ ಪ್ರಶಸ್ತಿಗೆ ಭಾಜನರಾದರು.

ಬಿಜೆಪಿ ನಗರ ಉಪಾಧ್ಯಕ್ಷೆ ಹೇಮಾ ನಂದೀಶ್, ಜೀವಾಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಬಳ್ಳಾರಿ ಮೊರಾರ್ಜಿ ದೇಸಾಯಿ ಶಾಲೆ ಮುಖ್ಯ ಶಿಕ್ಷಕಿ ಅನುಸೂಯ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಶ್ರೀಮಾತೃ ಮಹಿಳಾ ಮಂಡಳಿ ಅಧ್ಯಕ್ಷೆ ಪುಷ್ಪಲತಾ ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಎಂಜಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಲಮುರಿಯಲ್ಲಿ ಮುಳುಗಿ ಮೈಸೂರು ಯುವಕ ಸಾವು



ಶ್ರೀರಂಗಪಟ್ಟಣ, ಮಾ. 11– ತಾಲೂಕಿನ ಪ್ರವಾಸಿ ತಾಣ ಬಲಮುರಿಯಲ್ಲಿ ಈಜಲು ಹೋದ ಮೈಸೂರಿನ ಯುವಕ ನೀರು ಪಾಲಾದ ಘಟನೆ ಭಾನುವಾರ ಸಂಭವಿಸಿದೆ. ಮೈಸೂರಿನ ಗೋಕುಲಂ ನಿವಾಸಿಯಾಗಿದ್ದು, ಕೆಆರ್ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಿದ್ದ ನಿಖಿಲ್(25) ನೀರು ಪಾಲಾದವನಾಗಿದ್ದು, ಈತ ಭಾನುವಾರ 8 ಮಂದಿ ಸ್ನೇಹಿತರೊಂದಿಗೆ ಬಲಮುರಿಗೆ ಪ್ರವಾಸ ಹೋಗಿದ್ದು, ನದಿಯಲ್ಲಿ ಈಜುತ್ತಿದ್ದ ವೇಳೆ ನಿಖಿಲ್ ನೀರಿನಲ್ಲಿ ಮುಳುಗಿದ್ದಾನೆ.

ಈ ಸಂಬಂಧ ಆತನ ಸ್ನೇಹಿತರು, ನಿಖಿಲ್ ನೀರಲ್ಲಿ ಮುಳುಗಿ ನಾಪತ್ತೆಯಾಗಿದ್ದಾನೆ ಎಂದು ಕೆಆರ್‌ಎಸ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ನುರಿತ ಈಜುಗಾರರ ಸಹಾಯದಿಂದ ಶೋಧ ಕಾರ್ಯ ಕೈಗೊಂಡ ರಾದರೂ, ಕತ್ತಲಾವರಿಸಿದ್ದರಿಂದ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದರು. ಸೋಮವಾರ ಬೆಳಗ್ಗೆ ಮತ್ತೆ ಕಾರ್ಯಾಚರಣೆ ನಡೆಸಿದಾಗ ನಿಖಿಲ್ ಮೃತದೇಹ ಪತ್ತೆಯಾಗಿದೆ. ಈ ಸಂಬಂಧ ಆತನ ಪೋಷಕರು ನೀಡಿದ ದೂರಿನ ಮೇರೆಗೆ ಕೆಆರ್‌ಎಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ನಂಜನಗೂಡಲ್ಲಿ ಧ್ರುವನಾರಾಯಣ್ ಪುಣ್ಯಸ್ಮರಣೆ



ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಉದ್ಘಾಟಿಸಿದರು.

ನಂಜನಗೂಡು, ಮಾ.11– ಕಾರ್ಯಕರ್ತರ ನೋವು ನಲಿವುಗಳಿಗೆ ಸ್ಪಂದಿಸುವ ಮೂಲಕ ಒಬ್ಬ ರಾಜಕಾರಣಿ ಹೇಗೆ ಸಮಾಜಮುಖಿಯಾಗಿ ನಿಲ್ಲಬಹುದು ಎಂಬುದಕ್ಕೆ ಮಾದರಿಯಾಗಿದ್ದ ಅಪರೂಪದ ರಾಜಕಾರಣಿ ಆರ್.ಧ್ರುವನಾರಾಯಣ್ ಎಂದು ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ ತಿಳಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ದಿ.ಆರ್.ಧ್ರುವನಾರಾಯಣ್ ಅವರ ಮೊದಲ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊರೊನಾ ವೇಳೆ ತಮ್ಮ ಆರೋಗ್ಯ ಲೆಕ್ಕಿಸದೆ ಅಸಂಘಟಿತ ಕಾರ್ಮಿಕರಿಗೆ ಆಹಾರ ಕಿಟ್ ವಿತರಿಸುವ ಮೂಲಕ ಸಹಾಯ ಹಸ್ತ ಚಾಚಿದ್ದರು. ಅಲ್ಲದೆ ನಮ್ಮ ಬೂತ್ ನಮ್ಮ ಹೊಣೆ, ಸ್ವತಂತ್ರ ನಡಿಗೆ ಮೂಲಕ 170 ಗ್ರಾಮಗಳಿಗೆ ಕಾಲ್ನಡಿಗೆಯಲ್ಲಿ ತೆರಳಿ ನೇರವಾಗಿ ಮತದಾರರನ್ನು ಭೇಟಿಯಾಗಿ ಪಕ್ಷ ಸಂಘಟನೆ ಮಾಡಿದ್ದರು. 9 ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆ ಹೊಣೆ ಹೊತ್ತು ಸಮರ್ಥವಾಗಿ ನಿಭಾಯಿಸಿದರು. ಅವರ ಪರಿಶ್ರಮದಿಂದ ಕೊಡಗಿನಲ್ಲಿ ಕಳೆದ 20 ವರ್ಷದಿಂದ ಗೆಲುವು ಸಾಧಿಸದ ಕಾಂಗ್ರೆಸ್ ಪ್ರಸ್ತುತ 2 ಕ್ಷೇತ್ರದಲ್ಲಿ ಗೆಲುವು ಪಡೆದಿದೆ. ಅಂತಹ ಸಂಘಟನಾ ಚತುರನನ್ನು ಕಳೆದುಕೊಂಡಿರುವುದು ನಮ್ಮೆಲ್ಲರ ದುರ್ದೈವ. ಅವರ ಕನಸನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಸಾಕಾರಗೊಳಿಸಲು ಪ್ರತಿಯೊಬ್ಬರು ಸಹಕಾರ ನೀಡಬೇಕು ಎಂದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ: ಆರ್.ಧ್ರುವನಾರಾಯಣ್ ಮೊದಲ ಪುಣ್ಯಸ್ಮರಣೆ ಅಂಗವಾಗಿ ನಗರದ ಮಹದೇಶ್ವರ ಪ್ಯಾಲೇಸ್ ಸಭಾಂಗಣದಲ್ಲಿ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದವರು ಲಯನ್ಸ್ ಕ್ಲಬ್ ಆಶ್ರಯದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಏರ್ಪಡಿಸಿದ್ದರು. ಕಾರ್ಯಕ್ರಮವನ್ನು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಉದ್ಘಾಟಿಸಿದರು.

ನಗರಸಭಾ ಮಾಜಿ ಸದಸ್ಯ ಎನ್.ಎಂ.ಮಂಜುನಾಥ್ ಮಾತನಾಡಿ, ಹಿಂದೆ ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಮತ್ತು ಸ್ಮರಣಾರ್ಥ ರಕ್ತದಾನ, ಕಣ್ಣಿನ ತಪಾಸಣಾ ಶಿಬಿರ, ಶ್ರವಣ ದೋಷ ಚಿಕಿತ್ಸೆ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಇದೀಗ ಲಯನ್ಸ್ ಕ್ಲಬ್ ಆಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಕಣ್ಣಿನ ದೋಷವುಳ್ಳವರಿಗೆ ತಮಿಳುನಾಡಿನ ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಚಿಕಿತ್ಸೆ ನೀಡಿ ಉಚಿತವಾಗಿ ಕನ್ನಡಕ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಮುಖಂಡರಾದ ಎಂ.ಮಾದಪ್ಪ ರಾಜೇಶ್, ದೊರೆಸ್ವಾಮಿ ನಾಯಕ, ಮುದ್ದುಮಾದಶೆಟ್ಟಿ, ನಾಗರಾಜು, ಗೋವಿಂದರಾಜು, ನಗರಸಭಾ ಸದಸ್ಯರಾದ ಮಹೇಶ್, ಗಾಯತ್ರಿ, ಶ್ರೀಕಂಠಸ್ವಾಮಿ, ಪ್ರದೀಪ್, ಲಯನ್ಸ್ ಕ್ಲಬ್ ಅಧ್ಯಕ್ಷ ಗೋಪಾಲ ಕೃಷ್ಣ, ವಿಜಯ್ ಕುಮಾರ್, ವಾಲೆ ನಾಗರಾಜು, ಅಂಬಿ, ಉಮೇಶ್, ಬಸವರಾಜು, ರಾಜು, ಮಹದೇವು, ಹೆಚ್.ಎಸ್.ರಾಜು, ನಂಜುಂಡಸ್ವಾಮಿ ಸೇರಿದಂತೆ ಹಲವರಿದ್ದರು.

ಹೆಡಿಯಾಲದಲ್ಲಿ ಧ್ರುವನಾರಾಯಣ್ ಸ್ಮರಣೆ



ಹೆಡಿಯಾಲದಲ್ಲಿ ಧ್ರುವನಾರಾಯಣ್ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಮಲ್ಕುಂಡಿ: ಸಮೀಪದ ಹೆಡಿಯಾಲದಲ್ಲಿ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಗ್ರಾಪಂ ಸದಸ್ಯ ಗೋವಿಂದರಾಜು ಮಾತನಾಡಿ, ಧ್ರುವನಾರಾಯಣ್ 2 ಬಾರಿ ಸಂಸದರಾಗಿ ಅಪಾರ ಕೊಡುಗೆ ನೀಡಿದ್ದಾರೆ. ಅವರು ನಮ್ಮನ್ನು ಅಗಲಿ ಒಂದು ವರ್ಷವಾದರೂ ಕ್ಷೇತ್ರದ ಜನರ ಮನಸ್ಸಿನಲ್ಲಿ ಉಳಿದಿದ್ದು, ಅವರ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಾಗಿದೆ ಎಂದರು. ಇದೇ ವೇಳೆ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಗ್ರಾಪಂ ಉಪಾಧ್ಯಕ್ಷ ನಾಗೇಶ್, ಮುಖಂಡರಾದ ನಾಗರಾಜೇಗೌಡ, ಹೊಸವೀಡು ಸಿದ್ದರಾಜು, ಶಿವಸ್ವಾಮಿ, ರವಿ, ಸ್ವಾಮಿ, ಶಿವರಾಜು, ಪ್ರಕಾಶ್, ಸಾದಿಕ್, ನಾರಾಯಣ ಸೇರಿದಂತೆ ಇತರರಿದ್ದರು.

ಸರಳ ಸಜ್ಜನಿಕೆಯ ನಾಯಕ ಧ್ರುವನಾರಾಯಣ್



ಸರಗೂರು, ಮಾ.11– ಸರಳ ಸಜ್ಜನಿಕೆಯ ಪಕ್ಷಾತೀತ ನಾಯಕ ದಿ.ಆರ್.ಧ್ರುವನಾರಾಯಣ್ ಎಂದು ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಚಿಕ್ಕಣ್ಣ ತಿಳಿಸಿದರು.

ಪಟ್ಟಣದ ಪಪಂ ಮುಂಭಾಗ ಆಯೋಜಿಸಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದ ಬಡವರ ಪಾಲಿಗೆ ದೇವರಾಗಿದ್ದ ಧ್ರುವನಾರಾಯಣ್ ಅವರು ಇಂದು ನಮ್ಮೊಂದಿಗೆ ಇಲ್ಲದಿರುವುದು ತುಂಬಲಾರದ ನಷ್ಟ. ಅವರ ಅಭಿವೃದ್ಧಿ ಕಾರ್ಯಗಳು ಎಂದಿಗೂ ಅಜರಾಮರ ಎಂದರು.


ಇದೇ ವೇಳೆ ಮಾಜಿ ಸದಸ್ಯ ಪಿ.ರವಿ. ಚಿಕ್ಕವೀರನಾಯಕ, ಧ್ರುವನಾರಾಯಣ್ ಕುರಿತು ಮಾತನಾಡಿದರು. ಈ ಸಂದರ್ಭ ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ ಶಿವಶಂಕರ್, ಶಿವಲಿಂಗಯ್ಯ, ಎಸ್.ಎಸ್.ಬಸವರಾಜು, ನಾಗರಾಜು, ಕೃಷ್ಣ, ಲೋಕೇಶ್, ಶಿವಚನ್ನಪ್ಪ ಸೂರಿ ಮುಖಂಡರಾದ ಸಿದ್ದರಾಜು, ಡಿ.ಪಿ.ನಟರಾಜು, ಬಸವರಾಜು, ಎಂ.ಕೆಂಡಗಣ್ಣಸ್ವಾಮಿ, ಗುರುಸ್ವಾಮಿ, ಶಿವರಾಜು, ನಿಜಪ್ಪ, ಇನ್ನಿತರರಿದ್ದರು.

ಕೊತ್ತೇಗಾಲ ಗ್ರಾಪಂಗೆ ಮೀನಾಕ್ಷಿ ಅಧ್ಯಕ್ಷೆ

ತಿ.ನರಸೀಪುರ, ಮಾ.11– ತಾಲೂಕಿನ ಕೊತ್ತೇಗಾಲ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಮೀನಾಕ್ಷಿ ಪ್ರಕಾಶ್ ಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷೆ ಆರ್.ನಾಗಮಣಿ ಅವರು ಆಂತರಿಕ ಒಪ್ಪಂದದಂತೆ ತಮ್ಮ 6 ತಿಂಗಳ ಅಧಿಕಾರಾವಧಿ ಪೂರ್ಣಗೊಳಿಸಿ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಮೀನಾಕ್ಷಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಎಇಇ ರತೀಶ್ ಘೋಷಿಸಿದರು.

ಸದಸ್ಯರಾದ ವನಜಾಕ್ಷಮ್ಮ, ಬಿ.ಮಹೇಶ್, ಮಲ್ಲೇಶ್, ಪುಷ್ಪ, ಬಸವರಾಜು, ಆರ್.ನಾಗಮಣಿ, ಮಹಾದೇವಿ, ಭಾಗ್ಯಮ್ಮ, ಕೆ.ಬಿ.ಬಸವರಾಜು, ಮರಿಸ್ವಾಮಿ, ನಾಗೇಂದ್ರ, ಲಕ್ಷ್ಮಣ, ಲೀಲಾವತಿ, ಸಿ.ಮಣಿಕಂಠ, ಶಿವಮ್ಮ, ಮಹದೇವಸ್ವಾಮಿ ಚುನಾವಣಾ ಸಭೆಯಲ್ಲಿ ಭಾಗವಹಿಸಿ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಈ ವೇಳೆ ಮುಖಂಡರಾದ ಎಂ.ಎನ್. ಪ್ರಕಾಶ್‌ಮೂರ್ತಿ, ಸೀಹಳ್ಳಿ ಗುರುಮೂರ್ತಿ, ಕು.ಶಿ.ಭೃಂಗೀಶ್, ಕೆ.ಸಿ.ವೀರೇಶ್, ಕೆ.ಎನ್. ಶಿವಕುಮಾರ್, ಮಹದೇವ ಪ್ರಸಾದ್, ಶಿವಕುಮಾರ್, ಸೋಮಣ್ಣ, ಮಹೇಶ್, ಮಹದೇವಸ್ವಾಮಿ, ಮಹೇಷ ಚಿಕ್ಕಸ್ವಾಮಿ, ಶಿವಕುಮಾರಸ್ವಾಮಿ, ನಾರಾಯಣ, ವೆಂಕಟ ರಾಮು, ಶಾಂತಮೂರ್ತಿ, ರಾಜೇಂದ್ರ ಮತ್ತಿತರರಿದ್ದರು.



ಕೊತ್ತೇಗಾಲ ಗ್ರಾಪಂ ಅಧ್ಯಕ್ಷೆ ಮೀನಾಕ್ಷಿ ಅವರನ್ನು ಅಭಿನಂದಿಸಲಾಯಿತು.

ಸರಗೂರು ಪಪಂಗೆ 14.81 ಲಕ್ಷ ಉಳಿತಾಯ ಬಜೆಟ್



ಸರಗೂರು ಪಪಂನಲ್ಲಿ ಅಧ್ಯಕ್ಷೆ ರಾಧಿಕಾ ಬಜೆಟ್ ಮಂಡಿಸಿದರು.

ಸರಗೂರು, ಮಾ.11– ಇಲ್ಲಿನ ಪಟ್ಟಣ ಪಂಚಾಯಿತಿ ಆವರಣದಲ್ಲಿ ಸೋಮವಾರ ನಡೆದ ಬಜೆಟ್ ಮಂಡನೆ ಸಭೆಯಲ್ಲಿ ಅಧ್ಯಕ್ಷೆ ರಾಧಿಕಾ ಅವರು 2024–25ನೇ ಸಾಲಿಗೆ 14.81 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

ಪ್ರಾರಂಭಿಕ ಶುಲ್ಕ 65.32 ಲಕ್ಷ ರೂ. ಗಳಾಗಿದ್ದು, ಒಟ್ಟು ನಿರೀಕ್ಷಿತ ಆದಾಯ 155.85 ಲಕ್ಷ ರೂ., ಇದರಲ್ಲಿ ಒಟ್ಟು ಜಮಾ 89.85 ಲಕ್ಷ ರೂ., ಈ ಪೈಕಿ ನಿರೀಕ್ಷಿತ ಪಾವತಿಗಳು 153.182 ರೂ. ಆಗಲಿದ್ದು, 14.81 ಲಕ್ಷ ರೂ. ಉಳಿತಾಯವಾಗಲಿದೆ ಎಂದರು.

ಪ್ರಸಕ್ತ ಬಜೆಟ್‌ನಲ್ಲಿ ವಿವಿಧ ಮೂಲಗಳಿಂದ 115.64 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ. ಆಸ್ತಿ ತೆರಿಗೆಯಿಂದ 55 ಲಕ್ಷ ರೂ., ನೀರು ಸರಬರಾಜು ಶುಲ್ಕ 25.64 ಲಕ್ಷ ರೂ., ವಾಣಿಜ್ಯ ಸಂಕೀರ್ಣಗಳ ಬಾಡಿಗೆ 8.50 ಲಕ್ಷ ರೂ., ಉದ್ದಿಮೆ ರಹದಾರಿ 4.50 ಲಕ್ಷ ರೂ., ಕಟ್ಟಡ ಪರವಾನಗಿ ಶುಲ್ಕ 12 ಲಕ್ಷ ರೂ. ಸೇರಿದಂತೆ ಇನ್ನಿತರ ಮೂಲಗಳಿಂದ 10 ಲಕ್ಷ ರೂ. ನಿರೀಕ್ಷಿಸಲಾಗಿದೆ ಎಂದರು.

ಅಲ್ಲದೇ ಸರ್ಕಾರದಿಂದ 297 ಲಕ್ಷ ರೂ. ವಿವಿಧ ಅನುದಾನ, ಎಸ್ಎಫ್‌ಸಿ ಅನುದಾನ 145 ಲಕ್ಷ ರೂ., 15ನೇ ಹಣಕಾಸು ಯೋಜನೆ ಅನುದಾನ 67 ಲಕ್ಷ ರೂ., ಎಸ್ಎಫ್‌ಸಿ ವಿದ್ಯುತ್ ಅನುದಾನ 126 ಲಕ್ಷ ರೂ., ಎಸ್ಎಫ್‌ಸಿ ವೇತನ ಅನುದಾನ 89 ಲಕ್ಷ ರೂ., ಎಸ್ಎಫ್‌ಸಿ ವಿಶೇಷ ಅನುದಾನ 15 ಲಕ್ಷ ರೂ. ಹಂಚಿಕೆಯಾಗಿದೆ ಎಂದು ತಿಳಿಸಿದರು.

ಬಜೆಟ್‌ನಲ್ಲಿ 1594 ಲಕ್ಷ ರೂ. ವಿವಿಧ ಕಾಮಗಾರಿಗಳಿಗೆ ಪಾವತಿಸಲಾಗಿದೆ. ಈ ಪೈಕಿ ಘನತ್ಯಾಜ್ಯ ನಿರ್ವಹಣೆಗೆ 55 ಲಕ್ಷ ರೂ., ರಸ್ತೆಬದಿ ಹಾಗೂ ಮಳೆ ನೀರು ಚರಂಡಿ ಅಭಿವೃದ್ಧಿ ಮತ್ತು ನಿರ್ವಹಣೆಗೆ 30 ಲಕ್ಷ ರೂ., ಬೀದಿ ದೀಪ ಹಾಗೂ ನೀರು ಸರಬರಾಜಿನ ವಿದ್ಯುತ್ ಬಿಲ್ ಪಾವತಿಗೆ 60 ಲಕ್ಷ ರೂ., ಖಾಯಂ ನೌಕರರ ವೇತನಕ್ಕೆ 89 ಲಕ್ಷ ರೂ. ಸೇರಿದಂತೆ ಇನ್ನಿತರ ಕಾಮಗಾರಿಗಳಿಗೆ ಅನುದಾನ ಪಾವತಿಸಲಾಗಿದೆ ಎಂದರು.

ಈ ವೇಳೆ ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷೆ ಉಮಾ, ಸದಸ್ಯರಾದ ಎಸ್.ಎಲ್.ರಾಜಣ್ಣ, ಹೇಮಾವತಿ, ಶ್ರೀನಿವಾಸ್, ಶಿವಕುಮಾರ್, ಚಲುವಕೃಷ್ಣ, ಸಣ್ಣತಾಯಮ್ಮ, ದಿವ್ಯಾ, ನೂರಾಳಸ್ವಾಮಿ, ಚೈತ್ರಾ, ಮುಖ್ಯಾಧಿಕಾರಿ ಮಂಜುನಾಥ್ ಸೇರಿದಂತೆ ಇತರರಿದ್ದರು.

ಹೆಚ್.ಡಿ.ಕೋಟೆ ಕುರುಬ ಸಮಾಜದ ಅಧ್ಯಕ್ಷರಿಂದ

ಒಂದೂವರೆ ಕೋಟಿ ರೂ. ದುರುಪಯೋಗ: ಆರೋಪ



ಸುದ್ದಿಗೋಷ್ಠಿಯಲ್ಲಿ ಕುರುಬ ಸಮಾಜದ ಕಾರ್ಯದರ್ಶಿ ಶಿರಮಳ್ಳಿ ಚಿಕ್ಕಣ್ಣ ಮಾತನಾಡಿದರು.

ಹೆಚ್.ಡಿ.ಕೋಟೆ, ಮಾ.11– ತಾಲೂಕಿನ ಕುರುಬ ಸಮಾಜದ ಅಧ್ಯಕ್ಷ ಮೊಳೆಯೂರು ಆನಂದ್ ಅವರು ಪಟ್ಟಣದ ಕನಕ ಭವನದ ಒಂದೂವರೆ ಕೋಟಿ ರೂ. ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಕುರುಬ ಸಮಾಜದ ಕಾರ್ಯದರ್ಶಿ ಶಿರಮಳ್ಳಿ ಚಿಕ್ಕಣ್ಣ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದ ಕನಕ ಭವನದಲ್ಲಿ ಒಂದೂವರೆ ಕೋಟಿ ರೂ.ವನ್ನು ಅಧ್ಯಕ್ಷ ಆನಂದ್ ದುರುಪಯೋಗಪಡಿಸಿಕೊಂಡಿದ್ದು, ತಕ್ಷಣ ಅವರು ಹಣವನ್ನು ಸಂಘದ ಖಾತೆಗೆ ಜಮಾ ಮಾಡಬೇಕು ಇಲ್ಲದಿದ್ದರೇ ಈ ಸಂಬಂಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಎರಡೂವರೆ ವರ್ಷದ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆನಂದ್ ಹಾಗೂ ಶಿವಪ್ಪ ಕೋಟೆ ಅವರ ಬಣಗಳನ್ನು ಒಂದೂಗೂಡಿಸಿ ಬೈಲಾ ಪ್ರಕಾರ ಸಂಘ ನಡೆಸಿಕೊಂಡು ಹೋಗುವಂತೆ ಸೂಚಿಸಿದ್ದರು. ಅದರಂತೆ ಕನಕ ಭವನವನ್ನು ಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಅಧೀನಕ್ಕೆ ನೀಡಿದ್ದರು. ಆದರೆ ಆನಂದ್ ಅವರು ಭವನದಲ್ಲಿ ನಡೆಯುವ ಮದುವೆ ಹಾಗೂ ಇನ್ನಿತರ ಶುಭ ಸಮಾರಂಭಗಳಿಂದ ಬರುವ ಆದಾಯದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಈ ಸಂಬಂಧ ಮೈಸೂರು ಜಿಲ್ಲಾಧಿಕಾರಿಗಳಿಗೆ ದೂರು ನೀಡಲಾಗಿದೆ. ಮುಂದಿನ 15 ದಿನದೊಳಗೆ ಹಣ ಕಟ್ಟದಿದ್ದರೇ ಕಾನೂನು ಕ್ರಮ ಕೈಗೊಳ್ಳಲಾಗುವುದು. ಇಲ್ಲದಿದ್ದರೇ ಭವನಕ್ಕೆ ಸಂಘದಿಂದ ಬೀಗ ಜಡಿಯಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕುರುಬ ಸಮಾಜದ ಖಜಾಂಚಿ ಯತೀಶ್ ಕುಮಾರ್ ಮಾತನಾಡಿ, ಕನಕ ಭವನದಲ್ಲಿ ನೂತನ ಶೌಚಾಲಯ ನಿರ್ಮಾಣಕ್ಕೆ ಶಾಸಕ ಅನಿಲ್ ಚಿಕ್ಕಮಾದು ಅವರು 8 ಲಕ್ಷ, ವಿಧಾನ ಪರಿಷತ್ ಸದಸ್ಯ ಧರ್ಮಸೇನಾ 2.5 ಲಕ್ಷ ಸೇರಿದಂತೆ 10.5 ಲಕ್ಷ ಅನುದಾನ ಬಿಡುಗಡೆ ಮಾಡಿದ್ದರು. ಈ ಹಣದಲ್ಲಿ ಸುಸಜ್ಜಿತ ಶೌಚಾಲಯ ನಿರ್ಮಾಣ ಮಾಡದೇ ಈ ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಎಂದರು.

ಈ ವೇಳೆ ಪ್ರಧಾನ ಕಾರ್ಯದರ್ಶಿ ಚಿಕ್ಕಣ್ಣ, ಉಪಾಧ್ಯಕ್ಷರಾದ ವೀರೇಗೌಡ, ರವಿ, ನಿರ್ದೇಶಕ ಪುಟ್ಟೇಗೌಡ ಮುಖಂಡರಾದ ಮಹದೇವ್, ಸುರೇಶ್, ರಾಜಪ್ಪ, ಕಾಳ ಸ್ವಾಮಿಗೌಡ, ಶಿವರಾಜ್, ಚಿನ್ನಸ್ವಾಮಿ, ಸುಬ್ಬೇಗೌಡ, ಚಿಕ್ಕಣ್ಣ, ಪುಟ್ಟೇಗೌಡ, ಮುದ್ದು ರಾಮೇಗೌಡ, ತಮ್ಮಣ್ಣೇಗೌಡ, ಮಂಜುನಾಥ್, ಕುಮಾರ, ಕರಿಗೌಡ್ರು, ರಾಜಪ್ಪ, ಮಹೇಶ, ಬೀರೇಗೌಡ, ಸ್ವಾಮಿಗೌಡ, ಕೃಷ್ಣೆಗೌಡ, ಕೆ.ಬಿ.ಶಿವರಾಜ್, ಚಂದ್ರೇಗೌಡ ಇನ್ನಿತರರಿದ್ದರು.

ಚಿಕ್ಕವಡ್ಡರಗುಡಿ ಪಿಎಸಿಎಸ್‌ಗೆ ರಂಗೇಗೌಡ ಅಧ್ಯಕ್ಷ



ಚಿಕ್ಕವಡ್ಡರಗುಡಿ ಪಿಎಸಿಎಸ್ ಅಧ್ಯಕ್ಷರಾಗಿ ರಂಗೇಗೌಡ ಆಯ್ಕೆಯಾದರು.

ಭೇರ್ಯ, ಮಾ.11– ಸಮೀಪದ ಚಿಕ್ಕವಡ್ಡರಗುಡಿ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ರಂಗೇಗೌಡ ಅವಿರೋಧವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷ ಜಿ.ಆರ್.ಕೃಷ್ಣೇಗೌಡರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ರಂಗೇಗೌಡರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಎಸ್.ರವಿ ಘೋಷಣೆ ಮಾಡಿದರು.

ಈ ವೇಳೆ ಉಪಾಧ್ಯಕ್ಷ ಮಹದೇವ ನಾಯಕ, ಜಿ.ಆರ್.ಕೃಷ್ಣೇಗೌಡ, ನಾಗಮ್ಮ, ಕಾಮಾಕ್ಷಮ್ಮ, ಪದ್ಮಮ್ಮ, ವೀರಭದ್ರಸ್ವಾಮಿ, ನಾರಾಯಣ, ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಸೂರ್ಯಪ್ರಕಾಶ್, ಜಿ.ಆರ್.ಮಹದೇವ್, ಜಿ.ಎನ್.ರಾಜೇಗೌಡ, ನಾಗೇಗೌಡ, ದೇವೇಂದ್ರ, ಕೃಷ್ಣ, ಸತೀಶ್, ಜಿ.ಎಲ್.ಮಂಜುನಾಥ್, ಮುಖ್ಯ ಕಾರ್ಯ ನಿರ್ವಾಹಕ ಭಾಸ್ಕರ, ಸಿಬ್ಬಂದಿಗಳಾದ ಜಯರಾಮ, ಕೆ.ವಿ.ನಂದೀಶ್, ಈಶ್ವರಾಚಾರಿ ಇತರರಿದ್ದರು.

ವಿಜೃಂಭಣೆಯ ಶನೇಶ್ವರ ಉತ್ಸವ



ಕಂಪಲಾಪುರ, ಮಾ.11– ಸಮೀಪದ ಹರಿಲಾಪುರದಲ್ಲಿ ಶ್ರೀಶನೇಶ್ವರ ದೇವಸ್ಥಾನದ 24ನೇ ವಾರ್ಷಿಕ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಮಹೇಂದ್ರ ಸ್ವಾಮೀಜಿ ಮತ್ತು ತಂಡ ಪೂಜಾ ವಿಧಿವಿಧಾನದ ನೇತೃತ್ವ ವಹಿಸಿತ್ತು. ಬೆಳಗ್ಗೆ ಗಣಪತಿ, ನವಗ್ರಹ ಹೋಮ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ ನಂತರ ಅನ್ನಸಂತರ್ಪಣೆ ನೆರವೇರಿತು. ರಾತ್ರಿ 9 ಗಂಟೆಗೆ ಮೈಸೂರಿನ ಭರತ್ ಕುಮಾರ್ ಶಾಸ್ತ್ರೀ ತಂಡದಿಂದ ಶನಿಪ್ರಭಾವ ಕಥಾಮೃತ ಏರ್ಪಡಿಸಲಾಗಿತ್ತು.

ಎಸ್‌ಸಿ, ಎಸ್‌ಟಿ ಹೆಣ್ಣು ಮಕ್ಕಳಿಗೆ

ನಾಟಿ ಕೋಳಿ ಮರಿ ವಿತರಿಸಲು ಮುಂದಿನ ಬಜೆಟ್‌ನಲ್ಲಿ ಯೋಜನೆ

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಫಲಾನುಭವಿಗಳಿಗೆ ಕೋಳಿ ಮರಿಗಳನ್ನು ವಿತರಿಸಿದರು.

ತಿ.ನರಸೀಪುರ, ಮಾ.11– ರಾಜ್ಯದ ಎಸ್‌ಸಿ, ಎಸ್‌ಟಿ ಎಲ್ಲಾ ಹೆಣ್ಣು ಮಕ್ಕಳಿಗೆ ನಾಟಿ ಕೋಳಿ ಮರಿ ವಿತರಿಸಲು ಮುಂದಿನ ಬಜೆಟ್‌ನಲ್ಲಿ ಯೋಜನೆ ರೂಪಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಶುಪಾಲನಾ ಇಲಾಖೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಎಪಿಎಂಸಿ ಆವರಣದಲ್ಲಿ ನಡೆದ ಗ್ರಾಮೀಣ ಮಹಿಳೆಯರಿಗೆ ನಾಟಿ ಕೋಳಿ ಮರಿ ವಿತರಣೆ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಕೋಳಿಮರಿ ವಿತರಿಸಿ ಅವರು ಮಾತನಾಡಿದರು. ಫಲಾನುಭವಿಗೆ 10 ಕೋಳಿ ಮರಿ ವಿತರಿಸುವ ಕಾರ್ಯಕ್ರಮ ಇದಾಗಿದ್ದು, ಕ್ಷೇತ್ರದಲ್ಲಿ 10 ಸಾವಿರ ಕೋಳಿ ಮರಿಗಳನ್ನು ವಿತರಿಸಲಾಗುವುದು. ಈ ಯೋಜನೆಯಿಂದ ಗ್ರಾಮೀಣ ಮಹಿಳೆಯರಿಗೆ ಅನುಕೂಲವಾಗಲಿದೆ ಎಂದರು.

ಕ್ಷೇತ್ರದ ಪ್ರತಿ ಮನೆಯ ಪ್ರತಿ ಮಹಿಳೆಗೂ ನಾಟಿ ಕೋಳಿ ಮರಿ ವಿತರಿಸಬೇಕೆಂಬ ಆಶಯ ನಮ್ಮದಾಗಿದೆ. ಹೀಗಾಗಿ ಅಧಿಕಾರಿಗಳು ಮಹಿಳೆಯರಿಗೆ ಯೋಜನೆ ತಲುಪಿಸಲು ಮುಂದಾಗಬೇಕು ಎಂದರು.

ಅಧಿಕಾರಿಗಳು 50ರಿಂದ 60 ಕೋಟಿ ರೂ. ನೀಡಿದರೆ ಇಡೀ ರಾಜ್ಯಕ್ಕೆ ನಾಟಿ ಕೋಳಿ ಮರಿ ಕೊಡಬಹುದೆಂದು ನನಗೆ ಮಾಹಿತಿ ನೀಡಿದ್ದಾರೆ. ಹೀಗಾಗಿ ಮುಂಬರುವ ಬಜೆಟ್‌ನಲ್ಲಿ ಯೋಜನೆ ರೂಪಿಸಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಹಣ ಬಿಡುಗಡೆ ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಮುಂದಾಲೋಚನೆ ಇಲ್ಲದೇ ದೇವಸ್ಥಾನ ಕೆಡವಿದರು: ಕ್ಷೇತ್ರದಲ್ಲಿ ಏನೂ ಮಾಡದವರು ಏನೇನೋ ಮಾತನಾಡುತ್ತಾರೆ. ಆದರೆ ಎಲ್ಲವನ್ನು ಮಾಡಿ ನಾವೇನು ಮಾತನಾಡುತ್ತಿಲ್ಲ ಎಂದ ಸಚಿವರು ಮುಡುಕುತೊರೆ ದೇವಸ್ಥಾನವನ್ನು ಮುಂದಾಲೋಚನೆ ಇಲ್ಲದೇ ಕೆಡವಿದರು. ದುಡ್ಡಿದೆಯೋ ಇಲ್ಲವೋ ಎಂಬ ಅರಿವಿಲ್ಲದೇ ಕೆಡವಿ ಈಗ ಕಟ್ಟಲು ಪರದಾಡುತ್ತಿದ್ದಾರೆ ಎಂದು ಹಿಂದಿನ ಬಿಜೆಪಿ ಸರ್ಕಾರವನ್ನು ಲೇವಡಿ ಮಾಡಿದರು. ಅವರು ಕೆಡಹುವ ಕೆಲಸ ಮಾಡಿದರೆ ನಾನು ಕಟ್ಟುವ ಕೆಲಸ ಮಾಡುತ್ತೇನೆ. ಪ್ರಸ್ತುತ ಪ್ರವಾಸೋದ್ಯಮ ಇಲಾಖೆಯಿಂದ 2 ಕೋಟಿ ರೂ. ಕೊಡಿಸಿದ್ದೇನೆ ಎಂದರು.

ಸತ್ತು ಹೋದ ನಾಟಿ ಕೋಳಿ ಮರಿಗಳು: ಕೋಳಿ ವಿತರಿಸುವ ಕಾರ್ಯಕ್ರಮ ಬೆಳಗ್ಗೆ 11 ಗಂಟೆಗೆ ನಿಗದಿಯಾಗಿತ್ತು. ಅಧಿಕಾರಿಗಳು ಬೆಳಗಾವಿಯಿಂದ 10 ಸಾವಿರ ಕೋಳಿ ಮರಿಗಳನ್ನು ತರಿಸಿ ನಿನ್ನೆ ರಾತ್ರಿಯಿಂದ ಕಾದು ಕುಳಿತಿದ್ದರು. ಆದರೆ ಸಚಿವ ಮಹದೇವಪ್ಪ ಬೆಳಗ್ಗೆ 11 ಗಂಟೆ ಬದಲಿಗೆ ಮಧ್ಯಾಹ್ನ 1.30ಕ್ಕೆ ಆಗಮಿಸಿದರು. ವೇದಿಕೆ ಕಾರ್ಯಕ್ರಮ ಮುಗಿದು ಕೋಳಿ ವಿತರಣೆ ವೇಳೆಗೆ 2.30 ಆಗಿದ್ದರಿಂದ ಕೋಳಿಗಳಿಗೆ ಆಹಾರ, ನೀರು ಸಿಗದೇ ನಿತ್ರಾಣವಾಗಿದ್ದವು. ಅಲ್ಲದೇ ಕೆಲ ಕೋಳಿ ಮರಿಗಳು ಸತ್ತು ಹೋಗಿದ್ದವು. ಸಚಿವರು ಸಮಯಕ್ಕೆ ಸರಿಯಾಗಿ ಬಂದಿದ್ದರೆ ಕೋಳಿ ಮರಿಗಳು ಸಾಯುತ್ತಿರಲಿಲ್ಲ. ಅವುಗಳಿಗೆ ಆಹಾರ, ಬೆಲ್ಲದ ನೀರು ಕೊಡಬೇಕಿತ್ತು. ಕಾರ್ಯಕ್ರಮ ತಡವಾದ್ದರಿಂದ ಕೋಳಿಗಳು ಸಾವನ್ನಪ್ಪಿದ್ದವೆಂದು ಕೆಲ ಅಧಿಕಾರಿಗಳು ಗೊಣಗುತ್ತಿದ್ದು ಕಂಡು ಬಂತು.

ಕಾರ್ಯಕ್ರಮಕ್ಕೆ ನಿರೀಕ್ಷೆಗೂ ಮೀರಿ ಮಹಿಳೆಯರು ಆಗಮಿಸಿದ್ದರಿಂದ ಫಲಾನುಭವಿಗಳಿಗೆ ಟೋಕನ್ ವ್ಯವಸ್ಥೆ ಮಾಡಲಾಗಿತ್ತು. ಆದರೆ ಸರತಿ ಸಾಲಿನಲ್ಲಿ ಕೋಳಿ ಪಡೆಯಬೇಕಾದ ಮಹಿಳೆಯರು ಗುಂಪು ಗುಂಪಾಗಿ ಕೋಳಿ ಪಡೆಯಲು ಮುಂದಾದಾಗ ನೂಕು ನುಗ್ಗಲು ಉಂಟಾಯಿತು. ಈ ವೇಳೆ ಸ್ಥಳದಲ್ಲಿದ್ದವರು ಕೋಳಿಗಳಿದ್ದ ಬಾಕ್ಸ್‌ಗಳನ್ನು ಎತ್ತಿಕೊಂಡು ಹೋದರು.

ಕ್ಷೇತ್ರದ ಅಭಿವೃದ್ಧಿಗೆ 500 ಕೋಟಿ ಅನುದಾನ

ಸಚಿವನಾಗಿ ಅಧಿಕಾರ ವಹಿಸಿಕೊಂಡು ವರ್ಷ ಕಳೆಯದಿದ್ದರೂ, ಕ್ಷೇತ್ರದ ಅಭಿವೃದ್ಧಿಗೆ 500 ಕೋಟಿ ರೂ. ಮಂಜೂರು ಮಾಡಿಸಿದ್ದೇನೆ. ಮೂಗೂರು ಮಲ್ಟಿ ವಿಲೇಜ್ ಕುಡಿಯುವ ನೀರಿನ ಯೋಜನೆಗೆ 100 ಕೋಟಿ, ದೊಡ್ಡೆಬಾಗಿಲು ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗೆ 34 ಕೋಟಿ, ತುರುಗನೂರು ನೀರಾವರಿ ಯೋಜನೆಗೆ 100 ಕೋಟಿ, ಎಸ್‌ಸಿ/ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ 100 ಕೋಟಿ ರೂ. ಹಾಗೂ ರಸ್ತೆ ಮತ್ತು ಗ್ರಾಮೀಣಾಭಿವೃದ್ಧಿಗೆ 75 ರಿಂದ 100 ಕೋಟಿ ರೂ. ಮಂಜೂರು ಮಾಡಿಸಿದ್ದೇನೆ.

– ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಕೆಡಿಪಿ ಸದಸ್ಯ ಸುನೀಲ್ ಬೋಸ್, ಕುಕ್ಕುಟ ಮಹಾಮಂಡಲದ ಅಧ್ಯಕ್ಷ ಚಂದ್ರಶೇಖರ್, ತಾಪಂ ಮಾಜಿ ಅಧ್ಯಕ್ಷರಾದ ಎಂ.ಮಲ್ಲಿಕಾರ್ಜುನಸ್ವಾಮಿ, ಉಮೇಶ್, ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್, ನರಸಿಂಹ ಮಾದನಾಯಕ, ಗಣೇಶ್, ಆಪ್ತ ಸಹಾಯಕ ಲಕ್ಷ್ಮೀನಾರಾಯಣ, ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಎಂ.ಮಧು ಕುಮಾರ್, ತಹಸೀಲ್ದಾರ್ ಸುರೇಶ್ ಆಚಾರ್, ಪಶುಪಾಲನ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಡಾ.ನಾಗರಾಜು, ಮುಖ್ಯ ಪಶು ವೈದ್ಯಾಧಿಕಾರಿ (ಆಡಳಿತ)ಡಾ.ಲಿಂಗರಾಜು, ಜಾನುವಾರು ಅಭಿವೃದ್ಧಿ ಅಧಿಕಾರಿ ಡಿ.ಶಿವಣ್ಣ ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಡಿ.ಪ್ರಕಾಶ್, ಶಿವಮಲ್ಲಪ್ಪ, ಕುಕ್ಕಟ ಮಹಾಮಂಡಲದ ನಿರ್ದೇಶಕ ಡಾ.ನಂಜೇಶ್, ಮಹಿಳಾ ಘಟಕದ ಅಧ್ಯಕ್ಷೆ ಲತಾ ಜಗದೀಶ್, ವೀಣಾ ಶಿವಕುಮಾರ್ ಮತ್ತಿತರರಿದ್ದರು.

ಪಡುವಾರಹಳ್ಳಿ ಗ್ರಾಮ ದೇವತೆ 'ಜೋಡಿ ಮಾರಮ್ಮ' ಜಾತ್ರಾ ಮಹೋತ್ಸವ ಸಂಭ್ರಮ

● ಪ್ರತಿ ವರ್ಷದಂತೆ ಗ್ರಾಮಸ್ಥರಿಂದ ಭಕ್ತಿಭಾವದ ಆಚರಣೆ ● ಸಾವಿರಾರು ಭಕ್ತರಿಂದ ದೇವಿಗೆ ವಿಶೇಷ ಪೂಜೆ





ಪಡುವಾರಹಳ್ಳಿ(ವಿನಾಯಕನಗರ) ಗ್ರಾಮ ದೇವತೆ 'ಜೋಡಿ ಮಾರಮ್ಮ' ಜಾತ್ರಾ ಮಹೋತ್ಸವ ಸೋಮವಾರ ವೈಭವಯುತವಾಗಿ ನೆರವೇರಿತು.

ಮೈಸೂರು, ಮಾ.11(ಎಂಕೆ)– ಮೈಸೂರಿನ ಪಡುವಾರಹಳ್ಳಿ(ವಿನಾಯಕ ನಗರ) ಗ್ರಾಮ ದೇವತೆ 'ಜೋಡಿ ಮಾರಮ್ಮ' ಜಾತ್ರಾ ಮಹೋತ್ಸವ ಅಪಾರ ಭಕ್ತ ಸಮೂಹದ ನಡುವೆ ವೈಭವಯುತವಾಗಿ ನೆರವೇರಿತು.

ವಿಶೇಷ ಪೂಜಾ ಕೈಂಕರ್ಯದೊಂದಿಗೆ ಮಾ.9ರ ಮಧ್ಯರಾತ್ರಿ 2 ಗಂಟೆಯಿಂದ ದೇವಿಗೆ ವಿಶೇಷ ಅಲಂಕಾರದೊಂದಿಗೆ ಆರಂಭಗೊಂಡ ಜೋಡಿ ಮಾರಮ್ಮ ಜಾತ್ರಾ ಉತ್ಸವದಲ್ಲಿ ಭಾನುವಾರ(ಮಾ.10) ಬೆಳಗ್ಗೆ 'ಬೇಡಿಕೊಂಡಿದ್ದು ಈಡೇರಿದರೆ ಬಾಳೆ ಗೊನೆ ತಂದು ಕಟ್ಟುತ್ತೇನೆ' ಎಂದು ಹರಕೆ ಕಟ್ಟಿಕೊಳ್ಳುವ ಸಂಪ್ರದಾಯದಂತೆ ನಂಜನಗೂಡು ರಸಬಾಳೆ, ಪಚ್ಚಬಾಳೆ, ಏಲಕ್ಕಿಬಾಳೆ ಗೊನೆಗಳನ್ನು ತಂದು ಅರ್ಚಕರ ಮೂಲಕ ಕಟ್ಟಿಸಿ ಭಕ್ತರು ಹರಕೆ ತೀರಿಸಿದರು.

ಅಂದು ಮಧ್ಯರಾತ್ರಿ 2 ಗಂಟೆಯಿಂದ ಬೆಳಗಿನ ಜಾವದವರೆಗೂ ದೇವಿಗೆ ತಂಬಿಟ್ಟು ಆರತಿ(ತಂಪು ಮೆರವಣಿಗೆ) ನಡೆಯಿತು. ತಂಬಿಟ್ಟು ಮೆರವಣಿಗೆಯಲ್ಲಿ ಸಾವಿರಾರು ಮಹಿಳೆಯರು, ಹೆಣ್ಣು ಮಕ್ಕಳು ಭಾಗವಹಿಸಿ ಪ್ರಾರ್ಥನೆ ಸಲ್ಲಿಸಿದರು. ಹಾಗೆಯೇ ಮನೆ ಮುಂದೆ ಆತ್ಯಾಕರ್ಷಕ ರಂಗೋಲಿಗಳನ್ನು ಬಿಡಿಸಿ ಗಮನ ಸೆಳೆದರು.

ಜಾತ್ರೆಯ 3ನೇ ದಿನವಾದ ಸೋಮವಾರ(ಮಾ.11) ಮಧ್ಯಾಹ್ನ 3ರಿಂದ ಸಂಜೆ 7ರವರೆಗೆ ಹರಕೆ ಕಟ್ಟಿಕೊಂಡ ಸಾವಿರಾರು ಜನರು ಬಾಯಿ ಬೀಗದ ಮೆರವಣಿಗೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು. ಪಡುವಾರಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸಾಗಿದ ದೇವಿಯ ಉತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗಿಯಾಗಿದ್ದರು. ಮೆರವಣಿಗೆಯಲ್ಲಿ ಪಡುವಾರಹಳ್ಳಿ (ವಿನಾಯಕ ನಗರ) ಗ್ರಾಮಾಭ್ಯುದಯ ಟ್ರಸ್ಟ್‌ನ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷರಾದ ರಾಮಣ್ಣ ಮತ್ತು ಸ್ವಾಮಿ, ಕಾರ್ಯದರ್ಶಿ ಎಂ.ಭೈರಪ್ಪ, ಸಹ ಕಾರ್ಯದರ್ಶಿ ಬಿ.ಉಗ್ರಯ್ಯ, ಜಂಟಿ ಕಾರ್ಯದರ್ಶಿ ಎನ್.ರಾಮಸ್ವಾಮಿ, ಖಜಾಂಚಿ ಎಂ.ಸೋಮಣ್ಣ, ಸಂಚಾಲಕ ಇ.ಲೋಕೇಶ್ವರ, ಪಡುವಾರಹಳ್ಳಿ ರಾಮಕೃಷ್ಣ, ಸಿ.ಡಿ.ಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಚಿಕ್ಕವೆಂಕಟ್ ಸೇರಿದಂತೆ ಟ್ರಸ್ಟ್‌ನ ಸದಸ್ಯರು, ಗ್ರಾಮದ ಮುಖಂಡರು ಭಾಗವಹಿಸಿದ್ದರು.

ಕುರುಕ್ಷೇತ್ರ ನಾಟಕ ಪ್ರದರ್ಶನ: ರಾತ್ರಿ 9 ಗಂಟೆಯಿಂದ ಜೋಡಿ ಮಾರಮ್ಮ ರಂಗಮಂಟಪದಲ್ಲಿ 'ಕುರುಕ್ಷೇತ್ರ' ನಾಟಕ ಪ್ರದರ್ಶನ ನಡೆಯಿತು. ಬೆಳಗಿನ ಜಾವದವರೆಗೂ ನಡೆದ ನಾಟಕವನ್ನು ಪಡುವಾರಹಳ್ಳಿ ಗ್ರಾಮಸ್ಥರು ಸೇರಿದಂತೆ ಅಕ್ಕ–ಪಕ್ಕ ಬಡಾವಣೆಯಿಂದ ಬಂದಿದ್ದ ಸಾವಿರಾರು ಮಂದಿ ವೀಕ್ಷಣೆ ಮಾಡಿದರು.

ಬಾಡೂಟ: ಮೂರು ದಿನಗಳ ಪಡುವಾರಹಳ್ಳಿ ಗ್ರಾಮದೇವತೆ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವದಲ್ಲಿ ದೇವಿಯ ಕೃಪೆಗೆ ಪಾತ್ರರಾಗಲು ಬೇರೆ ಬೇರೆ ಗ್ರಾಮಗಳಿಂದ ಆಗಮಿಸಿದ್ದ ಸಂಬಂಧಿಕರು, ಸ್ನೇಹಿತರಿಗೆ ನಾಳೆ(ಮಾ.12) ಬಾಡೂಟದ ಆತಿಥ್ಯ ನೀಡಲಾಗುವುದು.

ಮಾ. 15ಕ್ಕೆ 'ಹೈಡ್ ಅಂಡ್ ಸೀಕ್' ಚಿತ್ರ ಬಿಡುಗಡೆ

ಮೈಸೂರು, ಮಾ.11(ಎಂಟಿವೈ)– ಸಸ್ಪೆನ್ಸ್ ಹಾಗೂ ಥ್ರಿಲ್ಲರ್ ಕಥಾ ಹಂದರವುಳ್ಳ 'ಹೈಡ್ ಅಂಡ್ ಸೀಕ್' ಕನ್ನಡ ಚಲನಚಿತ್ರ ಮಾ.15ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ನಿರ್ದೇಶಕ ಪುನೀತ್ ನಾಗರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಯಕ ನಟರಾಗಿ ಅನೂಪ್ ರೇವಣ್ಣ ಹಾಗೂ ನಾಯಕಿಯಾಗಿ ಧನ್ಯ ರಾಮ್‌ಕುಮಾರ್ ಅಭಿನಯಿಸಿರುವ 'ಹೈಡ್ ಅಂಡ್ ಸೀಕ್' ಚಲನಚಿತ್ರ ಸಸ್ಪೆನ್ಸ್, ಥ್ರಿಲ್ಲರ್ ಆಧಾರಿತ ಒಂದು ಅಪಹರಣದ ಸುತ್ತಲಿನ ಕಥೆಯ ಚಲನಚಿತ್ರವಾಗಿದೆ. ಐದು ಪ್ರಮುಖ ಪಾತ್ರಗಳ ಸುತ್ತಮುತ್ತ ಚಲನಚಿತ್ರ ಸಾಗುತ್ತದೆ. ಮಾಗಡಿ, ಚಿಕ್ಕಮಗಳೂರು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣವಾಗಿದೆ. ಎರಡು ಉತ್ತಮ ಹಾಡುಗಳಿದ್ದು, ಸಂಪೂರ್ಣ ಕಾಲ್ಪನಿಕ ಚಿತ್ರವಾಗಿದೆ. ಹೀಗಾಗಿ ಸಿನಿಮಾ ಪ್ರೇಕ್ಷಕರು ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ನಾಯಕ ನಟ ಅನೂಪ್ ರೇವಣ್ಣ, ನಟಿ ಧನ್ಯ ರಾಮ್‌ಕುಮಾರ್ ಹಾಗೂ ಚಿತ್ರತಂಡದ ಇನ್ನಿತರರು ಇದ್ದರು.